
# ಭಾಗ – 1







## 1.1 ಕೈಪಿಡಿಯ ಬಗ್ಗೆ

ಈ ತರಬೇತಿ ಕೈಪಿಡಿಯಲ್ಲಿ ಮೂರು ಭಾಗಗಳಿವೆ, ಮೊದಲನೆಯ ಭಾಗದಲ್ಲಿ ಕೈಪಿಡಿಯ ಬಗ್ಗೆ ಕೆಲವು ಲೇಖನಗಳು ಇವೆ. ಎರಡನೆಯ ಭಾಗದಲ್ಲಿ ಬಾಲಕಾರ್ಮಿಕರ ಪೋಷಕರಿಗೆ ತರಬೇತಿ ಕೊಡುವ ಬಗ್ಗೆ ತರಬೇತಿ ಚಟುವಟಿಕೆಗಳು ಇವೆ. ಮೂರನೆಯ ಭಾಗದಲ್ಲಿ ತರಬೇತಿ ಚಟುವಟಿಕೆಗಳಿಗೆ ಹೆಚ್ಚಿನ ಮಾಹಿತಿಗಳನ್ನು ಒದಗಿಸುವ ಲೇಖನಗಳಿವೆ.

ಕೈಪಿಡಿಯಲ್ಲಿ 8 ತರಬೇತಿ ಚಟುವಟಿಕೆಗಳು ಇವೆ. ಅವುಗಳಲ್ಲಿ 6 ಚಟುವಟಿಕೆಗಳು 60 ನಿಮಿಷಗಳ ಅವಧಿಯ ಚಟುವಟಿಕೆಗಳಾಗಿದ್ದು, ಒಂದು 45 ನಿಮಿಷಗಳು ಮತ್ತು ಎರಡು 30 ನಿಮಿಷಗಳ ಅವಧಿಯ ಚಟುವಟಿಕೆಗಳಾಗಿವೆ. ಶಿಬಿರಾರ್ಥಿಗಳ ನೇರ ಭಾಗವಹಿಸುವಿಕೆಗೆ ಅನುಕೂಲವಾಗುವಂತೆ ತರಬೇತಿ ಕೈಪಿಡಿ ತಯಾರಿಸಲಾಗಿದೆ. ತರಬೇತಿ ಕೈಪಿಡಿಯಲ್ಲಿ ಬಹಳಷ್ಟು ಚಿತ್ರಗಳಿದ್ದು, ಅವುಗಳನ್ನು ತರಬೇತಿದಾರರು ತರಬೇತಿಯಲ್ಲಿ ಶಿಬಿರಾರ್ಥಿಗಳಿಗೆ ವಿಷಯಗಳನ್ನು ಮನವರಿಕೆ ಮಾಡಲು ಉಪಯೋಗಿಸಬಹುದಾಗಿದೆ.

**ತರಬೇತಿ ಕೈಪಿಡಿಯ ಉದ್ದೇಶಗಳು**

- ಪೋಷಕರಿಗೆ ಬಾಲಕಾರ್ಮಿಕತೆಯ ಬಗ್ಗೆ ತರಬೇತಿ ಕೊಡಲು ಅನುಕೂಲವಾಗುವುದು
- ಪೋಷಕರಿಗೆ ಬಾಲಕಾರ್ಮಿಕ ಸಮಸ್ಯೆಯ ಬಗ್ಗೆ ಅವರ ಮಾಹಿತಿ ಮತ್ತು ಜ್ಞಾನವನ್ನು ಹೆಚ್ಚಿಸುವುದು
- ಪೋಷಕರಿಗೆ ಬಾಲಕಾರ್ಮಿಕತೆ ಅವರ ಮಕ್ಕಳ ಬೆಳವಣಿಗೆಗೆ ಹಾನಿಕಾರಕ ಎಂಬುದನ್ನು ಮನವರಿಕೆ ಮಾಡಿಕೊಡುವುದು
- ತಮ್ಮ ಮಕ್ಕಳನ್ನು ಕೆಲಸದಿಂದ ಬಿಡಿಸಿ ಶಾಲೆಗೆ ಕಳುಹಿಸಲು ಮನವರಿಕೆ ಮಾಡಿಕೊಡುವುದು
- ಬಾಲಕಾರ್ಮಿಕತೆ ಬಗ್ಗೆ ಅವಶ್ಯವಾದ ಮಾಹಿತಿಯನ್ನು ಒದಗಿಸುವುದು
- ಬಾಲಕಾರ್ಮಿಕತೆಯ ಕಾರಣಗಳನ್ನು ಹಾಗೂ ಅದರ ಪರಿಣಾಮವನ್ನು ಮನದಟ್ಟು ಮಾಡುವುದು
- ಅವರಿಗೆ "ಮಗು / ಮಕ್ಕಳು" "ಬಾಲಕಾರ್ಮಿಕರು" "ಅಪಾಯಕಾರಿ ಕೆಲಸ" "ನಿಕೃಷ್ಟ ಕೆಲಸ" ಮುಂತಾದ ಶಬ್ದಗಳ ಅರ್ಥ ಮಾಡಿಕೊಡುವುದು

ಪ್ರತಿಯೊಂದು ತರಬೇತಿ ಚಟುವಟಿಕೆಯನ್ನು ಹಲವಾರು ಉಪಚಟುವಟಿಕೆಗಳಾಗಿ ವಿಂಗಡಿಸಲಾಗಿದೆ. ಪ್ರತಿಯೊಂದು ತರಬೇತಿ ಚಟುವಟಿಕೆ ಈ ಕೆಳಗಿನ ಭಾಗಗಳನ್ನು ಒಳಗೊಂಡಿದೆ.

- ಶೀರ್ಷಿಕೆ
- ಅವಧಿ
- ಉದ್ದೇಶಗಳು
- ಪಠ್ಯ
- ವಿಧಾನಗಳು
- ಪರಿಕರಗಳು
- ಪ್ರಕ್ರಿಯೆ / ಚಟುವಟಿಕೆ
- ನಿರೀಕ್ಷಿತ ಫಲಿತಾಂಶ
- ಸಫಲತೆಗೆ ಸೂಚ್ಯಂಕಗಳು
- ಸೂಚನೆಗಳು

15 ಪ್ರಶ್ನೆಗಳಿರುವ ಒಂದು ಕ್ವಿಜ್ ತಯಾರಿಸಿ ಸೇರಿಸಲಾಗಿದೆ.



## 1.2 ತರಬೇತಿ ವ್ಯವಸ್ಥಾಪಕರಿಗೆ ಸೂಚನೆಗಳು

1. ಸುವ್ಯವಸ್ಥೆಯನ್ನು ಮಾಡಬೇಕು.
2. ಬಾಲಕಾರ್ಮಿಕತೆಯ ಮೇಲೆ ಇರುವ ವಿಡಿಯೋ ಚಿತ್ರಗಳನ್ನು ನೊಂದಣಿ ಮತ್ತು ಊಟದ ವಿರಾಮಗಳಲ್ಲಿ ಪ್ರದರ್ಶಿಸಬೇಕು.
3. ನೊಂದಣಿ ಪ್ರದೇಶದಲ್ಲಿ ಮತ್ತು ತರಬೇತಿ ಕೊಠಡಿಯಲ್ಲಿ ಬಾಲಕಾರ್ಮಿಕತೆಗೆ ಸಂಬಂಧಪಟ್ಟ ಪೋಸ್ಟರ್, ಪೋಟೋಗಳನ್ನು ಪ್ರದರ್ಶಿಸಬೇಕು.
4. ಭಾಷೆ ಮತ್ತು ವಿಷಯದ ಮೇಲೆ ಹಿಡಿತ ಇರುವವರನ್ನು ಸಂಪನ್ಮೂಲ ವ್ಯಕ್ತಿಗಳನ್ನಾಗಿ ಆಹ್ವಾನಿಸಬೇಕು.
5. ಸಮಯದ ಪಾಲನೆ ಅತ್ಯಂತ ಅವಶ್ಯಕ. ಇದು ಒಂದು ದಿನದ ತರಬೇತಿ ಆದುದರಿಂದ ಸಮಯವನ್ನು ಉತ್ತಮವಾಗಿ ಉಪಯೋಗಿಸಿಕೊಳ್ಳಬೇಕು.
6. ಗುಂಪು ಚರ್ಚೆಗೆ ಮೊದಲೇ ವ್ಯವಸ್ಥೆ ಮಾಡಿಕೊಳ್ಳಬೇಕು. ನೊಂದಣಿಯ ಮಾಹಿತಿಯ ಪ್ರಕಾರ ಶಿಬಿರಾರ್ಥಿಗಳನ್ನು ಉಪಗುಂಪುಗಳನ್ನಾಗಿ ವಿಂಗಡಿಸಬೇಕು. ಪ್ರತಿ ಅವಧಿಯಲ್ಲಿ ಗುಂಪುಗಳನ್ನು ರಚಿಸಲು ಹೋಗಬಾರದು. ಸಾಧ್ಯವಿದ್ದರೆ ಪ್ರತಿಗುಂಪಿಗೆ ಪ್ರತ್ಯೇಕ ಕೊಠಡಿಗಳನ್ನು ಒದಗಿಸಬಹುದು ಗುಂಪು ಚರ್ಚೆಗೆ ಅವಶ್ಯಕವಾದ ವಸ್ತುಗಳನ್ನು ಮೊದಲೆ ಸಿದ್ಧಗೊಳಿಸಿಕೊಂಡಿರಬೇಕು.
7. ತರಬೇತಿಯ ಸೂಚನೆಗಳನ್ನು ಕನಿಷ್ಠ 8 ದಿನಗಳ ಮೊದಲು ಶಿಬಿರಾರ್ಥಿಗಳಿಗೆ ತಲುಪಿಸಬೇಕು.
8. ತರಬೇತಿ ಸ್ಥಳವನ್ನು ಶುಚಿಯಾಗಿ ಇಡುವುದು ಅವಶ್ಯಕ
9. ಕುಡಿಯುವ ನೀರಿನ ವ್ಯವಸ್ಥೆ ಮತ್ತು ಶೌಚಾಲಯದ ವ್ಯವಸ್ಥೆ ಶುಚಿಯಾಗಿ ಇರಬೇಕು
10. ಉತ್ತಮವಾದ ಮತ್ತು ಆರೋಗ್ಯಕರವಾದ ಆಹಾರದ ವ್ಯವಸ್ಥೆ ಮಾಡಬೇಕು. ಆಹಾರದ ಸರಬರಾಜನ್ನು ಸಮಯಕ್ಕೆ ಸರಿಯಾಗಿ ಮಾಡಬೇಕು. ಚಹಾ ಮತ್ತು ಕಾಫಿಯನ್ನು ಸರಿಯಾದ ಕಪ್ ಮತ್ತು ಸಾಸರ್‌ನಲ್ಲಿ ಕೊಡಬೇಕು. ಯಾವುದೇ ಕಾರಣಕ್ಕೂ ಪ್ಲಾಸ್ಟಿಕ್ ಅಥವಾ ಇತರ ಪ್ಲಾಸ್ಟಿಕ್ ಪರಿಕರಗಳನ್ನು ಉಪಯೋಗಿಸಬಾರದು.
11. ಬರೆಯುವ ಪುಸ್ತಕ, ಫೈಲ್ ಮುಂತಾದವುಗಳ ಮೇಲೆ ತರಬೇತಿಯ ಬಗ್ಗೆ, ದಿನಾಂಕ ಇತ್ಯಾದಿ ಮುದ್ರಿಸಬೇಕು. ಇದರ ಜೊತೆಯಲ್ಲಿ ಸಾಧ್ಯವಾದರೆ ಬಾಲಕಾರ್ಮಿಕತೆಗೆ ಸಂಬಂಧಪಟ್ಟ ಧ್ಯೇಯ ವಾಕ್ಯಗಳನ್ನು ಮುದ್ರಿಸಬಹುದು.
12. ತರಬೇತಿಗೆ ಸರಿಯಾದ ಪ್ರಚಾರ ಕೊಡಬೇಕು. ಇದರಿಂದ ಬಾಲಕಾರ್ಮಿಕತೆಯ ನಿರ್ಮೂಲನ ಕಾರ್ಯಕ್ರಮಕ್ಕೆ ಒತ್ತು ಸಿಗುವುದು.
13. ಉದ್ಘಾಟನಾ ಸಮಾರಂಭದಲ್ಲಿ ಯಾರು ಅತಿಥಿಗಳನ್ನು ಕಾರ್ಯಕ್ರಮಕ್ಕೆ ಆಹ್ವಾನಿಸುತ್ತಾರೆ, ಯಾರು ಸ್ವಾಗತ ಮಾಡುತ್ತಾರೆ, ಯಾರು ಪ್ರಾರ್ಥನೆ ಮಾಡುತ್ತಾರೆ, ಯಾರು ಪ್ರಸ್ತಾವನೆ ಮತ್ತು ವಂದನಾರ್ಪಣೆ ಮಾಡುತ್ತಾರೆ ಎಂಬುದು ಮೊದಲೇ ನಿರ್ಧಾರವಾಗಿರಬೇಕು. ಯಾವುದೇ ರೀತಿಯ ಆಭಾಸಕ್ಕೆ ಎಡೆಮಾಡಿ ಕೊಡಬಾರದು. ಪ್ರತಿಯೊಬ್ಬರು ಈ ಬಗ್ಗೆ ಸಾಕಷ್ಟು ತಯಾರಿ ಮಾಡಿಕೊಳ್ಳುವುದು ಅವಶ್ಯಕ. ಸಭೆಯಲ್ಲಿ ಭಾಗವಹಿಸುವ ಅತಿಥಿಗಳಿಗೆ, ಬಾಲಕಾರ್ಮಿಕತೆಯ ನಿವಾರಣೆಯ ಬಗ್ಗೆ ಇರುವ ಮಾಹಿತಿ ಪತ್ರಗಳನ್ನು ಒದಗಿಸಬೇಕು.



14. ತರಬೇತಿಯನ್ನು ಶಾಂತವಾದ ಪ್ರದೇಶದಲ್ಲಿ ವ್ಯವಸ್ಥೆ ಮಾಡಬೇಕು.
15. ತರಬೇತಿಯ ಕೊಠಡಿಯಲ್ಲಿ ಶಿಬಿರಾರ್ಥಿಗಳಿಗೆ ಅವಶ್ಯಕವಾದಷ್ಟು ಜಾಗವಿರಬೇಕು.
16. ಅನುಕೂಲಕರವಾದ ಪಿಠೋಪಕರಣಗಳು ಇರುವುದು ಅವಶ್ಯಕ.
17. ಉತ್ತಮವಾದ ಗಾಳಿ ಮತ್ತು ಬೆಳಕಿನ ವ್ಯವಸ್ಥೆ ಇರಬೇಕು.
18. ತರಬೇತಿಗೆ ಅವಶ್ಯಕವಾದ ಕರಿಹಲಗೆ, ಬಿಳಿಬೋರ್ಡು, ಸೀಮೆಸುಣ್ಣ, ಮಾರ್ಕರ್, ಕಂದುಬಣ್ಣದ ಹಾಳೆಗಳು, ಬಿಳಿಹಾಳೆಗಳು, ಡ್ರಾಯಿಂಗ್ ಹಾಳೆಗಳು, ಕತ್ತರಿ, ಸೆಲೋಟೇಪ್, ಎಲ್.ಸಿ.ಡಿ, ಓ.ಹೆಚ್.ಪಿ ಪ್ರೊಜೆಕ್ಟರ್ ಇತ್ಯಾದಿ ವ್ಯವಸ್ಥೆ ಸಿದ್ಧಗೊಳಿಸಿಸರಬೇಕು.
19. ವ್ಯವಸ್ಥಾಪಕರು, ತರಬೇತಿ ಕೇಂದ್ರಕ್ಕೆ ಹಿಂದಿನ ದಿನವೇ ಹೋಗಿ ವ್ಯವಸ್ಥೆಯ ಪರಿವೀಕ್ಷಣೆ ನಡೆಸಿ ಅಗತ್ಯವಿರುವ ಎಲ್ಲಾ ವ್ಯವಸ್ಥೆಗಳನ್ನು ಮಾಡಿಕೊಳ್ಳಬೇಕು.



## 1.3 ತರಬೇತಿಯಲ್ಲಿ ಉಪಯೋಗಿಸಿದ ವಿಧಾನಗಳು

### 1.3.1 ಉಪನ್ಯಾಸ

ಉಪನ್ಯಾಸವನ್ನು, ಹೊಸ ವಿಚಾರಗಳನ್ನು ಮಂಡಿಸಲು, ತರಬೇತಿಯ ಅವಧಿಯನ್ನು ಆರಂಭಿಸಲು, ಹೊಸ ವಿಷಯ ಅಥವಾ ಟಾಪಿಕ್‌ಗಳನ್ನು ಮಂಡಿಸಲು ಉಪಯೋಗಿಸಲಾಗಿದೆ.

### 1.3.2 ಪ್ರಶ್ನೆಗಳು

ಇದನ್ನು ಶಿಬಿರಾರ್ಥಿಗಳನ್ನು ಆಸಕ್ತರನ್ನಾಗಿ ಇಡಲು ಮತ್ತು ಚರ್ಚೆಯನ್ನು ಆರಂಭಿಸಲು ಉಪಯೋಗಿಸಲಾಗುವುದು. ಪ್ರಶ್ನೆಗಳನ್ನು ಕೇಳುವಾಗ ಹೆದರಿಸುವ ಅಥವಾ ಕಿರಿಕಿರಿ ಉಂಟು ಮಾಡುವ ಹಾಗೆ ಕೇಳಬಾರದು. ಶಿಬಿರಾರ್ಥಿಗಳಿಗೆ ಅವರನ್ನು ಪರೀಕ್ಷೆ ಮಾಡಲು ಪ್ರಶ್ನೆ ಕೇಳಾಗುತ್ತಿದೆ ಎಂಬ ಭಾವನೆ ಬರಬಾರದು.

### 1.3.3 ಉಪಗುಂಪುಗಳಲ್ಲಿ ಚರ್ಚೆ

ಎಲ್ಲಾ ಶಿಬಿರಾರ್ಥಿಗಳು ಸಕ್ರಿಯವಾಗಿ ಭಾಗವಹಿಸಲು ಇದು ಸಹಕಾರಿ ಆಗುವುದು. ಇದು ಭಾಗವಹಿಸುವಿಕೆಯ ಕಲಿಕೆಗೆ ಸಹಾಯ ಮಾಡುವುದು.

### 1.3.4 ಸಣ್ಣ ಗುಂಪು ಚಟುವಟಿಕೆ

ಇದು ಸಹ ಒಂದು ಸಕ್ರಿಯ ವಿಧಾನ.

* ಇದು ಸಹಕಾರಿ ತತ್ವದಲ್ಲಿ ಕೆಲಸ ಮಾಡಲು ಅನುವು ಮಾಡಿಕೊಡುವುದು.
* ತಮ್ಮನ್ನು ನೋಡಲಾಗುತ್ತಿದೆ ಎಂಬ ಮನೋಭಾವದೊಂದಿಗೆ ಪ್ರಕ್ರಿಯೆಯಲ್ಲಿ ಭಾಗವಹಿಸುವರು.
* ಇದು ಶಿಬಿರಾರ್ಥಿಗಳಿಗೆ ಅನ್ವೇಷಣೆ ಮಾಡಲು, ಚರ್ಚಿಸಲು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಲು ಅವಕಾಶ ಕಲ್ಪಿಸುವುದು.
* ಸ್ವಲ್ಪ ಕಡಿಮೆ ಧ್ಯೇಯದ ಸದಸ್ಯರಿಗೆ ಭಾಗವಹಿಸಲು ಆಸ್ಪದ ಮಾಡಿಕೊಡುವುದು.

### 1.3.5 ಪಾತ್ರಾಭಿನಯ

ಇದು ಸಹ ಶಿಬಿರಾರ್ಥಿಗಳಿಗೆ ಭಾಗವಹಿಸುವಿಕೆಯನ್ನು ಖಾತ್ರಿ ಪಡಿಸುವ ಒಂದು ಪ್ರಕ್ರಿಯೆ. ಯಾವುದೇ ಘಟನೆಯನ್ನು ಪಾತ್ರಾಭಿನಯವಾಗಿ ಮಾರ್ಪಡಿಸಬಹುದು. ಇದು ಶಿಬಿರಾರ್ಥಿಗಳಿಗೆ ವಿಷಯವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಸಹಾಯ ಮಾಡುವುದು.

### 1.3.6 ಕ್ರಿಯಾ ಯೋಜನೆ

ಇದನ್ನು ಗುಂಪುಚಟುವಟಿಕೆಯಾಗಿ ಅಥವಾ ವ್ಯಕ್ತಿಗತ ಚಟುವಟಿಕೆಯಾಗಿ ಉಪಯೋಗಿಸಬಹುದು. ಇದು ಶಿಬಿರಾರ್ಥಿಗಳಿಗೆ ಹೆಚ್ಚು ಯೋಚಿಸಲು ಆಸ್ಪದ ಮಾಡಿಕೊಡುವುದು. ಇದು ಶಿಬಿರಾರ್ಥಿಗಳಿಗೆ ಹೊಸ ಹೊಸ ತಂತ್ರಗಳನ್ನು ರೂಪಿಸಿಕೊಳ್ಳಲು ಸಹಾಯ ಮಾಡುವುದು.

### 1.3.7 ಕೋರ್ಸಿನ ಸಭೆ

ಕೋರ್ಸಿನ ಸಭೆ ನಡೆಸುವುದರಿಂದ ಶಿಬಿರಾರ್ಥಿಗಳಿಗೆ ಕೋರ್ಸಿನ ಬಗ್ಗೆ ಸರಿಯಾದ ಮಾಹಿತಿ ದೊರಕುತ್ತದೆ.


### 1.3.8 ನಿರ್ದೇಶಿತ ಮಾತುಕತೆ

ಇದು ಶಿಬಿರಾರ್ಥಿಗಳಿಗೆ ಹೊಸ ವಿಚಾರಗಳನ್ನು ಹೊರತರಲು ಸಹಕಾರಿಯಾಗುತ್ತದೆ. ತರಬೇತುದಾರರು ನಿರಂತರವಾಗಿ ನಿರ್ದೇಶನ ಕೊಡುತ್ತಿರುತ್ತಾರೆ. ನಿರ್ದೇಶನಗಳ ಮೂಲಕ ಶಿಬಿರಾರ್ಥಿಗಳಿಂದ ಹೊಸ ಹೊಸ ವಿಚಾರಗಳನ್ನು ಹೊರತರಲು ಸಹಾಯವಾಗುವುದು.

### 1.3.9 ಮೆದುಳುಮಂಥನ

ಇದರಲ್ಲಿ ಶಿಬಿರಾರ್ಥಿಗಳು ಒಂದೇ ವಿಷಯದ ಮೇಲೆ ತಮ್ಮ ತಮ್ಮ ಅನಿಸಿಕೆಗಳನ್ನು ವ್ಯಕ್ತ ಪಡಿಸಲು ಅವಕಾಶ ಇದೆ. ಶಿಬಿರಾರ್ಥಿಗಳು ತಮ್ಮ ಮನಸ್ಸಿಗೆ ಈ ಬಗ್ಗೆ ಮೊದಲು ಬಂದ ವಿಚಾರವನ್ನು ತಿಳಿಸಲು ಶಿಬಿರಾರ್ಥಿಗಳಿಗೆ ಪ್ರೋತ್ಸಾಹ ನೀಡಬೇಕು.






## 1.4 ತರಬೇತುದಾರರ ಕೆಲಸ ಕಾರ್ಯಗಳು

- ತರಬೇತುದಾರರಿಗೆ ಗುಂಪಿನ ಸಂಯೋಜನೆಯ ಬಗ್ಗೆ ಅರಿವಿದ್ದು, ಎಲ್ಲಾ ಶಿಬಿರಾರ್ಥಿಗಳಿಗೆ ಸಮಾನ ಅವಕಾಶ ಒದಗಿಸಬೇಕು.
- ತರಬೇತುದಾರರು ಎಲ್ಲಾ ಶಿಬಿರಾರ್ಥಿಗಳ ಎಲ್ಲಾ ರೀತಿಯ ನಿಲುವು ಮತ್ತು ಯೋಚನೆಗಳಿಗೆ ಬೆಲೆ ಕೊಡಬೇಕು.
- ತರಬೇತುದಾರರು ಚರ್ಚೆಗಳಿಗೆ ಅವಕಾಶ ಕಲ್ಪಿಸಿಕೊಡಬೇಕು.
- ತರಬೇತುದಾರರು ಮೊದಲು ಚರ್ಚೆಯನ್ನು ಆರಂಭಿಸಬೇಕು. ಅವಧಿಯ ಅಂತ್ಯದಲ್ಲಿ ಚರ್ಚೆಯ ಮುಖ್ಯಾಂಶಗಳನ್ನು ಪುನರ್‌ಮನನ ಮಾಡಬೇಕು.
- ಅವಶ್ಯವಿದ್ದಲ್ಲಿ ಕ್ಷೇತ್ರಭೇಟಿ ಹಾಗು ಅತಿಥಿ ಉಪನ್ಯಾಸಕರ ವ್ಯವಸ್ಥೆ ಮಾಡಬೇಕು.
- ತರಬೇತುದಾರರಿಗೆ ಸಮಯ ಪ್ರಜ್ಞೆ ಇರಬೇಕು. ಅವರು ಸಮಯಕ್ಕೆ ಸರಿಯಾಗಿ ಹಾಜರಿದ್ದು ಇತರರಿಗೆ ಮಾದರಿ ಆಗಬೇಕು.
- ಶಿಬಿರಾರ್ಥಿಗಳ ಅನುಭವದ ಜ್ಞಾನಕ್ಕೆ ಬೆಲೆ ಕೊಡಬೇಕು.
- ತರಬೇತಿದಾರರು ತರಬೇತಿ ಪ್ರಾರಂಭವಾಗುವುದಕ್ಕಿಂತ ಮೊದಲೆ ಸರಿಯಾದ ತಯಾರಿ ಮಾಡಿಕೊಳ್ಳಬೇಕು.
- ತರಬೇತಿದಾರರು ಗುಂಪುಚರ್ಚೆಯನ್ನು ಪ್ರೋತ್ಸಾಹಿಸಬೇಕು.
- ವಿವಿಧ ವಿಷಯಗಳಿಗೆ ಸಂಬಂಧಪಟ್ಟ ಕಿರುಹೊತ್ತಿಗೆ, ಮಾಹಿತಿ ಪತ್ರ ಇತ್ಯಾದಿ ಸಂಗ್ರಹಿಸಿ ಶಿಬಿರಾರ್ಥಿಗಳಿಗೆ ಹಂಚಬೇಕು.
- ತರಬೇತಿ ವೇಳಾಪಟ್ಟಿಯನ್ನು ಶಿಬಿರಾರ್ಥಿಗಳು ಅರ್ಥವಾಡಿಕೊಳ್ಳಲು ಸಹಕರಿಸಬೇಕು.
- ತರಬೇತಿ ಸಂದರ್ಭಗಳಲ್ಲಿ ಅನಾವಶ್ಯಕ ಚರ್ಚೆ, ಮಾತುಕತೆ ಇತ್ಯಾದಿ ನಡೆಯದಂತೆ ನೋಡಿಕೊಳ್ಳಬೇಕು.
- ಹಾಡು, ನಾಟಕ ಇತ್ಯಾದಿಗೆ ಪ್ರೋತ್ಸಾಹ ಕೊಡಬೇಕು.
- ಶಿಬಿರಾರ್ಥಿಗಳು ಪರಸ್ಪರ ಸಮಾಲೋಚಿಸಿ ಕಲಿಯಲು ಪ್ರೋತ್ಸಾಹ ನೀಡಬೇಕು.
- ಶಿಬಿರಾರ್ಥಿಗಳಲ್ಲಿ ಯಾರಾದರೂ ಒಬ್ಬರು, ಇಬ್ಬರು ಅಥವಾ ಒಂದು ಗುಂಪು ಇಡೀ ತರಬೇತಿಯನ್ನು ತಮ್ಮ ಅಧೀನಗೊಳಿಸಿಕೊಳ್ಳುವದಕ್ಕೆ ಪ್ರೋತ್ಸಾಹ ಕೊಡಬಾರದು.
- ಭಾಗವಹಿಸದೇ ಇರುವ ಶಿಬಿರಾರ್ಥಿಗಳನ್ನು ಭಾಗವಹಿಸುವಂತೆ ಪ್ರಚೋದಿಸಬೇಕು.
- ತರಬೇತುದಾರರು ಪ್ರಜಾಸತ್ತಾತ್ಮಕವಾಗಿರಬೇಕು.
- ಶಿಬಿರಾರ್ಥಿಗಳ ಭಾಗವಹಿಸುವಿಕೆಯನ್ನು ಗುರುತಿಸಬೇಕು.
- ಶಿಬಿರಾರ್ಥಿಗಳು ಭಾಗವಹಿಸುವಿಕೆಯಿಂದ ಮತ್ತು ಚರ್ಚೆಯಿಂದ ಹಿಂತೆಗೆಯದಂತೆ ನೋಡಿಕೊಳ್ಳಬೇಕು.





## 1.5 ಮಾದರಿ ವೇಳಾಪಟ್ಟಿ


**ಬಾಲಕಾರ್ಮಿಕ ಪೋಷಕರ ತರಬೇತಿ**
**ತರಬೇತಿ ವಿನ್ಯಾಸ**

ಅವಧಿ: ಒಂದು ದಿನ

ದಿನಾಂಕ:_______________

ಸ್ಥಳ:_______________


| ಕ್ರ.ಸಂ | ಸಮಯ | ಚಟುವಟಿಕೆ | ಕೊಠಡಿ ಅಥವಾ ಸಭಾಂಗಣ | ಚಟುವಟಿಕೆಯ ಜವಾಬ್ದಾರಿ ಹೊಂದಿದ ಸಂಪನ್ಮೂಲ ವ್ಯಕ್ತಿಗಳು/ಅತಿಥಿಗಳು | ಬೇಕಾಗಿರುವ ಸಾಮಗ್ರಿಗಳು |
|---|---|---|---|---|---|
| 1. | ಬೆ.09.00 ರಿಂದ ಬೆ.09.30 | ನೊಂದಣಿ | ಸಭಾಂಗಣ | ಶ್ರೀ/ ಶ್ರೀಮತಿ ________ ಶ್ರೀ/ ಶ್ರೀಮತಿ ________ | ಮೇಜು, ಕುರ್ಚಿ, ತರಬೇತಿ ಸಾಮಗ್ರಿ, ಸೂಚನಾ ಫಲಕ, ನೊಂದಣಿ ಪುಸ್ತಕ |
| 2. | ಬೆ.09.30 ರಿಂದ ಬೆ.10.00 | ಉದ್ಘಾಟನೆ (ಪ್ರಸ್ತಾವನೆಯೊಂದಿಗೆ) | ಸಭಾಂಗಣ | ಪ್ರಾರ್ಥನೆ ________ ಸ್ವಾಗತ ________ ಪ್ರಸ್ತಾವನೆ ________ ಕಾರ್ಯಕ್ರಮದ ಅಧ್ಯಕ್ಷರು ________ ಮುಖ್ಯ ಅತಿಥಿಗಳು 1. ________ 2. ________ ವಂದನಾರ್ಪಣೆ ________ ನಿರೂಪಕರು ________ | ಹೂಗುಚ್ಛ, ಲ್ಯಾಂಪ್, ಮೇಣದ ಬತ್ತಿ, ಬೆಂಕಿಪೊಟ್ಟಣ. |
| 3. | ಬೆ.10.00 ರಿಂದ ಬೆ.11.00 | ತರಬೇತಿ ಚಟುವಟಿಕೆ–2 ಸ್ವ ಪರಿಚಯ | ಸಭಾಂಗಣ | ಶ್ರೀ/ ಶ್ರೀಮತಿ ________ ಶ್ರೀ/ ಶ್ರೀಮತಿ ________ | ಕರಿ ಹಲಗೆ, ಸೀಮೆ ಸುಣ್ಣ, ಕಂದು ಬಣ್ಣದ ಹಾಳೆಗಳು, ಮಾರ್ಕರ್‍ಸ್. |
| 4. | ಬೆ.11.00 ರಿಂದ ಮ.12.00 | ತರಬೇತಿ ಚಟುವಟಿಕೆ–3 ಮಕ್ಕಳನ್ನು ಮತ್ತು ಅವರ ಮೂಲ ಅವಶ್ಯಕತೆಗಳನ್ನು ಅರ್ಥ ಮಾಡಿಕೊಳ್ಳುವುದು | ಸಭಾಂಗಣ | ಸಂಪನ್ಮೂಲ ವ್ಯಕ್ತಿಗಳು ________ ________ ________ | ಕರಿ ಹಲಗೆ, ಸೀಮೆ ಸುಣ್ಣ, ಕಂದು ಬಣ್ಣದ ಹಾಳೆಗಳು, ಮಾರ್ಕರ್‍ಸ್. |
| 5. | ಮ.12.00 ರಿಂದ ಮ.01.00 | ತರಬೇತಿ ಚಟುವಟಿಕೆ–4 ಮಕ್ಕಳು, ಬಾಲಕಾರ್ಮಿಕತೆ, ಬಾಲಕಾರ್ಮಿಕತೆ ಪ್ರಕಾರಗಳು, ಅಪಾಯಕಾರಿ ಬಾಲಕಾರ್ಮಿಕತೆ ಮತ್ತು ಕೆಟ್ಟ ಮಟ್ಟದ ಬಾಲಕಾರ್ಮಿಕತೆ | ಸಭಾಂಗಣ | ಸಂಪನ್ಮೂಲ ವ್ಯಕ್ತಿಗಳು ________ ________ ________ | ಕರಿ ಹಲಗೆ, ಸೀಮೆ ಸುಣ್ಣ, ಕಂದು ಬಣ್ಣದ ಹಾಳೆಗಳು, ಮಾರ್ಕರ್‍ಸ್. |



| | | | | | |
|---|---|---|---|---|---|
| 6. | ಮ.01.00 ರಿಂದ ಮ.02.00 | ಊಟದ ವಿರಾಮ | ಸಭಾಂಗಣ | ಶ್ರೀ/ ಶ್ರೀಮತಿ ________<br>ಶ್ರೀ/ ಶ್ರೀಮತಿ ________ | ಊಟಕ್ಕಾಗಿ ವ್ಯವಸ್ಥೆಗೊಳಿಸುವುದು |
| 7. | ಮ.02.00 ರಿಂದ ಮ.03.00 | ತರಬೇತಿ ಚಟುವಟಿಕೆ–5 ಬಾಲಕಾರ್ಮಿಕತೆಯ ಕಾರಣಗಳು ಮತ್ತು ಪರಿಣಾಮಗಳು | ಸಭಾಂಗಣ | ಸಂಪನ್ಮೂಲ ವ್ಯಕ್ತಿಗಳು<br>________<br>________<br>________ | ಕರಿ ಹಲಗೆ, ಸೀಮೆ ಸುಣ್ಣ, ಕಂದು ಬಣ್ಣದ ಹಾಳೆಗಳು, ಮಾರ್ಕರ್ಸ್. |
| 8. | ಮ.03.00 ರಿಂದ ಮ.04.00 | ತರಬೇತಿ ಚಟುವಟಿಕೆ–6 ಮಕ್ಕಳನ್ನು ಬೆಳೆಸುವಲ್ಲಿ ಪೋಷಕರ ಜವಾಬ್ದಾರಿ | ಸಭಾಂಗಣ | ಸಂಪನ್ಮೂಲ ವ್ಯಕ್ತಿಗಳು<br>________<br>________<br>________ | ಕರಿ ಹಲಗೆ, ಸೀಮೆ ಸುಣ್ಣ, ಕಂದು ಬಣ್ಣದ ಹಾಳೆಗಳು, ಮಾರ್ಕರ್ಸ್. |
| 9. | ಮ.04.00 ರಿಂದ ಮ.04.30 | ತರಬೇತಿ ಚಟುವಟಿಕೆ–7 ಬಾಲಕಾರ್ಮಿಕತೆಯ ಬಗ್ಗೆ ರಸಪ್ರಶ್ನೆ | ಸಭಾಂಗಣ | ಸಂಪನ್ಮೂಲ ವ್ಯಕ್ತಿಗಳು<br>________<br>________<br>________ | ಕರಿ ಹಲಗೆ, ಸೀಮೆ ಸುಣ್ಣ, ಕಂದು ಬಣ್ಣದ ಹಾಳೆಗಳು, ಮಾರ್ಕರ್ಸ್. |
| 10. | ಮ.04.30 ರಿಂದ ಮ.05.15 | ತರಬೇತಿ ಚಟುವಟಿಕೆ–8 ಸ್ಥಳೀಯ ಮಟ್ಟದಲ್ಲಿ ಕ್ರಿಯಾ ಯೋಜನೆ ತಯಾರಿ | ಸಭಾಂಗಣ | ಸಂಪನ್ಮೂಲ ವ್ಯಕ್ತಿಗಳು<br>________<br>________<br>________ | ಕರಿ ಹಲಗೆ, ಸೀಮೆ ಸುಣ್ಣ, ಕಂದು ಬಣ್ಣದ ಹಾಳೆಗಳು, ಮಾರ್ಕರ್ಸ್. |
| 11. | ಮ.05.15 ರಿಂದ ಮ.05.45 | ತರಬೇತಿ ಚಟುವಟಿಕೆ–9 ಸಮಾರೋಪದೊಂದಿಗೆ ಮೌಲ್ಯಮಾಪನ | ಸಭಾಂಗಣ | ಸಂಪನ್ಮೂಲ ವ್ಯಕ್ತಿಗಳು<br>________<br>________<br>________ | ಕರಿ ಹಲಗೆ, ಸೀಮೆ ಸುಣ್ಣ, ಕಂದು ಬಣ್ಣದ ಹಾಳೆಗಳು, ಮಾರ್ಕರ್ಸ್. |








# ಭಾಗ – 2

# ತರಬೇತಿ ಚಟುವಟಿಕೆಗಳು







## 2.1 ನೊಂದಣಿ

ಸಮಯ: 30 ನಿಮಿಷಗಳು

### 2.1.1 ಉದ್ದೇಶಗಳು

- ಶಿಬಿರಾರ್ಥಿಗಳ ಹೆಸರು ವಿಳಾಸ ಇತ್ಯಾದಿಗಳ ಮಾಹಿತಿ ಸಂಗ್ರಹಿಸುವುದು.
- ಶಿಬಿರಾರ್ಥಿಗಳಿಗೆ ತರಬೇತಿಗೆ ಅವಶ್ಯಕವಾದ ಪರಿಕರಗಳನ್ನು ವಿತರಿಸುವುದು.
- ಶಿಬಿರಾರ್ಥಿಗಳಿಗೆ "ಬಾಲಕಾರ್ಮಿಕತೆ"ಯನ್ನು ಪರಿಚಯಿಸುವುದು.


### 2.1.2 ಪರಿಕರಗಳು

- ನೊಂದಣಿ ಪುಸ್ತಕ
- ನೊಂದಣಿ ನಮೂನೆಗಳು
- ಪೆನ್ನು
- ಶಿಬಿರಾರ್ಥಿಗಳಿಗೆ ಹಂಚುವ ಪರಿಕರಗಳು
- (ತರಬೇತಿ ವೇಳಾಪಟ್ಟಿ, ತರಬೇತಿ ಪತ್ರಗಳು, ನೊಂದಣಿ ನಮೂನೆ, ಬರೆಯುವ ಪುಸ್ತಕ ಇತ್ಯಾದಿಗಳು)

### 2.1.3 ಪ್ರಕ್ರಿಯೆ

- ತರಬೇತಿ ದಿವಸ ವ್ಯವಸ್ಥಾಪಕರು ಸಾಕಷ್ಟು ಮೊದಲೇ ಬಂದು ವ್ಯವಸ್ಥೆಯನ್ನು ಇನ್ನೊಮ್ಮೆ ಪರೀಕ್ಷಿಸಬೇಕು.
- ಉತ್ತಮವಾಗಿ ಮಾತನಾಡಲು ಮತ್ತು ವಿಚಾರಿಸಿಕೊಳ್ಳಲು ಶಕ್ತರಾಗಿರುವವರನ್ನು ನೊಂದಣಿ ಮಾಡಿಕೊಳ್ಳಲು ನೇಮಿಸಬೇಕು.
- ಶಿಬಿರಾರ್ಥಿಗಳು ಆಗಮಿಸಿದ ಹಾಗೆ ಅವರನ್ನು ನೊಂದಾಯಿಸಿಕೊಳ್ಳಬೇಕು. ನೊಂದಾಯಿಸಿಕೊಳ್ಳುವಾಗ ಅವರನ್ನು ವಿಚಾರಿಸಿಕೊಳ್ಳಬೇಕು. ಸೌಹಾರ್ದಯುತವಾಗಿ ಅವರ ಹತ್ತಿರ ಮಾತನಾಡಬೇಕು. ಅವರಲ್ಲಿನ ಮುಜುಗರ, ಶಂಕೆ ಇತ್ಯಾದಿ ನಿವಾರಿಸಿ ಹೋಗಿ ಅವರು ವಾತಾವರಣಕ್ಕೆ ಹೊಂದಿಕೊಳ್ಳುವ ಹಾಗೆ ನೋಡಿಕೊಳ್ಳುವುದು ಅವಶ್ಯಕ.
- ತರಬೇತಿ ನಡೆಯುವ ಕಟ್ಟಡದ ಬಾಗಿಲಲ್ಲಿ ಮುಖವಾಡ ಧರಿಸಿದ ಇಬ್ಬರು ನಿಂತು ಶಿಬಿರಾರ್ಥಿಗಳನ್ನು ಬರಮಾಡಿಕೊಳ್ಳಬೇಕು. ಬಾಗಿಲಿನ ಒಂದು ಬದಿಯಲ್ಲಿ ನಗುತ್ತಿರುವ ಮಕ್ಕಳ ಮುಖವಾಡ ಧರಿಸಿದ ವ್ಯಕ್ತಿ ನಿಂತು ಶಿಬಿರಾರ್ಥಿಗಳು ಬಂದ ಹಾಗೆಲ್ಲ ಅವರನ್ನು ನಗುಮುಖದಿಂದ ಸತ್ಕರಿಸಿ ಕೈ ಕುಲುಕಿ ಬರಮಾಡಿಕೊಳ್ಳಬೇಕು.





- ಇನ್ನೊಂದು ಬದಿಯಲ್ಲಿ ಬಾಲಕಾರ್ಮಿಕರ ಮುಖವಾಡ ಧರಿಸಿಕೊಂಡು ಶಿಬಿರಾರ್ಥಿಗಳನ್ನು ಬರಮಾಡಿಕೊಳ್ಳಬೇಕು. ಅವರು ಒಳಗೆ ಬಂದ ಕೂಡಲೆ ಅವರ ಕೈ ಕುಲುಕಬೇಕು. "ಶುಭ ಮುಂಜಾನೆ" ಹೇಳಬೇಕು. ನಂತರ ಶಿಬಿರಾರ್ಥಿಗಳ ಹತ್ತಿರ "ನನ್ನ ಸ್ನೇಹಿತರಾಗುತ್ತೀರಾ" ಎಂದು ಕೇಳಬೇಕು. ಇದಾದ ನಂತರ ಅವರ ಮುಂಗೈಗೆ ಸ್ನೇಹ ಪಟ್ಟಿಯನ್ನು ಕಟ್ಟಬೇಕು. (ಮುಖವಾಡಗಳ ಮತ್ತು ಸ್ನೇಹದ ಪಟ್ಟಿಯ ನಮೂನೆಯನ್ನು ಭಾಗ ಮೂರರಲ್ಲಿ ಕೊಡಲಾಗಿದೆ.)
- ಶಿಬಿರಾರ್ಥಿಗಳ ಹೆಸರು ಇತ್ಯಾದಿಗಳನ್ನು ನೊಂದಾಯಿಸಿಕೊಂಡ ನಂತರ ಅವರನ್ನು ಶಿಬಿರದಲ್ಲಿ ವ್ಯವಸ್ಥೆ ಮಾಡಿದ ಬಾಲಕಾರ್ಮಿಕರಿಗೆ ಸಂಬಂಧ ಪಟ್ಟ ವಸ್ತು ಪ್ರದರ್ಶನಕ್ಕೆ ಕರೆದುಕೊಂಡು ಹೋಗಬೇಕು. ಈ ವಸ್ತು ಪ್ರದರ್ಶನದಲ್ಲಿ ಬಾಲಕಾರ್ಮಿಕತೆಗೆ ಸಂಬಂಧಪಟ್ಟ ಪೋಸ್ಟರ್‌ಗಳು, ಸ್ಟಿಕ್ಕರ್‌ಗಳು, ಬ್ಯಾನರ್‌ಗಳು, ವರ್ತಮಾನ ಪತ್ರಿಕೆಯ ತುಂಡುಗಳು, ಗ್ರಾಫ್‌ಗಳು, ಕಿರುಹೊತ್ತಿಗೆಗಳು, ಪೇಂಟಿಂಗ್‌ಗಳು, ಬ್ರೋಷರ್‌ಗಳು, ರೇಖಾಚಿತ್ರಗಳು ಇತ್ಯಾದಿಗಳು ಇರಬಹುದು.
- ವಸ್ತು ಪ್ರದರ್ಶನದ ವೀಕ್ಷಣೆಯ ನಂತರ ಉಪಹಾರದ ವ್ಯವಸ್ಥೆ ಇದ್ದರೆ ಅವರನ್ನ ಉಪಹಾರಕ್ಕೆ ಕಳುಹಿಸಿಕೊಡಬೇಕು. ಇಲ್ಲದೆ ಇದ್ದಲ್ಲಿ ಅವರನ್ನು ತರಬೇತಿ ಕೊಠಡಿಯಲ್ಲಿ ಆಸೀನರಾಗುವಂತೆ ವಿನಂತಿಸಬೇಕು.


### 2.1.4 ನಿರೀಕ್ಷಿತ ಫಲಿತಾಂಶಗಳು

- ಶಿಬಿರಾರ್ಥಿಗಳಿಗೆ ಸಂಬಂಧಪಟ್ಟಂತೆ ಅವಶ್ಯಕವಾದ ಮಾಹಿತಿಗಳನ್ನು ಸಂಗ್ರಹಿಸಲಾಗುತ್ತದೆ.
- ಶಿಬಿರಾರ್ಥಿಗಳಿಗೆ ತರಬೇತಿಯಲ್ಲಿ ಉಪಯೋಗಿಸಲು ಅವಶ್ಯಕವಾದ ಪರಿಕರಗಳನ್ನು ವಿತರಿಸಲಾಗುತ್ತದೆ.
- ಶಿಬಿರಾರ್ಥಿಗಳು ಬಾಲಕಾರ್ಮಿಕತೆಯ ಬಗ್ಗೆ ಪ್ರಾಥಮಿಕ ಅರಿವನ್ನು ಮಾಡಿಕೊಳ್ಳುವರು. ಅವರ ಅರಿವಿನ ಮಟ್ಟ ಹೆಚ್ಚಾಗುವುದು. ವಸ್ತು ಪ್ರದರ್ಶನದಿಂದ ಬಾಲಕಾರ್ಮಿಕತೆಯ ಪರಿಮಾಣ ಮತ್ತು ಪರಿಣಾಮವನ್ನು ಅರ್ಥ ಮಾಡಿಕೊಳ್ಳುವರು.
- ಸ್ನೇಹ ಸೂಚಿ ಪಟ್ಟಿಯಿಂದ ಶಿಬಿರಾರ್ಥಿಗಳು ವೈಯಕ್ತಿಕವಾಗಿ ಬಾಲಕಾರ್ಮಿಕತೆ ಬಗ್ಗೆ ಯೋಚಿಸಲು ಆರಂಭಿಸುವರು.

### 2.1.5 ಸೂಚನೆಗಳು

- ಉತ್ತಮವಾಗಿ ಮಾತನಾಡಲು ಹಾಗೂ ವಿಚಾರಿಸಿಕೊಳ್ಳಲು ಶಕ್ತರಾಗಿರುವವರನ್ನು ನೊಂದಣಿ ಮಾಡಲು ಗುರುತಿಸಿಕೊಳ್ಳಬೇಕು. ನೊಂದಣಿ ಪ್ರಕ್ರಿಯೆ ತರಬೇತಿದಾರರು ಮತ್ತು ಶಿಬಿರಾರ್ಥಿಗಳ ಮಧ್ಯೆ ಏರ್ಪಡಬಹುದಾದ ಬಾಂಧವ್ಯದ ಪ್ರಥಮ ಸೋಪಾನವಾಗಿರುತ್ತದೆ. ಪ್ರತಿಯೊಬ್ಬ ಶಿಬಿರಾರ್ಥಿಗಳು ತಾವು ಒಬ್ಬ ವಿಶೇಷ ವ್ಯಕ್ತಿ ಎಂಬ ಭಾವನೆ ಹೊಂದುವಂತೆ ಅವರನ್ನು ಬರಮಾಡಿಕೊಳ್ಳಬೇಕು.
- ಶಿಬಿರಾರ್ಥಿಗಳು ತಮ್ಮ ಚಾ, ಊಟದ ವಿರಾಮ ಮುಂತಾದವುಗಳಲ್ಲಿ ವಸ್ತು ಪ್ರದರ್ಶನಕ್ಕೆ ಭೇಟಿ ಕೊಡಲು ಪ್ರೋತ್ಸಾಹಿಸಬೇಕು. ಅವರು ತಮ್ಮ ತಮ್ಮಲ್ಲಿ ಮತ್ತು ಸಂಪನ್ಮೂಲ ವ್ಯಕ್ತಿಗಳ ಜೊತೆಯಲ್ಲಿ ಬಾಲಕಾರ್ಮಿಕತೆಗೆ ಸಂಬಂಧಪಟ್ಟ ವಿಚಾರಗಳ ಬಗ್ಗೆ ಚರ್ಚಿಸಲು ಪ್ರೋತ್ಸಾಹಿಸಬೇಕು.





## 2.2 ಉದ್ಘಾಟನೆ

ಸಮಯ: 30 ನಿಮಿಷಗಳು

### 2.2.1 ಉದ್ದೇಶಗಳು


- ಶಿಬಿರಾರ್ಥಿಗಳಿಗೆ ತರಬೇತಿಯ ಉದ್ದೇಶಗಳನ್ನು ಪರಿಚಯ ಮಾಡಿಕೊಡುವುದು.
- ತರಬೇತಿಗೆ ಒಂದು ಒಳ್ಳೆಯ ಆರಂಭವನ್ನು ಒದಗಿಸುವುದು.

### 2.2.2 ಪ್ರಕ್ರಿಯೆ

- ಈ ತರಬೇತಿಯು ಒಂದು ದಿನದ ತರಬೇತಿ ಆಗಿರುವುದರಿಂದ ಉದ್ಘಾಟನೆಗೆ ಹೆಚ್ಚು ಸಮಯ ವ್ಯಯ ಮಾಡಲು ಆಸ್ಪದ ಇರುವುದಿಲ್ಲ.
- ಉದ್ಘಾಟಕರು ಸಮಯಕ್ಕೆ ಸರಿಯಾಗಿ ಬರುವಂತೆ ವ್ಯವಸ್ಥೆ ಮಾಡಿಕೊಳ್ಳಬೇಕು. ಒಂದು ವೇಳೆ ಉದ್ಘಾಟಕರು ಸಮಯಕ್ಕೆ ಸರಿಯಾಗಿ ಬಾರದೆ ಇದ್ದರೆ ತರಬೇತಿ ವ್ಯವಸ್ಥಾಪಕರು ಸಮಯಕ್ಕೆ ಸರಿಯಾಗಿ ತರಬೇತಿಯನ್ನು ಪ್ರಾರಂಭಿಸಬೇಕು.
- ಉದ್ಘಾಟಕರು ಮತ್ತು ಅಧ್ಯಕ್ಷರು ಬಾಲಕಾರ್ಮಿಕತೆಗೆ ಸಂಬಂಧಪಟ್ಟ ವಿಚಾರಗಳನ್ನೇ ಮಾತನಾಡುವಂತೆ, ಅವರಿಗೆ ಅವಶ್ಯಕವಾದ ಮಾಹಿತಿ ಒದಗಿಸಬೇಕು.
    - ಅತಿಥಿಗಳನ್ನು ಆಹ್ವಾನಿಸುವುದು — 2 ನಿಮಿಷ
    - ಪ್ರಾರ್ಥನೆ — 2 ನಿಮಿಷ
    - ಸ್ವಾಗತ — 2 ನಿಮಿಷ
    - ಪ್ರಸ್ತಾವನೆ (ತರಬೇತಿ ಬಗ್ಗೆ) — 5 ನಿಮಿಷ
    - ಉದ್ಘಾಟನಾ ಸಮಾರಂಭ — 2 ನಿಮಿಷ
    - ಮುಖ್ಯ ಅತಿಥಿಗಳ ಭಾಷಣ — 10 ನಿಮಿಷ
    - ಅಧ್ಯಕ್ಷರ ಭಾಷಣ — 5 ನಿಮಿಷ
    - ವಂದನಾರ್ಪಣೆ — 3 ನಿಮಿಷ
- ಉದ್ಘಾಟನಾ ಸಮಾರಂಭವನ್ನು ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಬೇಕು. ಸಂಕ್ಷಿಪ್ತವಾಗಿ ನಡೆಸುವುದು ಅವಶ್ಯಕ.







# 2.3 ಸ್ವ ಪರಿಚಯ


ಸಮಯ: 60 ನಿಮಿಷಗಳು

## 2.3.1 ಉದ್ದೇಶಗಳು


- ಶಿಬಿರಾರ್ಥಿಗಳ ಹಿನ್ನಲೆ, ಅಭಿರುಚಿ, ಸಾಧನೆ ಇತ್ಯಾದಿಗಳನ್ನು ಅರ್ಥಮಾಡಿಕೊಳ್ಳುವುದು.
- ಶಿಬಿರಾರ್ಥಿಗಳು ತಮ್ಮ ಮೈಚಳಿ ಬಿಟ್ಟು ತರಬೇತಿಯಲ್ಲಿ ಭಾಗವಹಿಸುವ ವಾತಾವರಣವನ್ನು ಉಂಟುಮಾಡುವುದು.
- ನಾವೆಲ್ಲಾ ಒಂದೇ ಎಂಬ ಭಾವನೆಯನ್ನು ಉಂಟುಮಾಡುವುದು ಮತ್ತು ತರಬೇತಿಯಲ್ಲಿ ಮುಕ್ತವಾಗಿ ಭಾಗವಹಿಸುವಂತೆ ಮಾಡುವುದು.

## 2.3.2 ಪಠ್ಯ

- ಸಾಮಾನ್ಯವಾಗಿ ಇಂತಹ ತರಬೇತಿಯಲ್ಲಿ ಶಿಬಿರಾರ್ಥಿಗಳೆಲ್ಲಾ ಒಂದೇ ಪ್ರದೇಶದವರು ಆಗಿರಬಹುದು. ಅವರು ಒಬ್ಬರನ್ನು ಒಬ್ಬರು ನೋಡಿರಬಹುದು. ಆದರೆ ಅವರ ಸಂಪೂರ್ಣ ಪರಿಚಯವಾಗುವುದು ಅವಶ್ಯಕ. ಆಗ ಅವರು ತಾವೆಲ್ಲಾ ಒಂದೇ ಎಂಬ ಭಾವನೆಯಿಂದ ವ್ಯವಹರಿಸುವರು. ತಮಗೆ ಪರಸ್ಪರ ಸಹಾಯ ಅವಶ್ಯಕ ಎಂಬ ಮನೋಭಾವನೆ ಬೆಳೆಯುವುದು. ಪ್ರತಿಯೊಬ್ಬರಿಗೂ ಪ್ರತಿಯೊಬ್ಬರ ಸ್ಥಿತಿಯ ಪರಿಚಯವಾಗುವುದು.







- ಸ್ವ ಪರಿಚಯ ಅಭ್ಯಾಸದ ಅವಧಿಯಲ್ಲಿ ಅವರು ಪರಸ್ಪರ ಸಂವಹನ ಮಾಡಲು ಮತ್ತು ಯಾವುದೇ ಹಿಂಜರಿಕೆ ಇಲ್ಲದೆ ಭಾಗವಹಿಸಲು ಸಾಧ್ಯವಾಗುವುದು. ಈ ಅವಧಿಯು ಅವರು ತಾವು ಹೇಳಲು ಹಿಂಜರಿಯುವ ವಿಚಾರಗಳನ್ನು ಹೇಳಲು ಪ್ರೋತ್ಸಾಹಿಸುವುದು.
- ಈ ಅಭ್ಯಾಸವು ತಮ್ಮ ಅಂತರ್ಗತ ವಿಚಾರಗಳನ್ನು ಹಂಚಿಕೊಳ್ಳುವ, ತಮ್ಮ ಸಾಧನೆಗಳನ್ನು, ತಮ್ಮ ಮುಂದಿನ ಗುರಿಗಳನ್ನು, ತಮ್ಮ ನಿರೀಕ್ಷೆಗಳನ್ನು ತಿಳಿಸುವ ವಾತಾವರಣವನ್ನು ನಿರ್ಮಿಸುವುದು.
- ಈ ಅಭ್ಯಾಸವು ತರಬೇತುದಾರರಿಗೆ ಗುಂಪನ್ನು ಉತ್ತಮವಾಗಿ ಅರ್ಥ ಮಾಡಿಕೊಳ್ಳಲು ಸಹಾಯ ಮಾಡುವುದು ಹಾಗೂ ಇದರಿಂದ ಶಿಬಿರಾರ್ಥಿಗಳು ಅರ್ಥಮಾಡಿಕೊಳ್ಳುವ ಮಟ್ಟ ಇತ್ಯಾದಿ ನಿಚ್ಚಳವಾಗಿಸುವುದು.

### 2.3.3 ವಿಧಾನ

- ಗುಂಪು ಚಟುವಟಿಕೆ
- ಆಟಗಳು
- ಚರ್ಚೆ
- ಮಾತುಕತೆ


### 2.3.4 ಪರಿಕರಗಳು

- 6X3 ಇಂಚಿನ ತಿಳಿ ಬಣ್ಣದ ಕಾರ್ಡಗಳು
- ಬಣ್ಣದ ಪೆನ್ನುಗಳು

### 2.3.5 ಪ್ರಕ್ರಿಯೆ

- ಪ್ರತಿಯೊಬ್ಬ ಶಿಬಿರಾರ್ಥಿಗೆ ಒಂದೊಂದು ಕಾರ್ಡನ್ನು ಕೊಡುವುದು.
- ಪ್ರತಿಯೊಬ್ಬರು ಕಾರ್ಡನ್ನು ಕನ್ನಡಿ ಎಂದು ತಿಳಿದು ಅವರವರ ಮುಖವನ್ನು ನೋಡಿಕೊಳ್ಳಲು ತಿಳಿಸುವುದು. ಅವರಿಗೆ ಅವರ ಮುಖ ಕಾಣಿಸುವುದೇ ಎಂದು ಕೇಳಿರಿ. ಅವರು ಹೌದು ಎಂದು ಹೇಳುವ ತನಕ ಮುಂದುವರಿಸಿರಿ.
- ತಮ್ಮ ಮುಖವನ್ನು ಕಾರ್ಡನ ಕನ್ನಡಿಯಲ್ಲಿ ನೋಡಿಕೊಂಡು, ಅವರವರ ಮುಖದ ಚಿತ್ರವನ್ನು ಬರೆಯಲು ತಿಳಿಸುವುದು. ಅವರು ಹಿಂಜರಿಯಬಹುದು. ಆದರೆ ಅವರನ್ನು ಪ್ರಚೋದಿಸಬೇಕು. ಯಾವ ರೀತಿಯಲ್ಲಾದರೂ ಬರೆಯಿರಿ. ಅಂದವಾಗಿ ಇರಬೇಕೆಂದೇನಿಲ್ಲ ಪ್ರಯತ್ನಿಸಿ ಎಂದು ಪ್ರಚೋದಿಸಬೇಕು. ಯಾವುದೇ ಸಂದರ್ಭದಲ್ಲಿ ತರಬೇತುದಾರರು ಚಿತ್ರ ಬರೆಯಬಾರದು.
- ಕೆಲವರು ಮುಖದ ಚಿತ್ರ ಬರೆಯಬಹುದು. ಕೆಲವರು ಇಡೀ ದೇಹದ ಚಿತ್ರ ಬರೆಯಬಹುದು. ಕೆಲವರು ಕೇವಲ ಗೆರೆಗಳನ್ನು ಹಾಕಿರಬಹುದು.
- ಎಲ್ಲರಿಂದಲೂ ಕಾರ್ಡಗಳನ್ನು ಸಂಗ್ರಹಿಸಿ ಅವನ್ನು ಮಿಶ್ರಣ ಮಾಡಿ ಮತ್ತೆ ಹಂಚಿರಿ.





- ಯಾವುದೇ ಸಂದರ್ಭದಲ್ಲಿ ಅವರವರ ಕಾರ್ಡು ಅವರಿಗೆ ಬಾರದಂತೆ ನೋಡಿಕೊಳ್ಳಿ.
- ಅವರ ಮುಖದ ಚಿತ್ರದ ಕಾರ್ಡ ಯಾರ ಹತ್ತಿರ ಇದೆ, ಎಂದು ಹುಡುಕಲು ತಿಳಿಸಿರಿ. ನಿಮ್ಮ ಹತ್ತಿರವಿರುವ ಇತರರ ಕಾರ್ಡಿನ ಬಗ್ಗೆ ಚಿಂತಿಸಬೇಕಾಗಿಲ್ಲ ಎಂದು ಹೇಳಿರಿ

**2.3.5.1 ನಂತರದಲ್ಲಿ ಶಿಬಿರಾರ್ಥಿಗಳಿಗೆ ಈ ಕೆಳಗಿನ ಸೂಚನೆಗಳನ್ನು ನೀಡಿ.**

- ನಿಮ್ಮ ಕಾರ್ಡು ಯಾರ ಹತ್ತಿರದಲ್ಲಿ ಇದೆ ಅವರ ಪರಿಚಯ ಮಾಡಿಕೊಳ್ಳಲು ತಿಳಿಸಿರಿ. ಅವರ ಬಗ್ಗೆ, ಅವರ ಕುಟುಂಬದ ಬಗ್ಗೆ, ಶಿಕ್ಷಣದ ಬಗ್ಗೆ, ಆದಾಯದ ಬಗ್ಗೆ, ಜೀವನದ ಬಗ್ಗೆ, ಮಕ್ಕಳ ಶಿಕ್ಷಣದ ಬಗ್ಗೆ ಇತ್ಯಾದಿ ಮಾಹಿತಿ ಸಂಗ್ರಹಿಸಿರಿ. ಜೊತೆಯಲ್ಲಿ ಅವರ ನಿರೀಕ್ಷೆಗಳು, ಅವರ ಸಾಧನೆಗಳು, ಅವರ ಮುಂದಿನ ಗುರಿಯ ಬಗ್ಗೆ ಮಾಹಿತಿ ಸಂಗ್ರಹಿಸಲು ತಿಳಿಸಿರಿ.
- ಪ್ರತಿಯೊಬ್ಬರು ತಮ್ಮ ಕಾರ್ಡನ್ನು ಗುರುತಿಸಿ, ಅವರ ಪರಿಚಯ ಮಾಡಿಕೊಳ್ಳಲು ಕನಿಷ್ಟ 20 ನಿಮಿಷ ಕೊಡಿರಿ.

**2.3.5.2 ನಂತರ ಈ ಕೆಳಗಿನ ಪ್ರಶ್ನೆಗಳನ್ನು ಕೇಳಿರಿ.**

ನಿಮಗೆ ಕಾರ್ಡು ಸುಲಭದಲ್ಲಿ ಸಿಕ್ಕಿತೆ?

ನೀವು ಅನುಸರಿಸಿದ ತಂತ್ರಗಳೇನು?

ಮಾಹಿತಿಗಳನ್ನು ಸರಿಯಾಗಿ ಸಂಗ್ರಹಿಸಿದ್ದೀರಾ?

ನೀವು ನಿಮ್ಮ ಮಾಹಿತಿಗಳನ್ನು ಸರಿಯಾಗಿ ಕೊಟ್ಟಿದ್ದೀರಾ?

- ಇದಾದ ನಂತರ ಪ್ರತಿಯೊಬ್ಬ ಶಿಬಿರಾರ್ಥಿಗೂ ತಮ್ಮ ಶಬ್ದಗಳಲ್ಲಿ ತಾವು ಮಾಹಿತಿ ಸಂಗ್ರಹಿಸಿದವರನ್ನು ಗುಂಪಿಗೆ ಪರಿಚಯಿಸಲು ತಿಳಿಸಿರಿ.


### 2.3.6 ನಿರೀಕ್ಷಿತ ಫಲಿತಾಂಶಗಳು

- ಪ್ರತಿಯೊಬ್ಬರು ಇತರರ ಜೊತೆಯಲ್ಲಿ ಸುಲಭವಾಗಿ ಯಾವ ಹಿಂಜರಿಕೆ ಇಲ್ಲದೆ ಮಾತನಾಡುವರು ಮತ್ತು ಮಾಹಿತಿ ಹಂಚಿಕೊಳ್ಳುವರು.
- ಎಲ್ಲಾ ಶಿಬಿರಾರ್ಥಿಗಳು ಯಾವ ಒತ್ತಡವೂ ಇಲ್ಲದೆ ಬಹಳ ಉತ್ಸುಕರಾಗಿ ಅಭ್ಯಾಸದಲ್ಲಿ ಭಾಗವಹಿಸುವರು.

### 2.3.7 ಮುಖ್ಯ ಪ್ರಶ್ನೆಗಳು

1. ಈ ಅಭ್ಯಾಸದಿಂದ ನಿಮಗೆ ಏನು ಉಪಯೋಗವಾಯಿತು.?
2. ಇದರಿಂದ ನೀವು ಏನು ಪಾಠ ಕಲಿತಿರಿ?
3. ನೀವು ನಿಮ್ಮ ಸ್ನೇಹಿತರನ್ನು ಸರಿಯಾಗಿ ಪರಿಚಯಿಸಿದ್ದೀರಾ?





### 2.3.8 ಸೂಚನೆಗಳು

- ಸಾಧ್ಯವಿದ್ದರೆ ಶಿಬಿರಾರ್ಥಿಗಳಿಗೆ ಬಣ್ಣದ ಪೆನ್ನುಗಳನ್ನು ಕೊಡುವುದು.
- ಎಲ್ಲಾ ಶಿಬಿರಾರ್ಥಿಗಳು ಭಾಗವಹಿಸುವಂತೆ ಪ್ರಚೋದಿಸುವುದು.
- ಈ ಅಭ್ಯಾಸ ಬರೀ ಕಾರ್ಡು ಹುಡುಕುವುದರಲ್ಲಿ ನಿಲ್ಲಬಾರದು.
- ಶಿಬಿರಾರ್ಥಿಗಳು ಅವರ ಸ್ನೇಹಿತರಿಂದ ಆದಷ್ಟು ಹೆಚ್ಚಿನ ಮಾಹಿತಿಗಳನ್ನು ಸಂಗ್ರಹಿಸಲು ಪ್ರಚೋದಿಸಬೇಕು. ಕೆಲವರು ತಮ್ಮ ಸ್ನೇಹಿತರ ಬರೀ ಹೆಸರನ್ನು ಹೇಳಿ ಮುಗಿಸಬಹುದು. ತರಬೇತುದಾರರು ಹೆಚ್ಚು ವಿಚಾರಗಳನ್ನು ಹೇಳಲು ಪ್ರಚೋದಿಸಬೇಕು.
- ಶಿಬಿರಾರ್ಥಿಗಳು ಗ್ರಾಮೀಣ ಅಥವಾ ಹಿಂದುಳಿದ ಪ್ರದೇಶದವರು ಆಗಿರುವುದರಿಂದ ಒಮ್ಮೆಲೆ ಹೆಚ್ಚು ಮಾತನಾಡದೆ ಇರಬಹುದು. ಅವರನ್ನು ಹೆಚ್ಚು ಒತ್ತಾಯ ಪಡಿಸಬಾರದು. ನಿಧಾನವಾಗಿ ಅವರ ಅಪೇಕ್ಷೆ ಮತ್ತು ನಿರೀಕ್ಷೆಗಳನ್ನು ಅವರಿಂದ ಹೊರಗೆ ತರಬೇಕು.

### 2.3.9 ಬದಲಿ ಆಟಗಳು

ನಿಮಗೆ ಮೇಲೆ ಕೊಟ್ಟಿರುವ ಆಟ ಈ ಗುಂಪಿಗೆ ಸೂಕ್ತವಲ್ಲ ಎಂಬ ಭಾವನೆ ಇದ್ದರೆ ಬದಲಿ ಆಟವನ್ನು ಆಡಿಸಬಹುದು.

#### 2.3.9.1 ಒಂದು

ಬೇರೆ ಬೇರೆ ಪ್ರಾಣಿಗಳ ಮತ್ತು ಪಕ್ಷಿಗಳ ಚಿತ್ರಗಳನ್ನು ಜೋಡಿಯಲ್ಲಿ ಸಂಗ್ರಹಿಸಿರಿ

- ಈ ಚಿತ್ರಗಳನ್ನು ಶಿಬಿರಾರ್ಥಿಗಳಿಗೆ ಹಂಚಿರಿ.
- ಚಿತ್ರಗಳಲ್ಲಿ ಕಂಡು ಬಂದ ಪ್ರಾಣಿಗಳ / ಪಕ್ಷಿಗಳ ಕೂಗನ್ನು ಮಿಮಿಕ್ರಿ ಮಾಡಲು ತಿಳಿಸಿರಿ.
- ಈ ರೀತಿ ಮಿಮಿಕ್ರಿ ಮಾಡಿದಾಗ, ಈ ಪ್ರಾಣಿ / ಪಕ್ಷಿ ಚಿತ್ರ ಇರುವವರು, ಮಿಮಿಕ್ರಿ ಮಾಡಿದವರ ಜೊತೆಗೆ ಸೇರಬೇಕು.
- ಈ ರೀತಿಯಲ್ಲಿ ಜೋಡಿ ಆದ ನಂತರ, ಅವರ ಹತ್ತಿರ ಒಬ್ಬರಿಗೊಬ್ಬರು ಪರಸ್ಪರ ಪರಿಚಯ ಮಾಡಿಕೊಳ್ಳಲು ತಿಳಿಸಿರಿ.
- ಪರಿಚಯ ಮಾಡಿಕೊಡುವಾಗ / ಪರಿಚಯ ಮಾಡಿಕೊಳ್ಳುವಾಗ ಅವರ ಹೆಸರು, ಕುಟುಂಬ, ಮಕ್ಕಳು, ಶಿಕ್ಷಣ, ಆದಾಯ, ಕೆಲಸ, ನಿರೀಕ್ಷೆಗಳು, ಹವ್ಯಾಸಗಳು, ಸಾಧನೆಗಳು, ಅಭಿಲಾಷೆಗಳು ಇತ್ಯಾದಿ ಬಗ್ಗೆ ಮಾಹಿತಿ ಸಂಗ್ರಹಿಸಬೇಕು.
- ಅನಂತರ ಈಗಾಗಲೇ ಕೊಟ್ಟಿರುವ ಪ್ರಶ್ನೆಗಳನ್ನು ಕೇಳಿರಿ.




**2.3.9.2 ಎರಡು**

ಪೋಸ್ಟ್ ಕಾರ್ಡನ ಆಕಾರದ ಪ್ರಾಣಿಗಳ, ಪಕ್ಷಿಗಳ ಅಥವಾ ಗೊತ್ತಿರುವ ವಸ್ತುಗಳ ಚಿತ್ರಗಳನ್ನು ಸಂಗ್ರಹಿಸಬೇಕು. ಈ ಚಿತ್ರಗಳನ್ನು ಓರೆಕೋರೆಯಾಗಿ ಆಗಿ ಎರಡು ಭಾಗ ಮಾಡಿರಿ.

- ಚಿತ್ರಗಳ ತುಂಡುಗಳನ್ನು ಕಲಸಿರಿ
- ಚಿತ್ರಗಳ ತುಂಡುಗಳನ್ನು ಅನಂತರ ಶಿಬಿರಾರ್ಥಿಗಳಿಗೆ ಹಂಚಿರಿ.
- ಶಿಬಿರಾರ್ಥಿಗಳಿಗೆ ಅವರವರ ಚಿತ್ರಗಳ ತುಂಡನ್ನು ಹುಡುಕಲು ತಿಳಿಸಿರಿ.
- ತಮ್ಮ ಚಿತ್ರದ ತುಂಡು ಸಿಕ್ಕಿದ ಕೂಡಲೆ, ಅವರ ಜೊತೆಯಲ್ಲಿ ತಂಡ ರಚಿಸಿಕೊಳ್ಳಲು ತಿಳಿಸಿರಿ
- ಉಳಿದ ಆಟವನ್ನು ಹಿಂದಿನ ಆಟದಂತೆ ಮುಂದುವರಿಸಿರಿ.







# 2.4 ಮಕ್ಕಳ ಮೂಲಭೂತ ಅವಶ್ಯಕತೆಗಳನ್ನು ಅರ್ಥಮಾಡಿಕೊಳ್ಳುವುದು

ಸಮಯ: 30 ನಿಮಿಷಗಳು

## 2.4.1 ಉದ್ದೇಶಗಳು

- ಮಕ್ಕಳ ಮೂಲಭೂತ ಅವಶ್ಯಕತೆಗಳನ್ನು ಅರ್ಥಮಾಡಿಕೊಳ್ಳುವುದು.
- ಮಕ್ಕಳ ಅವಶ್ಯಕತೆಗಳ ಬಗ್ಗೆ ಚಿಂತನೆ ಮಾಡುವಂತೆ ಪ್ರೇರೇಪಿಸುವುದು.
- ಅವರ ಮಕ್ಕಳ ಪರಿಸ್ಥಿತಿಗಳನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುವುದು.

## 2.4.2 ಪಠ್ಯ

ಪೋಷಕರು ಮಕ್ಕಳ ಮೂಲಭೂತ ಅವಶ್ಯಕತೆಗಳನ್ನು ಅರ್ಥಮಾಡಿಕೊಳ್ಳುವುದು ಅವಶ್ಯಕ. ಹೆಚ್ಚಿನವರಲ್ಲಿ ಮಕ್ಕಳ ಅವಶ್ಯಕತೆಗಳ ಬಗ್ಗೆ ಸೂಕ್ಷ್ಮತೆ ಇರುವುದಿಲ್ಲ. ಪೋಷಕರಿಗೆ ಇವುಗಳ ಬಗ್ಗೆ ಆದ್ಯತೆ ಕಡಿಮೆ.

(ಎ) ಮಗು ಎಂದರೆ ಯಾರು? ಮಗುವಿನ ಗುಣ ಲಕ್ಷಣಗಳು ಯಾವುವು?

ಈ ಪ್ರಶ್ನೆ ಕೇಳಿದಾಗ ನಮಗೆ ಈ ಕೆಳಗಿನ ಉತ್ತರಗಳು ಬರಬಹುದು.

- 10 ಅಥವಾ 14 ವರ್ಷದವರನ್ನು ಮಕ್ಕಳೆಂದು ಕರೆಯಬಹುದು.
- 18 ವರ್ಷಕ್ಕಿಂತ ಕೆಳಗಿನವರನ್ನು ಮಕ್ಕಳು ಎಂದು ಕರೆಯಬಹುದು.
- ಮಕ್ಕಳು ದೊಡ್ಡವರ ಹಾಗೆ ತಲೆ ಬಿಸಿಮಾಡಿಕೊಳ್ಳುವುದಿಲ್ಲ.
- ಮಕ್ಕಳು ಬಹಳ ಮುಗ್ದರಾಗಿರುತ್ತಾರೆ.
- ಮಕ್ಕಳು ಹೆಚ್ಚು ಹೆಚ್ಚು ಮಾತನಾಡುತ್ತಾರೆ.
- ಮಕ್ಕಳು ಆಟ ಆಡಲು ಇಷ್ಟ ಪಡುತ್ತಾರೆ.
- ಮಕ್ಕಳಿಗೆ ಪ್ರೀತಿಯ ಅವಶ್ಯಕತೆ ಇದೆ.
- ಹೆಚ್ಚು ಸೂಕ್ಷ್ಮತೆಯಿಂದ ಇರುತ್ತಾರೆ.
- ಬಹಳಷ್ಟು ಪ್ರಶ್ನೆಗಳನ್ನು ಕೇಳುತ್ತಾರೆ, ಅಳುತ್ತಾರೆ, ಕನಸು ಕಾಣುತ್ತಾರೆ, ಎಲ್ಲವನ್ನು ನಂಬುತ್ತಾರೆ ಮತ್ತು ಸಂತೋದಿಂದ ಇರುತ್ತಾರೆ.
- ಮಕ್ಕಳು ಬುದ್ದಿವಂತರಾಗಿರುತ್ತಾರೆ.
- ತಮಗೆ ಏನು ಬೇಕು ಎಂಬುದರ ನಿರ್ಧಾರ ತೆಗೆದುಕೊಳ್ಳುವರು.
- ಯಾವಾಗಲೂ ಚುರುಕರಾಗಿರುತ್ತಾರೆ.
- ಅಭಿವೃದ್ಧಿ ಹೊಂದಲು ಅವಕಾಶ ಬೇಕು.



**ಮಕ್ಕಳಿಗೆ ಅವಶ್ಯಕವಾದವುಗಳು**

- ಪೌಷ್ಟಿಕ ಆಹಾರ
- ಉತ್ತಮ ಆರೋಗ್ಯ ಸೇವೆ
- ಶಿಕ್ಷಣದ ಅವಶ್ಯಕತೆ
- ಉತ್ತಮ ರಕ್ಷಣೆ
- ಉತ್ತಮ ವಸತಿ
- ಸ್ನೇಹಿತರು . . . ಇತ್ಯಾದಿಗಳು


(ಬಿ) ನಮ್ಮ ಮಕ್ಕಳು ಹೇಗೆ ಜೀವಿಸುತ್ತಿದ್ದಾರೆ? ಅವರ ಪ್ರಾಯ ಎಷ್ಟು? ಅವರು ಏನು ಮಾಡುತ್ತಿದ್ದಾರೆ, ಅವರ ದಿನನಿತ್ಯದ ಕೆಲಸ ಕಾರ್ಯಗಳು.

- ನಮ್ಮ ಮಕ್ಕಳು ಶಾಲೆಯಲ್ಲಿ ಇಲ್ಲ.
- ಅವರು ಕೆಲಸ ಮಾಡುತ್ತಿದ್ದಾರೆ
- ಹೊಲಗದ್ದೆಗಳಲ್ಲಿ ಕೆಲಸ ಮಾಡುತ್ತಾರೆ.
- ನಗರಗಳಲ್ಲಿ ಕೆಲಸ ಮಾಡುತ್ತಾರೆ.
- ಮನೆಗೆಲಸದವರಾಗಿ ಕೆಲಸ ಮಾಡುತ್ತಿದ್ದಾರೆ.
- ಅವರಿಗೆ ಮಕ್ಕಳ ಜೀವನ ಇರುವುದಿಲ್ಲ.
- ಅವರು ಆಟ ಆಡುತ್ತಿಲ್ಲ. ಸಂತೋಷ ಪಡುತ್ತಿಲ್ಲ.
- ಯಾರೂ ಅವರ ಅವಶ್ಯಕತೆಗಳನ್ನು ಕೇಳುತ್ತಿಲ್ಲ.
- ಅವರಿಗೆ ಸರಿಯಾದ ಆಹಾರ ಸಿಗುತ್ತಿಲ್ಲ.
- ಅವರಿಗೆ ಕಾಯಿಲೆ ಬಂದಾಗ, ಆರೋಗ್ಯ ಸೇವೆ ದೊರಕುತ್ತಿಲ್ಲ.
- ಅವರ ಮೇಲೆ ಹಲವಾರು ರೀತಿ ಹಲ್ಲೆ ನಡೆಯುತ್ತಿದೆ.
- ಅವರಿಗೆ ಯಾವಾಗಲೂ ಬೈಗುಳ ಸಿಗುತ್ತಿವೆ.
- ಅವರಿಗೆ ಪ್ರೀತಿ ಸಿಗುತ್ತಿಲ್ಲ.
- ಅವರಿಗೆ ಸೂಕ್ತ ರಕ್ಷಣೆ ಸಿಗುತ್ತಿಲ್ಲ.
- ಅವರಿಗೆ ಅಭಿವೃದ್ಧಿ ಹೊಂದಲು ಅವಕಾಶ ಸಿಗುತ್ತಿಲ್ಲ.

**ನಮ್ಮ ಮಕ್ಕಳ ಅವಶ್ಯಕತೆಗಳು**

- ನಮ್ಮ ಮಕ್ಕಳಿಗೆ ಮಕ್ಕಳ ಜೀವನ ಬೇಕು.
- ನಮ್ಮ ಮಕ್ಕಳಿಗೆ ಪೋಷಕರ ಪ್ರೀತಿ ಬೇಕು.
- ನಮ್ಮ ಮಕ್ಕಳಿಗೆ ವಾಸ ಮಾಡಲು ಮನೆ ಬೇಕು
- ನಮ್ಮ ಮಕ್ಕಳಿಗೆ ಶಿಕ್ಷಣ ಬೇಕು
- ನಮ್ಮ ಮಕ್ಕಳಿಗೆ ಸ್ನೇಹಿತರು ಬೇಕು
- ನಮ್ಮ ಮಕ್ಕಳಿಗೆ ಆರೋಗ್ಯ ಸೇವೆ ಬೇಕು
- ನಮ್ಮ ಮಕ್ಕಳಿಗೆ ಪೌಷ್ಟಿಕ ಆಹಾರ ಬೇಕು.





### 2.4.3 ವಿಧಾನಗಳು

- ಮೆದುಳು ಮಂಥನ
- ಉಪನ್ಯಾಸ
- ಕೇಸ್ ಸ್ಟಡೀಸ್

### 2.4.4 ಪರಿಕರಗಳು

- ಕರಿಹಲಗೆ ಸೀಮೆಸುಣ್ಣ
- ಕಂದು ಬಣ್ಣದ ಹಾಳೆಗಳು
- ಬಣ್ಣದ ಪೆನ್ನುಗಳು
- ವಿವಿಧ ಕೆಲಸಗಳಲ್ಲಿ ತೊಡಗಿರುವ ಬಾಲಕಾರ್ಮಿಕರ ಚಿತ್ರಗಳು

### 2.4.5 ಪ್ರಕ್ರಿಯೆ

ನಮ್ಮ ಮಕ್ಕಳು ಎಲ್ಲಿ ಇದ್ದಾರೆ?

ಅವರ ಅವಶ್ಯಕತೆಗಳನ್ನು ನಾವು ಪೂರೈಸುತ್ತಿದ್ದೇವೆಯೇ?


ಅವರ ಅವಶ್ಯಕತೆಗಳನ್ನು ಪೂರೈಸಲು ನಾವೇನು ಮಾಡಬೇಕು?

- ತರಬೇತುದಾರರು ಚರ್ಚೆಯನ್ನು ಪ್ರಶ್ನೆ ಕೇಳುವುದರ ಮೂಲಕ ಆರಂಭಿಸಬೇಕು. ಶಿಬಿರಾರ್ಥಿಗಳ ಮುಂದೆ ಪ್ರಶ್ನೆಗಳನ್ನು ಇಟ್ಟಾಗ ಅವರು ವಿವಿಧ ರೀತಿಯ ಉತ್ತರಗಳನ್ನು ಕೊಡಬಹುದು. ಅವರನ್ನು ಉತ್ತರ ಕೊಡಲು ಪ್ರೋತ್ಸಾಹಿಸಬೇಕು. ಅವರು ಕೊಡುವ ಉತ್ತರಗಳನ್ನು ಕರಿಹಲಗೆಯ ಮೇಲೆ ಬರೆಯಬೇಕು.
- ಒಂದಾದ ನಂತರ ಒಂದರಂತೆ ಪ್ರಶ್ನೆಗಳನ್ನು ಕೇಳುತ್ತಾ ಹೋಗಬೇಕು.
- ಈ ಚಟುವಟಿಕೆಯ ಮುಖ್ಯ ಉದ್ದೇಶ ಅವರನ್ನು ಸೂಕ್ಷ್ಮತೆಗೊಳಿಸುವುದು ಮತ್ತು ಯೋಚಿಸುವಂತೆ ಮಾಡುವುದು.
- ಪ್ರಶ್ನೆಗಳನ್ನು ಕೇಳಿದ ನಂತರ ಒಂದೊಂದೆ ಕೇಸ್ ಸ್ಟಡೀಸನ್ನು ಅವರ ಮುಂದಿಡಬೇಕು.




### 2.4.5.1 ಕೇಸ್ ಸ್ಟಡಿ – 1

ಶ್ರೀದೇವಿ ಈಗ 12 ವರ್ಷದವಳು. ಅವಳಿಗೆ 9 ವರ್ಷ ಪ್ರಾಯದಲ್ಲಿ ಮದುವೆ ಆಗಿದೆ. ಅವಳ ಗಂಡನ ಪ್ರಾಯ 22 ವರ್ಷ. ಅವಳ ಗಂಡ ಮತ್ತು ಅತ್ತೆ ಮಾವಂದಿರು ಅವಳಿಗೆ ಭಯಂಕರ ಹಿಂಸೆ ಕೊಡುತ್ತಿದ್ದರು. ಅವಳ ಹತ್ತಿರ ಮನೆಯ ಎಲ್ಲಾ ಕೆಲಸ ಮಾಡಿಸುತ್ತಿದ್ದರು. ಅವಳು ಗಂಡನ ಗುಲಾಮಳಾಗಿದ್ದಳು. ಅವಳ ಕೆಲಸದಲ್ಲಿ ತಪ್ಪಿದ್ದರೆ ಗಂಡ ಮತ್ತು ಅತ್ತೆ ಮಾವಂದಿರಿಂದ ಹೊಡೆತ ತಿನ್ನಬೇಕಾಗಿತ್ತು.




### 2.4.5.2 ಕೇಸ್ ಸ್ಟಡಿ – 2

ಹರಿ 10 ವರ್ಷದ ಬಾಲಕ. ಅವನು ಸಿಡಿಮದ್ದುಗಳ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ. ಒಂದು ದಿನ ಅಂಗಡಿಯಲ್ಲಿ ಚಿಕ್ಕ ಸ್ಫೋಟ ಆಯಿತು. ಅದರಲ್ಲಿ ಹರಿ ಕೈಗಳನ್ನು ಸುಟ್ಟುಕೊಂಡ. ಅಂಗಡಿ ಮಾಲೀಕ, ಅವನಿಗೆ ವೈದ್ಯಕೀಯ ಶುಶ್ರೂಷೆ ಕೊಡಿಸುವುದರ ಬದಲು ಮನೆಗೆ ಕಳುಹಿಸಿದ.







### 2.4.5.3 ಕೇಸ್ ಸ್ಟಡಿ – 3

ಸೋನಿಯಾ 10 ವರ್ಷದವಳು. ಅವಳನ್ನು ಉತ್ತರ ಪ್ರದೇಶದ ಗೋರಖ್‌ಪುರದಿಂದ ಬೆಂಗಳೂರಿಗೆ ಮನೆಯೊಂದರಲ್ಲಿ ಕೆಲಸ ಮಾಡಲು ಕರೆತರಲಾಗಿತ್ತು. ಅವಳ ಮನೆಯ ಮಾಲೀಕ ಡಾಕ್ಟರ್ ಮತ್ತು ಅವನ ಹೆಂಡತಿ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದಳು. ಅವಳ ಪೋಷಕರಿಗೆ, ಅವಳನ್ನು ಶಾಲೆಗೆ ಕಳುಹಿಸುತ್ತೇವೆ ಎಂದು ನಂಬಿಸಿ ಕರೆತರಲಾಗಿತ್ತು.


ಆದರೆ ಅವು ಮಧ್ಯವರ್ತಿಯ ಆಶ್ವಾಸನೆಗಳು ಮಾತ್ರ. ಸೋನಿಯಾ ಮನೆಯ ಎಲ್ಲಾ ಕೆಲಸಗಳನ್ನು ಮಾಡಬೇಕಾಗಿತ್ತು. ಮನೆಯವರು ಹೊರಗೆ ಕೆಲಸಕ್ಕೆ ಹೋಗುವಾಗ ಅವಳನ್ನು ಮನೆಯಲ್ಲಿ ಕೂಡಿಹಾಕಿ ಬೀಗ ಹಾಕಿ ಹೋಗುತ್ತಿದ್ದರು. ಅವಳಲ್ಲಿ ಯಾವಾಗಲೂ ತಪ್ಪನ್ನು ಹುಡುಕುತ್ತಿದ್ದರು. ಅವಳಿಗೆ ಮನೆಯಿಂದ ಹೊರಗೆ ಹೋಗಲು ಬಿಡುತ್ತಿರಲಿಲ್ಲ. ಅವಳು ಕೈದಿಯ ರೀತಿಯಲ್ಲಿ ಜೀವಿಸುತ್ತಿದ್ದಳು. ಅವಳು ಆಗಾಗ ಹೊಡೆತ ತಿನ್ನಬೇಕಾಗುತ್ತಿತ್ತು.





### 2.4.5.4 ಕೇಸ್ ಸ್ಟಡಿ – 4

ಶಾಲಿನಿ ಮತ್ತು ಪ್ರಿಯಾ ಮೈಸೂರಿನ ದಲಿತ ಮಹಿಳೆಯೊಬ್ಬಳ ಮಕ್ಕಳು. ಅವರನ್ನು ಅಪಹರಿಸಿ ಕೊಡಗಿನ ಪೊನ್ನಂಪೇಟೆಗೆ ತಂದು ಒಬ್ಬ ಜಮೀನುದಾರನ ಮನೆಯಲ್ಲಿ ಕೆಲಸಕ್ಕೆ ಬಿಡಲಾಗಿತ್ತು. ಅವರ ಮನೆಯಲ್ಲಿ ಹಾಸಿಗೆ ಹಿಡಿದ ಒಬ್ಬ ಮುದಿ ಮಹಿಳೆಯನ್ನು ನೋಡಿಕೊಳ್ಳಬೇಕಾಗಿತ್ತು. ಅವರು ಕಂಪೌಂಡಿನ ಹೊರಗೆ ಹೋಗುವ ಹಾಗಿಲ್ಲ. ಜಮೀನುದಾರನ ಗಂಡು ಮಕ್ಕಳು ಅವರನ್ನು ಲೈಂಗಿಕ ಹಿಂಸೆಗೆ ಒಳಪಡಿಸುತ್ತಿದ್ದರು.




### 2.4.7 ನಿರೀಕ್ಷಿತ ಫಲಿತಾಂಶ

- ಪೋಷಕರು ತಮ್ಮ ಮಕ್ಕಳ ಅವಶ್ಯಕತೆಗಳನ್ನು ಅರ್ಥಮಾಡಿಕೊಳ್ಳುತ್ತಾರೆ.
- ಮಕ್ಕಳನ್ನು ಕೆಲಸಕ್ಕೆ ಕಳುಹಿಸಿದರೆ ಏನಾಗುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳುತ್ತಾರೆ.
- ತಮ್ಮ ಮಕ್ಕಳ ಬಗ್ಗೆ ಅವರಲ್ಲಿ ಪ್ರೀತಿ ಹುಟ್ಟಿಕೊಳ್ಳುತ್ತದೆ.

### 2.4.8 ಮುಖ್ಯ ಪ್ರಶ್ನೆಗಳು

- ಯಾರನ್ನು ಮಕ್ಕಳೆಂದು ಕರೆಯುತ್ತಾರೆ?
- ನಮ್ಮ ಮನೆಗಳಲ್ಲಿ ಮಕ್ಕಳ ಪರಿಸ್ಥಿತಿ ಹೇಗಿದೆ?
- ಮಕ್ಕಳ ಮೂಲಭೂತ ಅವಶ್ಯಕತೆಗಳು ಯಾವುವು?
- ಶ್ರೀದೇವಿಗೆ 9 ವರ್ಷಕ್ಕೆ ಮದುವೆ ಮಾಡಬಹುದೇ?
- ಶ್ರೀದೇವಿ ಮನೆಯವರು ಮಾಡುತ್ತಿರುವುದು ಸರಿಯೇ?
- ಹರಿಯನ್ನು ಅಂಗಡಿಯಲ್ಲಿ ಕೆಲಸಕ್ಕೆ ಇಟ್ಟುಕೊಳ್ಳಬಹುದೇ?
  - ಅಂಗಡಿ ಮಾಲೀಕ ಮಾಡಿದ್ದು ಸರಿಯೇ?
  - ಡಾಕ್ಟರ್ ಸೋನಿಯಾಳನ್ನು ಕೆಲಸಕ್ಕೆ ನೇಮಿಸಿಕೊಳ್ಳಬಹುದೇ?
  - ಅವಳನ್ನು ಮನೆಯಲ್ಲಿ ಕೂಡಿ ಹಾಕಬಹುದೇ?
  - ನಮ್ಮ ಮಕ್ಕಳ ಮೇಲೆ ಈ ರೀತಿಯ ದೌರ್ಜನ್ಯ ನಡೆಯಬಹುದೇ?
  - ನಡೆಯದಂತೆ ಮಾಡಲು ನಾವೇನು ಮಾಡಬೇಕು?





## 2.5 'ಮಗು', 'ಬಾಲಕಾರ್ಮಿಕತೆ', 'ಬಾಲಕಾರ್ಮಿಕತೆಯ ಸ್ವರೂಪಗಳು', 'ಅಪಾಯಕಾರಿ ಬಾಲಕಾರ್ಮಿಕತೆ' ಮತ್ತು 'ನಿಕೃಷ್ಠ ಮಟ್ಟದ ಬಾಲಕಾರ್ಮಿಕತೆ'

ಸಮಯ: 60 ನಿಮಿಷಗಳು

### 2.5.1 ಉದ್ದೇಶಗಳು

- ಪೋಷಕರಿಗೆ 'ಬಾಲಕತನ' ಅಂದರೇನು ಎಂಬುದನ್ನು ಅರ್ಥಮಾಡಿಕೊಡುವುದು. ಮಕ್ಕಳಿಗೂ ಮತ್ತು ವಯಸ್ಕರಿಗೂ ಇರುವ ವ್ಯತ್ಯಾಸಗಳನ್ನು ಗುರುತಿಸಲು ಸಹಾಯ ಮಾಡುವುದು.
- ಪೋಷಕರಿಗೆ 'ಬಾಲಕಾರ್ಮಿಕತೆ' ಎಂದರೇನು ಎಂಬುದನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುವುದು.
- ಪೋಷಕರಿಗೆ ಅಪಾಯಕಾರಿ ಬಾಲಕಾರ್ಮಿಕತೆ ಮತ್ತು ನಿಕೃಷ್ಠ ಮಟ್ಟದ ಬಾಲಕಾರ್ಮಿಕತೆಯ ಬಗ್ಗೆ ಅರಿವು ಮೂಡಿಸುವುದು.
- ಪೋಷಕರಿಗೆ ತಮ್ಮ ಮಕ್ಕಳು ಬಾಲಕಾರ್ಮಿಕತೆಯಿಂದ ತಮ್ಮ ಬಾಲ್ಯವನ್ನು ಕಳೆದುಕೊಳ್ಳುತ್ತಿದ್ದಾರೆ ಎಂಬುದನ್ನು ಮನವರಿಕೆ ಮಾಡಿಕೊಡುವುದು.

### 2.5.2 ಪಠ್ಯ

ಮಕ್ಕಳು ಎಂದರೆ ಯಾರು?

14 ವರ್ಷ ಪ್ರಾಯಕ್ಕಿಂತ ಕಡಿಮೆ ಇರುವವರನ್ನು ಮಕ್ಕಳು ಎಂದು ಪರಿಗಣಿಸುತ್ತಾರೆ.

ಬಾಲಕಾರ್ಮಿಕತೆ ಎಂದರೇನು?

14 ವರ್ಷಕ್ಕಿಂತ ಕಡಿಮೆ ಪ್ರಾಯದ ಮಕ್ಕಳನ್ನು ಕೆಲಸ ಮಾಡಲು ಒತ್ತಾಯ ಮಾಡುವುದನ್ನು ಬಾಲಕಾರ್ಮಿಕತೆ ಎಂದು ಕರೆಯುತ್ತಾರೆ. ಈ ಮಕ್ಕಳು ಶಾಲೆಯಲ್ಲಿ ಕಲಿಯಬೇಕು.

ಈ ಮಕ್ಕಳು ಶಾಲೆಗೆ ಹೋಗದೆ ಕೆಲಸ ಮಾಡಿದರೆ ಆಗ

- ಅವರು ತಮ್ಮ ಶಿಕ್ಷಣ ಕಳೆದು ಕೊಳ್ಳುತ್ತಾರೆ.
- ಅವರ ಬಾಲ್ಯ ಕಳೆದು ಹೋಗುವುದು.
- ಅವರ ಆರೋಗ್ಯಕ್ಕೆ ಹಾನಿ ಆಗುವುದು.
- ಅವರಿಗೆ ಕಾಯಿಲೆಗಳು ಬರಬಹುದು.
- ಅವರು ಸಮಾಜ ಘಾತುಕ ಶಕ್ತಿಗಳಾಗಬಹುದು.



#### 2.5.2.1 ಬಾಲಕಾರ್ಮಿಕತೆಯ ಸ್ವರೂಪ

ಬಾಲಕಾರ್ಮಿಕತೆಗೆ ಹಲವಾರು ಸ್ವರೂಪಗಳು ಇವೆ. ಅವುಗಳನ್ನು ಸ್ಥೂಲವಾಗಿ ಈ ಕೆಳಗಿನಂತೆ ವಿಂಗಡಿಸಬಹುದು.

- ಮನೆಯ ಹೊಲಗಳಲ್ಲಿ ಕೆಲಸ ಮಾಡುವ ಮಕ್ಕಳು
- ಜೀತದಾಳುಗಳಾಗಿ ಕೆಲಸ ಮಾಡುವ ಮಕ್ಕಳು
- ಅಪಾಯಕಾರಿ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಮಕ್ಕಳು
- ನಗರಗಳಲ್ಲಿ ಕೆಲಸ ಮಾಡುವ ಮಕ್ಕಳು (ಪರ ಊರುಗಳಲ್ಲಿ)
- ಗಣಿಗಳಲ್ಲಿ ಕೆಲಸ ಮಾಡುವ ಮಕ್ಕಳು
- ಕಟ್ಟಡ ಮೊದಲಾದ ನಿರ್ಮಾಣಗಳಲ್ಲಿ ಕೆಲಸ ಮಾಡುವ ಮಕ್ಕಳು
- ಸೇವಾ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಮಕ್ಕಳು

ಇವುಗಳಲ್ಲಿ ಕೆಲವನ್ನು ಅಪಾಯಕಾರಿ ಕೆಲಸಗಳೆಂದು ಪರಿಗಣಿಸಲಾಗಿದೆ. ಎಲ್ಲಿ ಮಕ್ಕಳು ಕೆಲಸ ಮಾಡುವಾಗ ಸಾವನ್ನಪ್ಪಬಹುದು ಅಥವಾ ತಮ್ಮ ಅಂಗಾಂಗಗಳನ್ನು ಕಳೆದುಕೊಳ್ಳುವ ಸಂಭವ ಇರಬಹುದೊ. (ತಾತ್ಕಾಲಿಕವಾಗಿ ಅಥವಾ ಶಾಶ್ವತವಾಗಿ) ಅವುಗಳನ್ನು ಅಪಾಯಕಾರಿ ಕೆಲಸಗಳೆಂದು ಪರಿಗಣಿಸಲಾಗಿದೆ.

#### 2.5.2.2 ನಿಕೃಷ್ಟ ಮಟ್ಟದ ಬಾಲಕಾರ್ಮಿಕತೆ

ಬಾಲಕಾರ್ಮಿಕತೆಯ ಕೆಲವೊಂದು ಕೆಲಸದ ಪರಿಸ್ಥಿತಿಯನ್ನು ನಿಕೃಷ್ಟ ಮಟ್ಟದ ಬಾಲಕಾರ್ಮಿಕತೆ ಎಂದು ಪರಿಗಣಿಸಲಾಗಿದೆ.

- ಸಾಗಾಟವಾಗುವ ಮಕ್ಕಳು
- ಒತ್ತಾಯದ ಜೀತ
- ಮಕ್ಕಳನ್ನು ಯುದ್ಧದಲ್ಲಿ / ಜಗಳದಲ್ಲಿ ಭಾಗವಹಿಸುವಂತೆ ಮಾಡುವುದು.
- ಮಕ್ಕಳನ್ನು ವ್ಯಭಿಚಾರಕ್ಕೆ ಇಳಿಸುವುದು
- ಮಕ್ಕಳನ್ನು ಕೆಟ್ಟ ಕೆಲಸ ಮಾಡಲು ಪ್ರಚೋದಿಸುವುದು
- ಮಕ್ಕಳು – ಶಿಕ್ಷಣ ಮತ್ತು ಅವರ ಬೌದ್ಧಿಕ, ಮಾನಸಿಕ ಬೆಳವಣಿಗೆಗೆ ಅಡ್ಡಿಯಾಗುವ ಎಲ್ಲಾ ಪ್ರಕ್ರಿಯೆಗಳು.

### 2.5.3 ವಿಧಾನಗಳು

- ಉಪನ್ಯಾಸ
- ಪ್ರಾತ್ಯಕ್ಷಿಕೆ
- ನಿರ್ದೇಶಿತ ಮಾತುಕತೆ



### 2.5.4 ಪರಿಕರಗಳು

- ಚಿತ್ರಗಳು
- ಕರಿಹಲಗೆ
- ಕಂದು ಬಣ್ಣದ ಹಾಳೆಗಳು
- ಬಣ್ಣದ ಪೆನ್ನುಗಳು
- ಕತ್ತರಿ, ಟೇಪ್, ಮಾರ್ಕರ್ಸ್

### 2.5.5 ಪ್ರಕ್ರಿಯೆ

ತರಬೇತುದಾರರು ಚಿಕ್ಕ ಉಪನ್ಯಾಸದ ಮೂಲಕ ಹಾಗೂ ಈ ಕೆಳಗಿನ ಪ್ರಶ್ನೆಗಳನ್ನು ಕೇಳುವ ಮೂಲಕ ಅವಧಿಯನ್ನು ಆರಂಭಿಸುವರು.

- ನಿಮ್ಮ ಊರಿನಲ್ಲಿ ಶಾಲೆ ಇದೇಯೇ?
- ಶಾಲೆ ಇದ್ದರೆ ಅದರಲ್ಲಿ ಯಾವ ಯಾವ ತರಗತಿಗಳಿವೆ?
- ನಿಮ್ಮ ಮಕ್ಕಳು ಶಾಲೆಗೆ ಹೋಗುತ್ತಿದ್ದಾರೆಯೇ?
- ಇಲ್ಲದೆ ಇದ್ದರೆ ಅವರು ಏನು ಮಾಡುತ್ತಿದ್ದಾರೆ?


ತರಬೇತುದಾರರು ಈ ಕೆಳಗಿನ ಚಿತ್ರಗಳನ್ನು ತೋರಿಸುವುದರ ಮೂಲಕ "ಬಾಲಕಾರ್ಮಿಕತೆ" ಎಂದರೇನು ಎಂಬುದನ್ನು ವಿವರಿಸುವರು.








ತರಬೇತುದಾರರು ಬಾಲಕಾರ್ಮಿಕತೆಯ ವಿವಿಧ ಸ್ವರೂಪಗಳನ್ನು ಈ ಕೆಳಗಿನ ಚಿತ್ರಗಳನ್ನು ತೋರಿಸಿ ಚರ್ಚಿಸುವುದರ ಮೂಲಕ ವಿವರಿಸುವರು.



















ತರಬೇತುದಾರರು ಮಕ್ಕಳು ಕೆಲಸ ಮಾಡುವಾಗ ಉಂಟಾಗುವ ಅಪಘಾತಗಳ ಬಗ್ಗೆ ಚರ್ಚೆ ಆರಂಭಿಸುವರು. ಶಿಬಿರಾರ್ಥಿಗಳಿಗೆ ಈ ಕೆಳಗಿನ ಚಿತ್ರಗಳನ್ನು ತೋರಿಸುವರು. ಅವರಿಗೆ ಅಪಾಯಕಾರಿ ಬಾಲಕಾರ್ಮಿಕತೆ ಎಂದರೆ ಏನು ಎಂಬುದನ್ನು ವಿವರಿಸುವರು.





ತರಬೇತುದಾರರು ನಿಕೃಷ್ಠ ಮಟ್ಟದ ಬಾಲಕಾರ್ಮಿಕತೆಯನ್ನು ಈ ಕೆಳಗಿನ ಚಿತ್ರದ ಮೂಲಕ ವಿವರಿಸುವರು.




ನಿರ್ದೇಶಿತ ಮಾತುಕತೆಯ ಮೂಲಕ ತರಬೇತುದಾರರು ಶಿಬಿರಾರ್ಥಿಗಳನ್ನು ಈ ಕೆಳಗಿನ ನಿಲುವಿಗೆ ತರುವಂತೆ ಪ್ರೋತ್ಸಾಹಿಸುವರು.

- ಬಾಲಕಾರ್ಮಿಕತೆ ಮಕ್ಕಳ ಬೆಳವಣಿಗೆಗೆ ಮತ್ತು ಅವರ ಮುಂದಿನ ಜೀವನಕ್ಕೆ ಹಾನಿಕಾರಕ.
- ಅವರು ಮಕ್ಕಳನ್ನು ಕೆಲಸದಿಂದ ಬಿಡಿಸಿ ಶಾಲೆಗೆ ಕಳುಹಿಸಬೇಕು.
- ಅವರು ತಮ್ಮ ಸಮುದಾಯದಲ್ಲಿ ಬಾಲಕಾರ್ಮಿಕತೆಯನ್ನು ನಿರ್ಮೂಲನೆ ಮಾಡಬೇಕು.
- ಬಾಲಕಾರ್ಮಿಕತೆಯಿಂದ ಆಗುವ ಸಂಪಾದನೆ ಅತ್ಯಂತ ಕಡಿಮೆ ಅದನ್ನು ಅವರು ಸರಿದೂಗಿಸಬೇಕು.

### 2.5.6 ನಿರೀಕ್ಷಿತ ಫಲಿತಾಂಶ

- ಶಿಬಿರಾರ್ಥಿಗಳು ಬಾಲಕಾರ್ಮಿಕತೆ ತಮ್ಮ ಮಕ್ಕಳಿಗೆ ಹಾನಿಕಾರಕ ಎಂಬುದನ್ನು ಅರ್ಥ ಮಾಡಿಕೊಳ್ಳುವರು.
- ಶಿಬಿರಾರ್ಥಿಗಳು ತಮ್ಮ ಮಕ್ಕಳನ್ನು ಕೆಲಸದಿಂದ ಬಿಡಿಸಿ ಶಾಲೆಗೆ ಕಳುಹಿಸಲು ನಿರ್ಧಾರಮಾಡುವರು.





### 2.5.7 ಮುಖ್ಯ ಪ್ರಶ್ನೆಗಳು

- ಮಗು ಎಂದರೆ ಯಾರು?
- ಬಾಲಕಾರ್ಮಿಕತೆ ಎಂದರೇನು?
- ಅಪಾಯಕಾರಿ ಬಾಲಕಾರ್ಮಿಕತೆ ಎಂದರೇನು?
- ಉದಾಹರಣೆ ಕೊಡಿರಿ?
- ಬಾಲಕಾರ್ಮಿಕತೆಯನ್ನು ಏತಕ್ಕಾಗಿ ನಿಷೇಧಿಸಿದೆ?
- ನಿಕೃಷ್ಟಮಟ್ಟದ ಬಾಲಕಾರ್ಮಿಕತೆಗಳು ಯಾವುವು?
- ಬಾಲಕಾರ್ಮಿಕತೆಯಿಂದ ಕುಟುಂಬಕ್ಕೆ ಲಾಭವಾಗುವುದೇ?
- ಬಾಲಕಾರ್ಮಿಕತೆ ಮಕ್ಕಳಿಗೆ ಲಾಭವಾಗುವುದೇ?
- ನಿಮ್ಮ ವಲಯದಲ್ಲಿರುವ ಸಾಮಾನ್ಯವಾದ ಬಾಲಕಾರ್ಮಿಕತೆಯ ನಮೂನೆಗಳು ಯಾವುವು?


### 2.5.8 ಸಫಲತೆಯ ಸೂಚ್ಯಂಕ

ಮುಂದಿನ 15 ದಿನಗಳ ಒಳಗೆ ಶಿಬಿರಾರ್ಥಿಗಳು ತಮ್ಮ ಮಕ್ಕಳನ್ನು ಕೆಲಸದಿಂದ ಬಿಡಿಸಿ, ಅವರಿಗೆ ಶಿಕ್ಷಣ ಕೊಡಿಸುವ ವ್ಯವಸ್ಥೆ ಮಾಡುವರು.

### 2.5.9 ಸೂಚನೆ

- ಸಾಮಾಜಿಕ ಕಾರ್ಯಕರ್ತರು ಈ ಬಗ್ಗೆ ಪರಿಶೀಲನಾ ಕ್ರಮಗಳನ್ನು ತೆಗೆದುಕೊಳ್ಳಬೇಕು. ಅವರು ಶಿಬಿರಾರ್ಥಿಗಳ ಮನೆಗೆ ಭೇಟಿ ನೀಡಿ, ಅವರ ಮಕ್ಕಳನ್ನು ಕೆಲಸದಿಂದ ಬಿಡಿಸಿ ಶಾಲೆಗೆ ಕಳುಹಿಸುವಂತೆ ಮಾಡಬೇಕು.





## 2.6 ಬಾಲಕಾರ್ಮಿಕತೆಯ ಕಾರಣಗಳು ಮತ್ತು ಪರಿಣಾಮಗಳು

ಸಮಯ: 60 ನಿಮಿಷಗಳು

### 2.6.1 ಉದ್ದೇಶಗಳು

- ಶಿಬಿರಾರ್ಥಿಗಳಿಗೆ ಬಾಲಕಾರ್ಮಿಕತೆಯ ಕಾರಣಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಸಹಾಯ ಮಾಡುವುದು.
- ಶಿಬಿರಾರ್ಥಿಗಳಿಗೆ ಬಾಲಕಾರ್ಮಿಕತೆಯ ಪರಿಣಾಮಗಳನ್ನು ಸರಿಯಾಗಿ ಗ್ರಹಿಸಲು ಆಸ್ಪದ ಮಾಡಿಕೊಡುವುದು.
- ಬಾಲಕಾರ್ಮಿಕತೆಯಿಂದ ತಮ್ಮ ಮಕ್ಕಳು ಬಹಳಷ್ಟನ್ನು ಕಳೆದುಕೊಳ್ಳುತ್ತಿದ್ದಾರೆ ಎಂಬುದನ್ನು ಮನವರಿಕೆ ಮಾಡಿಕೊಡುವುದು.

### 2.6.2 ಪಠ್ಯ

ಈ ಕೆಳಗಿನವುಗಳನ್ನು ಬಾಲಕಾರ್ಮಿಕತೆಗೆ ಕಾರಣಗಳು ಎಂಬುದಾಗಿ ಕ್ಷೇತ್ರದಲ್ಲಿ ಪ್ರಚಲಿತದಲ್ಲಿವೆ. ಅವುಗಳನ್ನು ಸರಿಯಾಗಿ ಪರಿಶೀಲಿಸಿದರೆ, ಅವುಗಳಲ್ಲಿ ಹೆಚ್ಚಿನವುಗಳು ನಿಜವಾದ ಕಾರಣಗಳೇ ಅಲ್ಲ ಎಂಬುದು ತಿಳಿಯುತ್ತದೆ. ಅವುಗಳು ಮೇಲ್ನೋಟಕ್ಕೆ ಕಂಡುಬರುವ ಮತ್ತು ಪರಿಸ್ಥಿತಿಯನ್ನು ಯಥಾವತ್ತಾಗಿ ಕಾಪಾಡಿಕೊಳ್ಳಲು ಸ್ಥಾಪಿತ ಹಿತಾಸಕ್ತಿಗಳು ಮಾಡಿಕೊಂಡ ವ್ಯವಸ್ಥೆಯ ಫಲಿತಾಂಶ ಎಂದು ಭಾವಿಸಬಹುದು.

- ಪೋಷಕರ ಅನಕ್ಷರತೆ
- ಬಡತನ
- ಶಿಕ್ಷಣದ ಸೌಲಭ್ಯ ಇಲ್ಲದೇ ಇರುವುದು
- ನಿರುದ್ಯೋಗ
- ಶೋಷಣೆ
- ಸಾಲಗಳು
- ಮೂಢನಂಬಿಕೆ
- ಅನಾರೋಗ್ಯ
- ಕಡಿಮೆ ವೇತನ
- ಜೀತ ಪದ್ಧತಿ
- ರಾಜಕೀಯ ಇಚ್ಛಾ ಶಕ್ತಿಯ ಕೊರತೆ
- ಅನುಷ್ಠಾನದಲ್ಲಿ ಇಚ್ಛಾಶಕ್ತಿಯ ಕೊರತೆ / ಆಸಕ್ತಿ ಇಲ್ಲದೆ ಇರುವುದು.

ಈಗಾಗಲೇ ತಿಳಿಸಿರುವಂತೆ ಹೆಚ್ಚಿನವುಗಳು ಮೇಲ್ನೋಟದ ಹಾಗೂ ಮೇಲ್ಮಟ್ಟದ ಕಾರಣಗಳು. ಪೋಷಕರು ಬಡವರಾಗಿದ್ದು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿರುವುದಕ್ಕೆ ನೂರಾರು ಉದಾಹರಣೆಗಳು ನಮ್ಮ ಆಸುಪಾಸಿನ ಸಮುದಾಯದಲ್ಲಿ ಇದೆ.




ಈಗ ಹಲವಾರು ಸಾಮಾಜಿಕ ಭದ್ರತಾ ಕಾರ್ಯಕ್ರಮಗಳು ಮತ್ತು ಯೋಜನೆಗಳು ಇವೆ. ಅವುಗಳ ಸಹಾಯದಿಂದ ಪೋಷಕರು ತಮ್ಮ ಸಂಪಾದನೆ ಮತ್ತು ವೆಚ್ಚಗಳನ್ನು ಸರಿದೂಗಿಸಲು ಆಸ್ಪದ ಇದೆ. ಪೋಷಕರಿಗೆ ಗಟ್ಟಿಯಾದ ಮನೋಭಾವ ಇದ್ದರೆ, ಅವರು ನಿಜವಾಗಿಯೂ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಮತ್ತು ಬಾಲಕತನದ ಅನುಭವ ಕೊಡಿಸಲು ದಾರಿ ಕಂಡು ಕೊಳ್ಳುತ್ತಾರೆ. ಹೆಚ್ಚಿನ ಸಂದರ್ಭಗಳಲ್ಲಿ ಪೋಷಕರ ಆಲಸ್ಯ / ನಿರ್ಲಕ್ಷತೆ ಬಾಲಕಾರ್ಮಿಕತೆಗೆ ಮೂಲ ಕಾರಣ ಅವರು ಶಿಕ್ಷಣ ಎಂಬುದು ಒಂದು ಲಕ್ಷುರಿ, ಅದು ಶ್ರೀಮಂತರಿಗೆ ಮಾತ್ರ ಲಭ್ಯ, ಅವಶ್ಯಕ ಮತ್ತು ಅವರು ಮಾತ್ರ ಪಡೆಯಬಹುದು ಎಂಬ ಮನೋಭಾವನೆ ಹೊಂದಿರುತ್ತಾರೆ. ಈ ರೀತಿಯಲ್ಲಿ ಯೋಚಿಸುವುದು ಸರಿಯಲ್ಲ ಎಂಬ ವಿಚಾರವನ್ನು ಅವರಿಗೆ ಮನದಟ್ಟು ಮಾಡಿಸಬೇಕಾಗಿದೆ.

### 2.6.2.1 ಬಾಲಕಾರ್ಮಿಕತೆಯ ಪರಿಣಾಮಗಳು


ಬಾಲಕಾರ್ಮಿಕತೆಯ ಪರಿಣಾಮಗಳು ಬಹಳ ಮುಖ್ಯವಾದವು. ಪೋಷಕರು ಬಾಲಕಾರ್ಮಿಕತೆಯನ್ನು ಸರಿಯಾಗಿ ಅಂತರ್ಗತ ಮಾಡಿಕೊಂಡರೆ ಅವರೇ ಖುದ್ದಾಗಿ ತಮ್ಮ ಮಕ್ಕಳನ್ನು ಕೆಲಸದಿಂದ ಬಿಡಿಸಿ ಶಾಲೆಗೆ ಕಳುಹಿಸುವ ವ್ಯವಸ್ಥೆ ಮಾಡುತ್ತಾರೆ.

#### (ಎ) ಅನಕ್ಷರತೆ

ಬಾಲಕಾರ್ಮಿಕತೆಯಿಂದ ಮಕ್ಕಳು ಅನಕ್ಷರಸ್ಥರಾಗುವರು. ಇದರಿಂದ ಅವರು ಜೀವನವಿಡಿ ಚಿಕ್ಕ ಚಿಕ್ಕ ವಿಚಾರಗಳಿಗೆ ಇತರರನ್ನು ಅವಲಂಬಿಸ ಬೇಕಾಗುವುದು. ಇದು ಅವರ ಅಭಿವೃದ್ಧಿಗೆ ಮಾರಕವಾಗುವುದು.









**(ಬಿ) ಕಡಿಮೆ ಸಂಪಾದನೆ / ಸಂಬಳ**

ಬಾಲಕಾರ್ಮಿಕರು ದೊಡ್ಡವರಾದ ಮೇಲೆ, ಕೌಶಲ್ಯ ರಹಿತ ಕೆಲಸಗಳನ್ನು ಮಾಡಬೇಕಾಗುವುದು. ಇದರಿಂದ ಅವರಿಗೆ ಕಡಿಮೆ ಸಂಬಳ ದೊರಕುವುದು. ಶಿಕ್ಷಣ ಪಡೆದು ಹೆಚ್ಚು ಸಂಪಾದನೆ ಮಾಡಲು ಬಹಳ ಅವಕಾಶಗಳು ಇವೆ.



**(ಸಿ) ಜೀವನವು ಕಷ್ಟಮಯವಾಗಿರುವುದು**. ಇಡೀ ಜೀವಮಾನ ದುಃಖ ಮತ್ತು ನೋವಿನಿಂದ ಕೂಡಿದೆ





**(ಡಿ) ಸರಿಯಾದ ಬೆಳವಣಿಗೆ ಇರುವುದಿಲ್ಲ.**

ಬಾಲಕಾರ್ಮಿಕರು ಚಿಕ್ಕ ವಯಸ್ಸಿನಿಂದಲೇ ಕೆಲಸ ಮಾಡುವುದರಿಂದ ಹಾಗೂ ಅನಾರೋಗ್ಯ ವಾತಾವರಣದಲ್ಲಿ ಕೆಲಸ ಮಾಡುವುದರಿಂದ ಅವರ ಬೆಳವಣಿಗೆ ಸರಿಯಾಗಿ ಆಗುವುದಿಲ್ಲ. ಅವರು ಯೌವ್ವನಾವಸ್ಥೆಯಲ್ಲೇ ಮುದುಕರಂತೆ ಕಾಣುತ್ತಾರೆ.



**(ಈ) ದುರಾಭ್ಯಾಸಗಳಿಗೆ ಬಲಿಯಾಗುವುದು.**

ಬಾಲಕಾರ್ಮಿಕತೆ ಮಕ್ಕಳನ್ನು ದುಶ್ಚಟ ಕಡೆಗೆ ತೆಗೆದುಕೊಂಡು ಹೋಗಬಹುದು. ಅವರು ಕುಡಿತ ಅಥವಾ ಇತರ ದುರಭ್ಯಾಸಗಳಿಗೆ ದಾಸರಾಗಬಹುದು.






**(ಎಫ್) ಸಮಾಜ ವಿರೋಧಿ ಚಟುವಟಿಕೆಗಳಲ್ಲಿ ತೊಡಗಬಹುದು.**
ಬಾಲಕಾರ್ಮಿಕತೆ ಅವರನ್ನು ಸಮಾಜ ವಿರೋಧಿ ಚಟುವಟಿಕೆಯಲ್ಲಿ ತೊಡಗುವಂತೆ ಮಾಡಬಹುದು. ಅವರು ಮಾದಕ ದ್ರವ್ಯಗಳ ಸಾಗಾಟ, ಕಳ್ಳತನ, ದರೋಡೆ, ಸುಲಿಗೆ ಇತ್ಯಾದಿಗಳಲ್ಲಿ ತೊಡಗಬಹುದು.




**(ಜಿ) ಹೆಣ್ಣು ಮಕ್ಕಳು ಬಲಾತ್ಕಾರಕ್ಕೆ ತುತ್ತಾಗಬಹುದು.**




(ಹೆಚ್) ಬಾಲಕಾರ್ಮಿಕತೆ ಅವರನ್ನು ಕಾಯಿಲೆಗೆ ತುತ್ತಾಗಿಸಬಹುದು



(ಐ) ಬಾಲಕಾರ್ಮಿಕತೆ ಮಕ್ಕಳನ್ನು ಹೆಳವರನ್ನಾಗಿಸಬಹುದು (ಅಂಗವಿಕಲರು)



**(ಜೆ) ತಮ್ಮ ಜೀವನವನ್ನು ಕಳೆದು ಕೊಳ್ಳಬಹುದು**



**(ಕೆ)** ಮುಂದಕ್ಕೆ ಜೀವನದಲ್ಲಿ ಅವರನ್ನು ಸಮಾಜ ಮತ್ತು ಕುಟುಂಬದ ಇತರರು ನಿರಂತರವಾಗಿ ಶೋಷಣೆಗೆ ಒಳಪಡಿಸಬಹುದು – ಕಾರಣ ಅವರ ಅನಕ್ಷರತೆ, ಬಡತನ, ಅಜ್ಞಾನ, ಕೌಶಲ್ಯ ಇಲ್ಲದೆ ಇರುವುದು, ಸರಿಯಾಗಿ ಬೆಳವಣಿಗೆ ಆಗದೆ ಇರುವುದು ಇತ್ಯಾದಿ.

**(ಎಲ್)** ಬಾಲಕಾರ್ಮಿಕತೆಯಿಂದ, ದೊಡ್ಡವರಿಗೆ ಕೆಲಸ ಸಿಗದಾಗುವುದು. ಇದಲ್ಲದೆ ಅವರಿಗೆ ಸಂಬಳ ಕಡಿಮೆ ಆಗುವುದು. ಆದುದರಿಂದ ಬಾಲಕಾರ್ಮಿಕತೆ ದೊಡ್ಡವರ ಕೆಲಸದ ಮೇಲೆ ಸಹ ಪರಿಣಾಮ ಬೀರುವುದು.

**(ಎಂ) ಇತರ ಪರಿಣಾಮಗಳು**

- ಬೇರೆ ಬೇರೆ ರೀತಿಯ ನೋವುಗಳು
- ಒತ್ತಡದಿಂದ ಆಗುವ ಪರಿಣಾಮಗಳು
- ಸಂತಾನ ಹೀನತೆ

### 2.6.3 ವಿಧಾನಗಳು

- ಉಪನ್ಯಾಸ
- ಪ್ರಾತ್ಯಕ್ಷಿಕೆ
- ನಿರ್ದೇಶಿತ ಮಾತುಕತೆ
- ಗುಂಪು ಚರ್ಚೆ



### 2.6.4 ಪರಿಕರಗಳು

- ಕರಿಹಲಗೆ
- ಸೀಮೆಸುಣ್ಣ
- ಚಿತ್ರದ ಕಾರ್ಡುಗಳು
- ಮ್ಯಾನ್ಯುಯೆಲ್‌ನ ಚಿತ್ರಗಳು

### 2.6.5 ಪ್ರಕ್ರಿಯೆ

- ತರಬೇತುದಾರರು ಉಪನ್ಯಾಸದ ಮೂಲಕ ಅವಧಿಯನ್ನು ಆರಂಭಿಸಬಹುದು. ಅವರು ಶಿಬಿರಾರ್ಥಿಗಳಿಗೆ ಅವರ ಕುಟುಂಬದ ಬಗ್ಗೆ ಪ್ರಶ್ನೆಗಳನ್ನು ಕೇಳುತ್ತಾ ಅವರ ಪ್ರಕಾರ ಬಾಲಕಾರ್ಮಿಕತೆಗೆ ಕಾರಣಗಳು ಏನು ಎಂದು ಕೇಳಬಹುದು.
- ಶಿಬಿರಾರ್ಥಿಗಳು ಕೊಡುವ ಉತ್ತರಗಳನ್ನು ಕರಿಹಲಗೆಯ ಮೇಲೆ ಪಟ್ಟಿ ಮಾಡಬಹುದು.
- ಒಂದೊಂದೆ ಕಾರಣವನ್ನು ತೆಗೆದುಕೊಂಡು ಅದನ್ನು ವಿಶ್ಲೇಷಿಸಬೇಕು. ವಿಶ್ಲೇಷಿಸುವಾಗ ಆಗುವ ಚರ್ಚೆಯಲ್ಲಿ ತರಬೇತುದಾರರು ಈ ಕೆಳಗಿನ ವಿಚಾರಗಳನ್ನು ಒತ್ತಿ ಹೇಳಬೇಕು.
- ಹೆಚ್ಚಿನ ಕಾರಣಗಳು ಮೇಲ್ನೋಟ್ಟದವು. ಅವುಗಳು ಗಂಭೀರ ಕಾರಣಗಳು ಅಲ್ಲ. ಅವುಗಳು ನಿಜವಾದ ಕಾರಣಗಳೇ ಅಲ್ಲ.
- ಪೋಷಕರು ಮನಸ್ಸು ಮಾಡಿದರೆ, ಈ ಕಾರಣಗಳಿಂದ ಯಾವುದೇ ತೊಂದರೆ ಆಗುವುದಿಲ್ಲ. ಕಾರಣಗಳು ಇರುವುದೇ ಇಲ್ಲ.
- ಮಕ್ಕಳಿಗೆ ರಕ್ಷಣೆ ಕೊಟ್ಟರೆ ಅವರ ಬಡತನ ಹೋಗುತ್ತದೆ ಮತ್ತು ಮುಂದೆ ಅವರ ವೃದ್ದಾಪ್ಯದಲ್ಲಿ ಆಸರೆ ಆಗುತ್ತದೆ. ಮಕ್ಕಳು ಶಿಕ್ಷಣ ಪಡೆದುಕೊಂಡರೆ, ಅವರು ಹೆಚ್ಚು ಸಂಪಾದಿಸುವ ಒಳ್ಳೆಯ ಕೆಲಸಕ್ಕೆ ಹೋಗುತ್ತಾರೆ. ಅವರು ಹೆಚ್ಚು ಸಂಪಾದಿಸುತ್ತಾರೆ. ಇಡೀ ಕುಟುಂಬದ ಬಡತನ ನಿವಾರಣೆಯಾಗುತ್ತದೆ.
- ಎಷ್ಟೆ ಬಡತನ ಇದ್ದರೂ ಮಕ್ಕಳು ಕಷ್ಟ ಪಟ್ಟು ಶಿಕ್ಷಣ ಪಡೆದುಕೊಂಡ ಸಾವಿರಾರು ಉದಾಹರಣೆಗಳು ಇವೆ.
- ತರಬೇತುದಾರರು ವಿಶ್ವೇಶ್ವರಯ್ಯ ಮತ್ತು ನರಸಿಂಹಯ್ಯ ಅವರ ಉದಾಹರಣೆಗಳನ್ನು ಕೊಡಬಹುದು.


### 2.6.6 ಕೇಸ್ ಸ್ಟಡಿ

ರಾಮಯ್ಯ ರಂಗಾಪುರ ಹಳ್ಳಿಯಲ್ಲಿ ಕೂಲಿಕಾರ್ಮಿಕ. ಅವನು ಭೂ ರಹಿತನಾಗಿದ್ದು ಹುಲ್ಲಿನ ಮನೆಯಲ್ಲಿ ತನ್ನ ಹೆಂಡತಿ ಮತ್ತು ಇಬ್ಬರು ಮಕ್ಕಳೊಂದಿಗೆ ವಾಸವಾಗಿದ್ದ. ಮಕ್ಕಳಲ್ಲಿ ಹುಡುಗ ದೊಡ್ಡವ ಮತ್ತು ಹುಡುಗಿ ಸಣ್ಣವಳು. ಅವನ ಹೆಂಡತಿಗೆ ಎರಡನೆ ಹೆರಿಗೆಯಲ್ಲಿ ಆದ ತೊಂದರೆಯಿಂದ ಹೊರಗೆ ಹೋಗಿ ಕೆಲಸ ಮಾಡಲು ಆಗುತ್ತಿಲ್ಲ., ಅವಳ ಮನೆಯ ಕೆಲಸ ಕಾರ್ಯಗಳನ್ನು ಮಾತ್ರ ಮಾಡಲು ಸಾಧ್ಯ. ರಾಮಯ್ಯ ಕುಟುಂಬದ ಏಕೈಕ ಸಂಪಾದಿಸುವ ವ್ಯಕ್ತಿ.


ಅವನಿಗೆ ನಿರಂತರವಾಗಿ ಕೂಲಿ ಸಿಗುತ್ತಿರಲಿಲ್ಲ. ರಾಮಯ್ಯ ಕೆಲವು ವಾರ ರೂ.200–250 ಸಂಪಾದಿಸುತ್ತಿದ್ದ. ಕೆಲವು ವಾರ ರೂ 40–100 ಸಂಪಾದನೆ ಆಗುತ್ತಿತ್ತು. ಅವನ ಮಗುವಿಗೆ 6 ವರ್ಷ ಆದಾಗ ರಾಮಯ್ಯ ಅವನನ್ನು ಶಾಲೆಗೆ ಸೇರಿಸಿದ. ಅವನ ಸ್ನೇಹಿತರು ಅವನಿಗೆ ಮಗನನ್ನು ಶಾಲೆಗೆ ಸೇರಿಸಬೇಡ, ಜೀತಕ್ಕೆ ಹಾಕು ಎಂದು ಉಪದೇಶ




ಮಾಡಿದರು. ಆದರೆ ರಾಮಯ್ಯ ಅವರ ಮಾತನ್ನು ಕೇಳಲಿಲ್ಲ. ಮಗಳನ್ನು ಅಂಗನವಾಡಿಗೆ ಕಳುಹಿಸಲು ಆರಂಭಿಸಿದ. ರಾಮಯ್ಯನ ಹೆಂಡತಿ ಸ್ವ ಸಹಾಯ ಸಂಘದ ಸದಸ್ಯಳಾಗಿದ್ದಳು. ಸಂಘದ ಸಾಲದಿಂದ ಒಂದು ಹಸುವನ್ನು ಖರೀದಿಸಿ ಹಾಲು ವ್ಯಾಪಾರ ಆರಂಭಿಸಿದಳು. ಇದರಿಂದ ಕುಟುಂಬದ ಆದಾಯ ಹೆಚ್ಚಾಯಿತು. ಮಧ್ಯದಲ್ಲಿ ರಾಮಯ್ಯನ ಮಗ ಹಳ್ಳಿಯ ಶಾಲೆಯ ಶಿಕ್ಷಣ ಮುಗಿಸಿದ ಹಳ್ಳಿಯ ಜಮೀನುದಾರ, ರಾಮಯ್ಯನ ಹತ್ತಿರ ಅವನ ಮಗನನ್ನು ದನ ಮೇಯಿಸಲು ಕಳುಹಿಸಿಕೊಡಲು ತಿಳಿಸಿದ. ರಾಮಯ್ಯ ಒಪ್ಪಲಿಲ್ಲ. ಮಗನ್ನು ಪಕ್ಕದ ಊರಿನ ಹೈಸ್ಕೂಲಿಗೆ ಸೇರಿಸಿದ. ಹೈಸ್ಕೂಲು ವಿಧ್ಯಾಭ್ಯಾಸದ ನಂತರ ಕಾಲೇಜು ಸೇರಿದ. ನಂತರ ಇಂಜಿನಿಯರಿಂಗ್ ಕಾಲೇಜು ಸೇರಿ ಪದವಿ ಪಡೆದು ಇನ್‌ಫೋಸಿಸ್‌ನಲ್ಲಿ ಕೆಲಸಕ್ಕೆ ಸೇರಿದ. ರಾಮಯ್ಯನ ಮಗ ಬುದ್ಧಿವಂತನಾಗಿದ್ದ ಕಷ್ಟ ಪಟ್ಟ ಕಲಿತ. ಅವನಿಗೆ ವಿದ್ಯಾರ್ಥಿವೇತನ ಸಿಕ್ಕಿದ್ದರಿಂದ ಅವನ ಕಲಿಕೆ ಸುಲಭವಾಯಿತು. ರಾಮಯ್ಯನ ಮಗ ಹಳ್ಳಿಯಲ್ಲಿ ಭೂಮಿ ಖರೀದಿಸಿ, ತಂದೆ ತಾಯಿಗೆ ಒಳ್ಳೆಯ ಮನೆ ಕಟ್ಟಿಸಿದ.



ಮುಂದೆ ರಾಮಯ್ಯನ ಮಗಳು ಸಹ ಕಲಿತು ಪದವೀಧರೆ ಆಗಿ, ಪಕ್ಕದ ಹೈಸ್ಕೂಲಿನಲ್ಲಿ ಶಿಕ್ಷಕಿಯಾದಳು. ರಾಮಯ್ಯ ಸಂತೃಪ್ತ ಜೀವನ ನಡೆಸುತ್ತಿದ್ದಾನೆ.







ರಾಮಯ್ಯ ತನ್ನ ಮಗನನ್ನು ಶಾಲೆಗೆ ಕಳುಹಿಸದೇ ಇದ್ದರೆ ಏನಾಗುತಿತ್ತು ಯೋಚಿಸಿರಿ?


ಕೇಸ್‌ಸ್ಟಡಿ ಚರ್ಚೆ ಆದ ನಂತರ, ತರಬೇತುದಾರರು ಬಾಲಕಾರ್ಮಿಕತೆಯ ಪರಿಣಾಮಗಳನ್ನು ಒಂದೊಂದಾಗಿ ಶಿಬಿರಾರ್ಥಿಗಳ ಮೂಲಕ ಮಂಡಿಸಬಹುದು. ತರಬೇತಿ ಕೈಪಿಡಿಯಲ್ಲಿರುವ ಚಿತ್ರಗಳನ್ನು ತೋರಿಸಿ ವಿವರಿಸಬಹುದು ಅಥವಾ ಚಿತ್ರ ತೋರಿಸಿ, ಶಿಬಿರಾರ್ಥಿಗಳ ಹತ್ತಿರ ವಿವರಿಸಲು ಹೇಳಬಹುದು.

ತರಬೇತುದಾರರು ಬಾಲಕಾರ್ಮಿಕತೆಯು ಪೋಷಕರಿಗೆ ಮತ್ತು ಮಕ್ಕಳಿಗೆ ಲಾಭಕರವಲ್ಲ ಎಂಬುದನ್ನು ಮನದಟ್ಟು ಮಾಡಬೇಕು.

### 2.6.7 ನಿರೀಕ್ಷಿತ ಫಲಿತಾಂಶಗಳು

- ಶಿಬಿರಾರ್ಥಿಗಳು ಬಾಲಕಾರ್ಮಿಕತೆಯು ತಮಗಾಗಲಿ ಅಥವಾ ತಮ್ಮ ಮಕ್ಕಳಿಗಾಗಲಿ ಲಾಭಕರವಲ್ಲ ಎಂಬುದನ್ನು ಅರ್ಥಮಾಡಿಕೊಳ್ಳುತ್ತಾರೆ.
- ಶಿಬಿರಾರ್ಥಿಗಳು ತಮ್ಮ ಮಕ್ಕಳನ್ನು ಕೆಲಸದ ವಾತಾವರಣದಿಂದ ಬಿಡಿಸಿ ಶಾಲೆಗೆ ಕಳುಹಿಸಲು ನಿರ್ಧಾರ ತೆಗೆದುಕೊಳ್ಳುವರು.





## 2.7 ಮಕ್ಕಳನ್ನು ಬೆಳೆಸುವಲ್ಲಿ ಪೋಷಕರ ಜವಾಬ್ದಾರಿಗಳು

ಸಮಯ: 60 ನಿಮಿಷಗಳು

### 2.7.1 ಉದ್ದೇಶಗಳು

- ಶಿಬಿರಾರ್ಥಿಗಳಿಗೆ ಮಕ್ಕಳನ್ನು ಸರಿಯಾಗಿ ಬೆಳೆಸುವುದು ಅವರ ಜವಾಬ್ದಾರಿ ಎಂಬುದನ್ನು ಅರ್ಥ ಮಾಡಿಸುವುದು.
- ಪೋಷಕರು ಮಕ್ಕಳಿಗೆ ಉತ್ತಮ ಶಿಕ್ಷಣ, ಆಹಾರ, ವಸತಿ, ಭದ್ರತೆ ಒದಗಿಸುವುದು ಅವಶ್ಯಕ ಎಂಬುದನ್ನು ಅರ್ಥ ಮಾಡಿಸುವುದು.
- ಮಕ್ಕಳನ್ನು ಸರಿಯಾಗಿ ಬೆಳೆಸಿ ಅವರಿಗೆ ಉತ್ತಮ ಶಿಕ್ಷಣವನ್ನು ಕೊಟ್ಟರೆ ಅವರು ತಮ್ಮ ವೃದ್ದಾಪ್ಯದಲ್ಲಿ ಸರಿಯಾದ ಜೀವನ ನಡೆಸಿಕೊಳ್ಳುತ್ತಾರೆ ಎಂಬ ವಿಚಾರವನ್ನು ಮನದಟ್ಟು ಮಾಡುವುದು.

### 2.7.2 ಪಠ್ಯ

ಪೋಷಕರಿಗೆ ತಮ್ಮ ಮಕ್ಕಳ ಬಗ್ಗೆ ಕೆಲವು ಜವಾಬ್ದಾರಿಗಳಿವೆ. ಉತ್ತಮ ಪೋಷಕರಾಗಿ ಪರಿಗಣಿಸ ಬೇಕಿದ್ದರೆ, ಅವರು ಜವಾಬ್ದಾರಿಗಳನ್ನು ಪೂರೈಸಬೇಕು. ಮಕ್ಕಳನ್ನು ಹುಟ್ಟಿಸಿದರೆ ಸಾಕಾಗುವುದಿಲ್ಲ. ಮಕ್ಕಳನ್ನು ಸರಿಯಾಗಿ ಬೆಳೆಸಬೇಕು ಹಾಗೂ ಮಕ್ಕಳಿಗೆ ಈ ಕೆಳಗಿನ ಅವಶ್ಯಕತೆಗಳನ್ನು ಒದಗಿಸಬೇಕು.

- ಒಳ್ಳೆಯ ವಸತಿ ವ್ಯವಸ್ಥೆ
- ಸರ್ವಾಂಗೀಣ ಬೆಳವಣಿಗೆಗೆ ಅವಶ್ಯಕವಾದ ಒಳ್ಳೆಯ ಶಿಕ್ಷಣದ ವ್ಯವಸ್ಥೆ
- ಅವರ ಮಾನಸಿಕ ಮತ್ತು ಬೌದ್ಧಿಕ ಬೆಳವಣಿಗೆಗೆ ಅವಶ್ಯಕವಾದ ಮತ್ತು ಆರೋಗ್ಯಕರವಾದ ವಾತಾವರಣ
- ಪೌಷ್ಟಿಕ ಆಹಾರದ ವ್ಯವಸ್ಥೆ
- ಉತ್ತಮ ರಕ್ಷಣೆ


ಮಕ್ಕಳ ಮಧ್ಯೆ ಲಿಂಗದ ಆಧಾರದಲ್ಲಿ ತಾರತಮ್ಯವನ್ನು ಮಾಡಬಾರದು. ಪೋಷಕರು ತಮ್ಮ ಮಕ್ಕಳ ವಿಮಾ ಪಾಲಿಸಿ ಇದ್ದಂತೆ ಎಂಬುದಾಗಿ ಭಾವಿಸಬೇಕು. ಮಕ್ಕಳನ್ನು ಉತ್ತಮವಾಗಿ ಸಾಕಿ, ಒಳ್ಳೆ ಶಿಕ್ಷಣ ಕೊಟ್ಟರೆ ಅವರು ಹೆಚ್ಚು ಸಂಪಾದಿಸುತ್ತಾರೆ ಮತ್ತು ಪಾಲಕರನ್ನು ವೃದ್ದಾಪ್ಯದಲ್ಲಿ ಒಳ್ಳೆಯದಾಗಿ ನೋಡಿಕೊಳ್ಳುತ್ತಾರೆ. ಅವರನ್ನು ಬಾಲಕಾರ್ಮಿಕನ್ನಾಗಿ ಮಾಡಿದರೆ ಅದನ್ನು ಲ್ಯಾಪ್ಸ್ ಆದ ವಿಮಾ ಪಾಲಿಸಿ ಎಂದು ಭಾವಿಸಬೇಕಾಗುವುದು.



### 2.7.2.1 ಅಫ್ಜಲ್‌ಪುರದ ಸಹೋದರರ ಕಥೆ

ಅಫ್ಜಲ್‌ಪುರದಲ್ಲಿ ರೆಹಮಾನ್ ಮತ್ತು ಖಾದರ್ ಎಂಬ ಸಹೋದರರು ಇದ್ದರು. ಇಬ್ಬರೂ ಸಹ ಕೂಲಿ ಕಾರ್ಮಿಕರು ಹಾಗೂ ಭೂ ರಹಿತರು. ಮುಂದೆ ಅವರಿಗೆ ಮದುವೆ ಆಯಿತು. ಕಾಲಾಂತರದಲ್ಲಿ ಇಬ್ಬರಿಗೂ ಮೂರು ಮೂರು ಮಕ್ಕಳಾದವು.

ರೆಹಮಾನ್ ಮತ್ತು ಅವನ ಹೆಂಡತಿ ಮಕ್ಕಳಿಗೆ ಶಿಕ್ಷಣ ಕೊಡಿಸುವ ಬಗ್ಗೆ ನಿರ್ಧಾರವನ್ನು ತೆಗೆದುಕೊಂಡು, ಅವರನ್ನು ಶಾಲೆಗೆ ಸೇರಿಸಿದರು.




ಖಾದರ್ ಮಕ್ಕಳನ್ನು ಶಾಲೆಗೆ ಸೇರಿಸುವುದು ವ್ಯರ್ಥ ಎಂದು ಭಾವಿಸಿದನು. ಹಿರಿಯ ಮಗನನ್ನು ಗ್ಯಾರೇಜಿಗೆ ಕೆಲಸಕ್ಕೆ ಸೇರಿಸಿದನು. ಕಿರಿಯ ಮಗನನ್ನು ಹೋಟೆಲ್‌ಗೆ ಸೇರಿಸಿದನು. ಮಗಳು ಮನೆಯಲ್ಲಿ ತಾಯಿ ಜೊತೆಯಲ್ಲಿ ಬೀಡಿ ಕಟ್ಟುತ್ತಿದ್ದಳು.







ರೆಹಮಾನನ ಮಕ್ಕಳು ಹಳ್ಳಿ ಶಾಲೆಯ ಶಿಕ್ಷಣ ಮುಗಿಸಿದರು, ಅನಂತರ ಹೈಸ್ಕೂಲಿಗೆ ಹೋದರು ಅಲ್ಲಿಂದ ಮುಂದೆ ಕಾಲೇಜಿಗೆ ಹೋದರು. ಮಕ್ಕಳು ಬುದ್ಧಿವಂತರಾಗಿದ್ದರು. ಕಾಲೇಜು ಶಿಕ್ಷಣ ಪಡೆಯಲು ಬ್ಯಾಂಕಿನಿಂದ ಸಾಲ ಪಡೆದಿದ್ದರು. ಅವರ ದೊಡ್ಡ ಮಗ ಮತ್ತು ಮಗಳು ಹೈಸ್ಕೂಲು ಶಿಕ್ಷಕರಾದರು. ಸಣ್ಣ ಮಗ ಪಶು ವೈದ್ಯನಾದನು. ಮೂರು ಜನರು ತಾವು ಕೆಲಸ ಮಾಡುವಲ್ಲಿ ಮನೆ ಕಟ್ಟಿಕೊಂಡು ವಾಸವಾಗಿದ್ದಾರೆ. ಅವರು ತಮ್ಮ ತಂದೆ ತಾಯಿಗೆ ಸಹ ಸ್ವಲ್ಪ ಸ್ಥಳಖರೀದಿಸಿ ಮನೆ ಕಟ್ಟಿ ಕೊಟ್ಟಿರುತ್ತಾರೆ. ರೆಹಮಾನ್ ಮತ್ತು ಅವನ ಹೆಂಡತಿ ಸ್ವಲ್ಪ ಸಮಯ ತಮ್ಮ ಮಕ್ಕಳ ಮನೆಯಲ್ಲಿ ಕಳೆಯುತ್ತಾರೆ. ಸ್ವಲ್ಪ ಸಮಯ ತಮ್ಮ ಮನೆಯಲ್ಲಿ ಕಳೆಯುತ್ತಾರೆ.






ಗ್ಯಾರೇಜಿನಲ್ಲಿ ಕೆಲಸ ಮಾಡುತ್ತಿದ್ದ ಖಾದರ್‌ನ ಮಗ ರೌಡಿ ಆದ. ಅವನು ಕೊಲೆ, ಅಪಹರಣ ಮುಂತಾದವುಗಳಲ್ಲಿ ಭಾಗಿಯಾಗಲು ಪ್ರಾರಂಭಿಸಿದ. ಒಂದು ದಿವಸ ಅವನನ್ನು ಪೊಲೀಸರು ಬಂಧಿಸಿ ಅವನ ಮೇಲೆ ಮೊಕದ್ದಮೆ ಹೂಡಿದರು. ಅವನಿಗೆ ನ್ಯಾಯಾಲಯ ಮರಣ ದಂಡನೆ ವಿಧಿಸಿತು. ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದ ಎರಡನೆಯ ಮಗನಿಗೆ ಏಡ್ಸ್ ತಗುಲಿತು. ಮಗಳು ಬಹಳ ಕಷ್ಟ ಪಟ್ಟು ಕೆಲಸ ಮಾಡುವವಳಾಗಿದ್ದರೂ ಸಹ ಅವಳು ಅನಕ್ಷರಸ್ಥೆಯಾದ್ದರಿಂದ ಇನ್ನೊಬ್ಬ ಕೂಲಿಯವನನ್ನು ಮದುವೆ ಆಗ ಬೇಕಾಯಿತು. ಖಾದರ್ ಮತ್ತು ಅವನ ಹೆಂಡತಿ ಬೇಸರದಿಂದ ಮತ್ತು ಬಡತನದಿಂದ ತಮ್ಮ ಮುಪ್ಪಿನ ಜೀವನ ಸಾಗಿಸಬೇಕಾಯಿತು.






### 2.7.2.2 ಬಿರಾದರ್‌ನ ಕಥೆ


ಬಿರಾದರ್ ನರಸಾಪುರದ ಸಣ್ಣ ರೈತ. ಅವನು ಮಧ್ಯದ ದಾಸನಾಗಿದ್ದು ಎಲ್ಲಾ ಸಂಪಾದನೆಯನ್ನು ಕುಡಿತದ ಮೇಲೆ ವೆಚ್ಚ ಮಾಡುತ್ತಿದ್ದ.



ಸಾಧ್ಯವಿರುವ ಎಲ್ಲಾ ಕಡೆಗಳಲ್ಲಿ ಸಾಲ ಮಾಡಿದ್ದ. ಅವನಿಗೆ ಮದುವೆ ಆಗಿದ್ದು ಮೂರು ಮಕ್ಕಳು ಇದ್ದರು. ಮೊದಲಿನ ಎರಡು ಗಂಡು ಮಕ್ಕಳು ಶಾಲೆಗೆ ಹೋಗುತ್ತಿದ್ದರು ಮತ್ತು ಕೊನೆಯ ಮಗಳು ಅಂಗನವಾಡಿಗೆ ಹೋಗುತ್ತಿದ್ದಳು. ಅವನಿಗೆ ಕುಡಿತಕ್ಕೆ ಸಾಲ ಸಿಗದಿದ್ದಾಗ, ಅವನು ಕುಡಿತಕ್ಕೆ ಏನು ಮಾಡುವುದು ಎಂದು ಚಡಪಡಿಸುತ್ತಿದ್ದ. ತನ್ನ ಗಂಡು ಮಕ್ಕಳನ್ನು ಶಾಲೆಯಿಂದ ಬಿಡಿಸಿ ಅವರನ್ನು ಜಮೀನುದಾರರ ಮನೆಯಲ್ಲಿ ದನ ಎಮ್ಮೆಗಳನ್ನು ಕಾಯುವ ಕೆಲಸಕ್ಕೆ ಹಾಕಿ ಅವರಿಂದ ಮುಂಗಡ ಹಣವನ್ನು ಪಡೆದು ಕುಡಿತವನ್ನು ಶುರು ಮಾಡಿದ. ಅವನ ಹೆಂಡತಿ ಇದನ್ನು ವಿರೋಧಿಸಿದಳು ಮತ್ತು ಗಂಡನಿಗೆ ಕೂಡಲೆ ಮಕ್ಕಳನ್ನು ಕೆಲಸದಿಂದ ಬಿಡಿಸಿ ತರಲು ಒತ್ತಾಯಿಸಿದಳು, ಬಿರಾದರ್ ಸಿಟ್ಟುಮಾಡಿಕೊಂಡು ಹೆಂಡತಿ ಮತ್ತು ಮಗಳಿಗೆ ಮನೆ ಬಿಟ್ಟು ಹೋಗಲು ತಿಳಿಸಿದನು.







ಅವನ ಹೆಂಡತಿ ಸ್ವ ಸಹಾಯ ಸಂಘದ ಸದಸ್ಯಳಾಗಿದ್ದಳು. ಅವಳ ಗುಂಪಿನ ಸದಸ್ಯರು ಸಹಾಯಕ್ಕೆ ಬಂದರು. ಅವರು ಅವಳನ್ನು ಗ್ರಾಮಪಂಚಾಯತ್‌ನ ಸಾಮಾಜಿಕ ನ್ಯಾಯ ಸಮಿತಿಗೆ ಕರೆದುಕೊಂಡು ಹೋಗಿ ಅಲ್ಲಿ ದೂರು ದಾಖಲಿಸಿದರು.

ಸಾಮಾಜಿಕ ನ್ಯಾಯ ಸಮಿತಿಯವರು ಬಿರಾದರ್‌ನನ್ನು ಸಮಿತಿಗೆ ಕರೆಸಿ ಅವನಿಗೆ ಬುದ್ಧಿವಾದ ಹೇಳಿದರು. ಹೆಂಡತಿ ಮಕ್ಕಳನ್ನು ಸಲಹುವುದು ಅವನ ಜವಾಬ್ದಾರಿ ಎಂದು ತಿಳಿಹೇಳಿದರು. ಅವನು ಅವರಿಗೆ ಭದ್ರತೆ ಹಾಗೂ ಸುರಕ್ಷತೆಯನ್ನು ಒದಗಿಸುವ ಜವಾಬ್ದಾರಿಯನ್ನು ಹೊಂದಿರಬೇಕು. ಅವನು ಕುಡಿತದಿಂದ ಎಲ್ಲಾ ಕಳೆದುಕೊಂಡ ಬಗ್ಗೆ ಅವನಿಗೆ ಮನವರಿಕೆ ಮಾಡಿ, ಕುಡಿತ ಬಿಡಲು ತಿಳಿಸಿದರು. ಬಿರಾದರ್ ಅವರೆಲ್ಲರ ಹಿತವಚನವನ್ನು ಕೇಳಿದ ನಂತರ ಕುಡಿತವನ್ನು ಬಿಡಲು ನಿರ್ಧರಿಸಿದನು. ಅವರಿಗೆ ತನ್ನ ಒಪ್ಪಿಗೆಯನ್ನು ಸೂಚಿಸದನು ಅವರ ಮತ್ತು ತನ್ನ ಹೆಂಡತಿಯ ಕ್ಷಮೆಯನ್ನು ಕೇಳಿದನು.

ಸ್ವ ಸಹಾಯ ಸಂಘದ ಸದಸ್ಯರ ಸಹಾಯದಿಂದ ಅವನ ಹೆಂಡತಿ ಅವನನ್ನು ಮಧ್ಯಪಾನ ಬಿಡುವ ಶಿಬಿರಕ್ಕೆ ಸೇರಿಸಿದಳು. ಬಿರಾದರ್ ಈಗ ತನ್ನ ಕುಟುಂಬದೊಂದಿಗೆ ಸಂತೋಷದಿಂದ ಜೀವಿಸುತ್ತಿದ್ದಾನೆ.




**2.7.2.3 ರಂಗಪ್ಪ ಮತ್ತು ರಂಗವ್ವಳ ಕಥೆ**

ರಂಗಪ್ಪ ಮತ್ತು ರಂಗವ್ವ ಕೂಲಿ ಕಾರ್ಮಿಕರು. ಅವರಿಗೆ ಇಬ್ಬರು ಮಕ್ಕಳು. ಮಗಳು ದೊಡ್ಡವಳು ಮಗ ಸಣ್ಣವನು. ರಂಗಪ್ಪ ಮತ್ತು ರಂಗವ್ವ ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಲು ಕನಸು ಕಾಣುತ್ತಿದ್ದರು. ಆದರೆ ಅವರು ಶಿಕ್ಷಣದ ವೆಚ್ಚದ ಬಗ್ಗೆ ಹೆದರಿ ಕೊಂಡಿದ್ದರು. ಅವರು ಶಾಲೆಯ ಮುಖ್ಯೋಪಾಧ್ಯಾಯರನ್ನು ಭೇಟಿ ಮಾಡಿ ಸಲಹೆಯನ್ನು ಕೇಳಿದರು.



ಹೆಣ್ಣು ಮಕ್ಕಳಿಗೆ ಕಾಲೇಜಿನವರೆಗೆ ಉಚಿತ ಶಿಕ್ಷಣ ದೊರೆಯುವುದು. ಅವರು ಯಾವುದೇ ಶುಲ್ಕ ಕೊಡುವ ಅವಶ್ಯಕತೆ ಇಲ್ಲ ಎಂದು ಮುಖ್ಯೋಪಾಧ್ಯಾಯರು ತಿಳಿಸಿದರು. ಮಕ್ಕಳಿಗೆ ಉಚಿತ ಪುಸ್ತಕ ಸಿಗುತ್ತದೆ. ಶಾಲೆಗಳಲ್ಲಿ ಸಮವಸ್ತ್ರ ಸಿಗುವುದು. ಉನ್ನತ ಶಿಕ್ಷಣ ಪಡೆಯಲು ಹಾಸ್ಟೆಲ್ ಸೌಲಭ್ಯ ಪಡೆಯಬಹುದು ಎಂಬುದಾಗಿ ಸಹ ತಿಳಿಸಿದರು.

ರಂಗಪ್ಪ ಮತ್ತು ರಂಗವ್ವ ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಿದರು. ಎರಡು ವರ್ಷಗಳ ನಂತರ ಮಗನನ್ನು ಸಹ ಶಾಲೆಗೆ ಸೇರಿಸಿದರು. ಮಕ್ಕಳು ಹೈಸ್ಕೂಲುವರೆಗಿನ ಶಿಕ್ಷಣವನ್ನು ಊರಿನಲ್ಲಿಯೇ ಪಡೆದರು. ಕಾಲೇಜು ಶಿಕ್ಷಣವನ್ನು ಹಾಸ್ಟೆಲಿನಲ್ಲಿ ಇದ್ದು ಪಡೆದುಕೊಂಡರು. ರಂಗಪ್ಪ ಮತ್ತು ರಂಗವ್ವನ ಮಗಳು ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಆಗಿದ್ದಾಳೆ. ಮಗ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದಾನೆ.








ಬಡವರಿಗೆ ತಮ್ಮ ಮಕ್ಕಳಿಗೆ ಶಿಕ್ಷಣ ಒದಗಿಸಲು ಬೇಕಾದಷ್ಟು ಅವಕಾಶಗಳಿವೆ

- ಶಿಕ್ಷಣಕ್ಕೆ ಶುಲ್ಕ ಇರುವುದಿಲ್ಲ.
- ಮಧ್ಯಾಹ್ನದ ಊಟ ಉಪಹಾರ ಸಿಗುವುದು.
- ಉಚಿತ ಪುಸ್ತಕಗಳು.
- ಸಮವಸ್ತ್ರ
- ವಿಧ್ಯಾರ್ಥಿ ನಿಲಯಗಳು.

ಇದಲ್ಲದೆ ಆಹಾರ, ಆರೋಗ್ಯ ಸೇವೆ, ವಸತಿ ಮುಂತಾದವುಗಳನ್ನು ಒದಗಿಸಲು ಸಾಮಾಜಿಕ ಭದ್ರತಾ ಯೋಜನೆಗಳು ಇದೆ.


## 2.7.3 ವಿಧಾನಗಳು

- ಉಪನ್ಯಾಸ
- ನಿರ್ದೇಶಿತ ಮಾತುಕತೆ
- ಕೇಸ್ ಸ್ಟಡಿಗಳ ಚರ್ಚೆ

## 2.7.4 ಪರಿಕರಗಳು

- ಕೇಸ್ ಸ್ಟಡೀಸ್
- ಕರಿಹಲಗೆ
- ಸೀಮೆಸುಣ್ಣ
- ಚಿತ್ರಗಳು
- ಕಂದು ಬಣ್ಣದ ಹಾಳೆಗಳು, ಮಾರ್ಕರ್ಸ್






## 2.7.5 ಪ್ರಕ್ರಿಯೆ

- ತರಬೇತುದಾರರು ವಿಷಯವನ್ನು ಚಿಕ್ಕ ಉಪನ್ಯಾಸದ ಮೂಲಕ ಪರಿಚಯಿಸುವರು.
- ನಿರ್ದೇಶಿತ ಮಾತುಕತೆಯ ಮೂಲಕ ಪೋಷಕರ ಜವಾಬ್ದರಿಯನ್ನು ಪಟ್ಟಿ ಮಾಡುವುದು. ಶಿಬಿರಾರ್ಥಿಗಳಿಂದ ಉತ್ತರ ಬರುವ ಹಾಗೆ ಪ್ರಶ್ನೆಗಳನ್ನು ಹಾಕಬೇಕು.
- ಒಂದೊಂದೇ ಕೇಸ್ ಸ್ಟಡಿಸ್ ತೆಗೆದುಕೊಂಡು ಚರ್ಚಿಸಬೇಕು ಮತ್ತು ವಿಶ್ಲೇಷಿಸಬೇಕು.
- ಶಿಬಿರಾರ್ಥಿಗಳು ಈ ಕೆಳಗಿನ ವಿಷಯಗಳಲ್ಲಿ ಒಮ್ಮತಕ್ಕೆ ಬರಲು ಸಹಾಯ ಮಾಡಬೇಕು.
- ಈ ಕೆಳಗಿನ ಸೌಲಭ್ಯಗಳನ್ನು ಒದಗಿಸುವುದು ಪೋಷಕರ ಜವಾಬ್ದಾರಿ.
  - ಶಿಕ್ಷಣ
  - ಆಹಾರ
  - ವಸತಿ
  - ಭದ್ರತೆ
  - ಆರೋಗ್ಯ
- ಶಿಕ್ಷಣದ ಬಗ್ಗೆ ಇರುವ ಸೌಲಭ್ಯಗಳನ್ನು ಚರ್ಚಿಸುವುದು.
- ಅಸ್ಥಿತ್ವದಲ್ಲಿ ಇರುವ ಆರೋಗ್ಯ, ವಸತಿ, ಆಹಾರಕ್ಕೆ ಸಂಬಂಧಿಸಿದಂತೆ ಸಾಮಾಜಿಕ ಭದ್ರತಾ ಕಾರ್ಯಕ್ರಮಗಳ ಬಗ್ಗೆ ಚರ್ಚಿಸುವುದು.
- ತಮ್ಮ ಮಕ್ಕಳನ್ನು ಸರಿಯಾಗಿ ಬೆಳೆಸುವುದು ಮತ್ತು ಅವರಿಗೆ ಒಳ್ಳೆಯ ಶಿಕ್ಷಣವನ್ನು ಕೊಡಿಸುವುದು ಪೋಷಕರ ಸಾಮಾಜಿಕ ಭಾಧ್ಯತೆ.

## 2.7.6 ನಿರೀಕ್ಷಿತ ಫಲಿತಾಂಶ

- ತಮ್ಮ ಮಕ್ಕಳನ್ನು ಬೆಳೆಸುವುದು ತಮ್ಮ ಜವಾಬ್ದಾರಿ ಎಂಬುದನ್ನು ಅರ್ಥ ಮಾಡಿಕೊಳ್ಳುವರು.
- ತಾವು ತಮ್ಮ ಮಕ್ಕಳಿಗೆ ಈ ಕೆಳಗಿನ ಸೌಲಭ್ಯಗಳನ್ನು ಒದಗಿಸಬೇಕು ಎಂಬುದನ್ನು ಅರ್ಥಮಾಡಿಕೊಳ್ಳುವರು
  - ಒಳ್ಳೆಯ ಶಿಕ್ಷಣ
  - ಒಳ್ಳೆಯ ಆಹಾರ
  - ಒಳ್ಳೆಯ ಆಶ್ರಯ
  - ಒಳ್ಳೆಯ ಆರೋಗ್ಯ ಸೌಲಭ್ಯ
  - ಒಳ್ಳೆಯ ಭದ್ರತೆ
- ಶಿಬಿರಾರ್ಥಿಗಳು ತಮ್ಮ ಮಕ್ಕಳನ್ನು ಒಳ್ಳೆಯದಾಗಿ ಬೆಳೆಸಿದರೆ, ವೃದ್ಧಾಪ್ಯದಲ್ಲಿ ನಮ್ಮನ್ನು ಒಳ್ಳೆಯದಾಗಿ ನೋಡಿಕೊಳ್ಳುವರು.





# 2.8 ಬಾಲಕಾರ್ಮಿಕತೆಯ ಕ್ವಿಜ್

ಸಮಯ: 60 ನಿಮಿಷಗಳು

## 2.8.1 ಉದ್ದೇಶಗಳು

- ಬಾಲಕಾರ್ಮಿಕತೆಯ ಬಗ್ಗೆ ಸರಿಯಾದ ಅರಿವು ಉಂಟು ಮಾಡುವುದು.
- ಈಗಾಗಲೆ ತಿಳಿದುಕೊಂಡ ವಿಚಾರಗಳನ್ನು ಶಿಬಿರಾರ್ಥಿಗಳಲ್ಲಿ ಸ್ಪಷ್ಟೀಕರಿಸುವುದು.
- ಶಿಬಿರಾರ್ಥಿಗಳಲ್ಲಿ ಬಾಲಕಾರ್ಮಿಕತೆ ಬಗ್ಗೆ ಆಂತರಿಕ ಕ್ರಿಯಾತ್ಮಕ ಅರಿವನ್ನು ಉಂಟು ಮಾಡುವುದು.

## 2.8.2 ವಿಧಾನಗಳು

ಕ್ವಿಜ್
ಪ್ರಶ್ನೆಗಳನ್ನು ಕೇಳುವುದು.

## 2.8.3 ಪರಿಕರಗಳು

- ಕರಿಹಲಗೆ, ಸೀಮೆಸುಣ್ಣ
- ಡ್ರಾಯಿಂಗ್ ಹಾಳೆಗಳು,
- ಕಂದು ಬಣ್ಣದ ಹಾಳೆಗಳು,
- ನಾಮ ಫಲಕಗಳು
- ಬಣ್ಣದ ಪೆನ್ನು
- ಮಾರ್ಕರ್ಸ್‌ಗಳು

## 2.8.4 ಪ್ರಕ್ರಿಯೆ

- ಶಿಬಿರಾರ್ಥಿಗಳಿಗೆ, ಇದು ಪರೀಕ್ಷೆ ಅಲ್ಲ, ಅವರ ಜ್ಞಾನವನ್ನು ಪರೀಕ್ಷೆ ಮಾಡಲು ಪ್ರಶ್ನೆಗಳನ್ನು ಕೇಳುತ್ತಿಲ್ಲ. ಇದು ಒಂದು ಮನಸ್ಸಿಗೆ ಸಂತೋಷ ಕೊಡುವ ಚಟುವಟಿಕೆ ಎಂದು ತಿಳಿಸಬೇಕು.
- ಶಿಬಿರಾರ್ಥಿಗಳನ್ನು ಸಮಾನ ಸಂಖ್ಯೆಯ ಗುಂಪುಗಳನ್ನಾಗಿ ಮಾಡಬೇಕು. ಉದಾ:– 15 ಶಿಬಿರಾರ್ಥಿಗಳು ಇದ್ದರೆ ಅವರನ್ನು 5 ಜನರ ಮೂರು ಗುಂಪುಗಳನ್ನಾಗಿ ಮಾಡಬಹುದು. ಶಿಬಿರಾರ್ಥಿಗಳ ಸಂಖ್ಯೆ ಹೆಚ್ಚು ಇದ್ದರೆ, ಕ್ವಿಜ್‌ಗೆ ಸ್ವಯಂ ಪ್ರೇರಿತರಾಗಿ ಬರಲು ಕರೆ ಕೊಡಿರಿ ಉಳಿದವರು ಪ್ರೇಕ್ಷರಾಗಿರುತ್ತಾರೆ.
- ಮೂರು ಗುಂಪುಗಳಿಗೆ ಹೆಸರು ಕೊಡಬೇಕು. ಹೆಸರಿನ ಬೋರ್ಡುಗಳು ಅವರ ಮುಂದೆ ಇಡಬೇಕು.



- ಪ್ರತಿಗುಂಪಿಗೆ 5 ಪ್ರಶ್ನೆಗಳನ್ನು ಕೇಳಾಗುವುದು. ಅವರು ಅದನ್ನು 60 ಸೆಕೆಂಡುಗಳಲ್ಲಿ ಉತ್ತರಿಸಬೇಕು. ಉತ್ತರಿಸದೆ ಇದ್ದರೆ ಅದು ಮುಂದಿನ ಗುಂಪಿಗೆ ಹೋಗುವುದು. ಈ ಗುಂಪಿಗೆ ಉತ್ತರಿಸಲು 30 ಸೆಕೆಂಡುಗಳ ಸಮಯ ಒದಗಿಸಬೇಕು.
- ಗುಂಪು ತನಗೆ ನಿಗದಿ ಪಡಿಸಿದ ಪ್ರಶ್ನೆಯನ್ನು ಉತ್ತರಿಸಿದರೆ ಅದಕ್ಕೆ 15 ಅಂಕಗಳು ದೊರೆಯುತ್ತದೆ. ಎರಡನೆ ಗುಂಪು ಉತ್ತರಿಸಿದರೆ 10 ಅಂಕಗಳನ್ನು ಮತ್ತು ಮೂರನೆ ಗುಂಪು ಉತ್ತರಿಸಿದರೆ 5 ಅಂಕಗಳನ್ನು ಕೊಡಲಾಗುವುದು.
- ಕ್ವಿಜ್ ನಡೆಸುವವರು ಸರಿಯಾಗಿ ತಯಾರಿ ಮಾಡಿಕೊಳ್ಳಬೇಕು. ಯಾವುದೇ ಆಭಾಸಕ್ಕೆ. ಅನುಮಾನಕ್ಕೆ, ವಿರಸಕ್ಕೆ ಎಡೆ ಮಾಡಿಕೊಡಬಾರದು.
- ಶಿಬಿರಾರ್ಥಿಗಳ ಸಂಖ್ಯೆ ಹೆಚ್ಚು ಇದ್ದರೆ ಶಿಬಿರಾರ್ಥಿಗಳನ್ನು ಅಂಕ ಲೆಕ್ಕ ಹಾಕುವ ಕೆಲಸಕ್ಕೆ ನೇಮಿಸಿಕೊಳ್ಳಬಹುದು ಇಲ್ಲದೆ ಇದ್ದರೆ ಅದನ್ನು ಇನ್ನೊಬ್ಬ ತರಬೇತುದಾರರು ಮಾಡಬೇಕು.

### 2.8.5 ಸಮಯ ನಿಗದಿ

| | |
|---|---|
| ತಯಾರಿ | 10 ನಿಮಿಷ |
| ಕ್ವಿಜ್ ಪ್ರಕ್ರಿಯೆ | 45 ನಿಮಿಷ |
| ಚರ್ಚೆ | 10 ನಿಮಿಷ |

### 2.8.6 ಕ್ವಿಜ್ ಪ್ರಶ್ನೆಗಳು

1. ನಿಮ್ಮ ಭಾಗದಲ್ಲಿ ಬಾಲಕಾರ್ಮಿಕರು ಹೆಚ್ಚಾಗಿ ಇರುವ ಕ್ಷೇತ್ರ.
   (ಎ) ಹೋಟೆಲ್
   (ಬಿ) ಶ್ರೀಮಂತ ವ್ಯಕ್ತಿಗಳ ಮನೆ
   (ಸಿ) ಸಾಗಾಟದ ವ್ಯವಸ್ಥೆ
   (ಡಿ) ಕೃಷಿ ಕ್ಷೇತ್ರ
2. ಮಕ್ಕಳು ಬಾಲಕಾರ್ಮಿಕರಾಗಿರುವುದರಿಂದ ಏನನ್ನು ಹೆಚ್ಚಾಗಿ ಕಳೆದುಕೊಳ್ಳುತ್ತಾರೆ.
   (ಎ) ಶಾಲೆ / ಶಿಕ್ಷಣ
   (ಬಿ) ಆಹಾರ
   (ಸಿ) ಮನೋರಂಜನೆ
   (ಡಿ) ಪ್ರೇಕ್ಷಣೀಯ ಸ್ಥಳಗಳ ವೀಕ್ಷಣೆ
3. ಮಕ್ಕಳನ್ನು ಶಾಲೆಗೆ ಕಳುಹಿಸುವ ಪ್ರಾಥಮಿಕ ಜವಾಬ್ದಾರಿ ಯಾರದ್ದು.
   (ಎ) ಪೋಷಕರು
   (ಬಿ) ಶಾಲಾ ಶಿಕ್ಷಕರು
   (ಸಿ) ಗ್ರಾಮ ಪಂಚಾಯತ್
   (ಡಿ) ಅಂಗನವಾಡಿ ಶಿಕ್ಷಕಿ
4. ಮಕ್ಕಳ ಅಭಿವೃದ್ಧಿಗೆ / ಬೆಳವಣಿಗೆಗೆ ಅವಶ್ಯವಾದವುಗಳು
   (ಎ) ಶಿಕ್ಷಣ
   (ಬಿ) ಆಹಾರ / ಆರೋಗ್ಯ
   (ಸಿ) ವಸತಿ / ಭದ್ರತೆ
   (ಡಿ) ಮೇಲಿನ ಎಲ್ಲವುಗಳು




5. ಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಳ್ಳುವ ಕಾರಣಗಳು
   (ಎ) ಅವರು ವಿರೋಧಿಸುವುದಿಲ್ಲ ಮತ್ತು ಕಡಿಮೆ ಸಂಬಳ ಕೊಡಬಹುದು
   (ಬಿ) ಎಳೆ ಪ್ರಾಯದಲ್ಲಿ ಕೆಲಸ ಮಾಡುವುದು ಮಕ್ಕಳಿಗೆ ಒಳ್ಳೆಯದು
   (ಸಿ) ತಮ್ಮ ಜೀವನದಲ್ಲಿ ಸ್ಥಿರವಾಗಲು ಒಂದು ಅವಕಾಶ
   (ಡಿ) ರಾಷ್ಟ್ರಕ್ಕೆ ತನ್ನ ಉತ್ಪಾದನೆ ಹೆಚ್ಚಿಸಿ ಕೊಳ್ಳಲು ಆಸ್ಪದ ಆಗುವುದು
6. ಹೆಚ್ಚಿನ ಬಾಲಕಾರ್ಮಿಕರು ಕೆಲಸ ಮಾಡುವ ಅವಧಿ
   (ಎ) ಪ್ರತಿ ದಿನಕ್ಕೆ ಸುಮಾರು 4 ಗಂಟೆಗಳು
   (ಬಿ) ಪ್ರತಿ ದಿನಕ್ಕೆ ಸುಮಾರು 18 ಗಂಟೆಗಳು
   (ಸಿ) ಪ್ರತಿ ದಿನಕ್ಕೆ ಸುಮಾರು 10 ಗಂಟೆಗಳು
   (ಡಿ) ಇಡೀ ದಿನ
7. ಈ ಕೆಳಗಿನವುಗಳಲ್ಲಿ ಬಾಲಕಾರ್ಮಿಕತೆಗೆ ಉದಾಹರಣೆ ಯಾವುದು.
   (ಎ) 14 ವರ್ಷದ ಬಾಲಕಿ ತನ್ನ ಮನೆಯಲ್ಲಿ ಬೆಳಿಗ್ಗೆ ಮತ್ತು ಸಂಜೆ ಮನೆಯ ಕೆಲಸದಲ್ಲಿ ಸಹಾಯ ಮಾಡುತ್ತಾಳೆ.
   (ಬಿ) 12 ವರ್ಷದ ಬಾಲಕ, ತನ್ನ ಶಾಲಾ ತೋಟದಲ್ಲಿ, ಕ್ರಾಫ್ಟ್ ಅವಧಿಯಲ್ಲಿ ಕೆಲಸ ಮಾಡುತ್ತಾನೆ.
   (ಸಿ) 11 ವರ್ಷದ ಬಾಲಕ ಶನಿವಾರ ಮಧ್ಯಾಹ್ನ ಮತ್ತು ಭಾನುವಾರ ತನ್ನ ತಾಯಿಗೆ ಸೌದೆ ಹೆಕ್ಕಲು ಸಹಾಯ ಮಾಡುತ್ತಾನೆ.
   (ಡಿ) 12 ವರ್ಷದ ಬಾಲಕಿ ತನ್ನ ಪೋಷಕರೊಂದಿಗೆ ವಾರದ 6 ದಿನಗಳಲ್ಲಿ ಕಾಫಿ ತೋಟದಲ್ಲಿ ಕೆಲಸ ಮಾಡುತ್ತಾಳೆ.
8. ಈ ಕಾರಣದಿಂದ ಬಾಲಕಾರ್ಮಿಕತೆಯನ್ನು ನಿಷೇಧಿಸಲಾಗಿದೆ.
   (ಎ) ಮಕ್ಕಳು ತಮ್ಮ ಮಕ್ಕಳ ಜೀವನದ ಅನುಭವವನ್ನು ಕಳೆದುಕೊಳ್ಳುತ್ತಾರೆ.
   (ಬಿ) ಮಕ್ಕಳು ಹಣ ಕಳೆದುಕೊಳ್ಳುತ್ತಾರೆ.
   (ಸಿ) ಮಕ್ಕಳು ತಮ್ಮ ಪೋಷಕರೊಂದಿಗೆ ಜೀವಿಸಲು ಆಸ್ಪದವಾಗುವುದಿಲ್ಲ.
   (ಡಿ) ಮಕ್ಕಳಿಗೆ ಆಟವಾಡಲು ಸಮಯ ಸಿಗುತ್ತಿಲ್ಲ.
9. ಅಪಾಯಕರಿ ಬಾಲಕಾರ್ಮಿಕತೆಯ ಸಂಭವನೀಯ ಫಲಿತಾಂಶ.
   (ಎ) ಶೌರ್ಯದ ಕೆಲಸ
   (ಬಿ) ಹೆಚ್ಚು ಕೂಲಿ / ಸಂಬಳ
   (ಸಿ) ಸಾವು / ಅಂಗವಿಕಲತೆ
   (ಡಿ) ಮಕ್ಕಳ ಕೌಶಲ್ಯ ಅಭಿವೃದ್ಧಿ ಆಗುವುದು
10. ನೀವು ನಿಮ್ಮ ಗ್ರಾಮದಲ್ಲಿ ಬಾಲಕಾರ್ಮಿಕತೆಯನ್ನು ಕಂಡಾಗ ಏನು ಮಾಡುತ್ತೀರಿ.
   (ಎ) ಗ್ರಾಮದ ದೇವಸ್ಥಾನದ ಪೂಜಾರಿಗೆ ತಿಳಿಸುತ್ತೀರಿ
   (ಚರ್ಚಿನ ಪಾದ್ರಿ ಅಥವಾ ಮಸೀದಿಯ ಮೌಲ್ವಿಗೆ)
   (ಬಿ) ಗ್ರಾಮದ ಜಮೀನುದಾರರಿಗೆ ತಿಳಿಸುತ್ತೀರಿ.
   (ಸಿ) ಗ್ರಾಮ ಪಂಚಾಯತ್‌ನ ಸಾಮಾಜಿಕ ನ್ಯಾಯ ಉಪಸಮಿತಿಯ ಗಮನಕ್ಕೆ ತರುತ್ತೀರಿ.
   (ಡಿ) ಗ್ರಾಮದ ಹೋಟೆಲ್ ಮಾಲೀಕರಿಗೆ ತಿಳಿಸುತ್ತೀರಿ



11. ನಿಮ್ಮ ಮಕ್ಕಳು ಬಾಲಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದರೆ, ಈ ತರಬೇತಿಯ ನಂತರ ನೀವೇನು ಮಾಡುವಿರಿ.
    - (ಎ) ಅವರನ್ನು ಅಲ್ಲಿಯೇ ಕೆಲಸ ಮುಂದುವರಿಸಲು ಬಿಟ್ಟು ಹೆಚ್ಚು ಸಂಬಳ ಕೇಳುವಿರಿ.
    - (ಬಿ) ಅವರನ್ನು ಕೆಲಸದಿಂದ ಬಿಡಿಸಿ ಮನೆಯಲ್ಲಿ ಕುಳಿತುಕೊಳ್ಳುವಂತೆ ಮಾಡುವಿರಿ.
    - (ಸಿ) ಅವರನ್ನು ಕೆಲಸದಿಂದ ಬಿಡಿಸಿ ನಿಮ್ಮ ಜೊತೆಯಲ್ಲಿ ಕೆಲಸಕ್ಕೆ ಕರೆದುಕೊಂಡು ಹೋಗುವಿರಿ.
    - (ಡಿ) ಅವರನ್ನು ಶಾಲೆಗೆ ಕಳುಹಿಸುವಿರಿ.
12. ನಿಮ್ಮ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸಿದರೆ ಅವರು ಮುಂದಕ್ಕೆ ನಿಮಗೆ
    - (ಎ) ಒಂದು ಎಂಡೋಮೆಂಟ್ ವಿಮಾ ಪಾಲಿಸಿ
    - (ಬಿ) ಜೀವ ವಿಮಾ ಪಾಲಿಸಿ
    - (ಸಿ) ಅಪಘಾತ ವಿಮಾ ಪಾಲಿಸಿ
    - (ಡಿ) ಮೇಲಿನವು ಯಾವುದೂ ಅಲ್ಲ
13. ಮಕ್ಕಳು ಶಾಲೆಗೆ ಹಾಜರು ಆಗುತ್ತಿಲ್ಲ ಏಕೆ.
    - (ಎ) ಶಾಲೆ ಬಹಳ ದೂರ ಇದೆ.
    - (ಬಿ) ಶಾಲೆಯ ಪಾಠ ಪ್ರವಚನಗಳು ಅವರಿಗೆ ಹಿಡಿಸುವುದಿಲ್ಲ.
    - (ಸಿ) ಶಿಕ್ಷಕರು ಬಹಳ ಕ್ರೂರವಾಗಿ ವರ್ತಿಸುತ್ತಾರೆ
    - (ಡಿ) ಮೇಲಿನ ಎಲ್ಲಾ ಸಮಸ್ಯೆಗಳು ಇರಬಹುದು
14. ಶಾಲೆಗಳು ಮಕ್ಕಳ ಶಿಕ್ಷಣಕ್ಕೆ ಈ ಕೆಳಗಿನ ಯಾವ ಸೌಲಭ್ಯಗಳನ್ನು ಒದಗಿಸುತ್ತವೆ.
    - (ಎ) ಮಧ್ಯಾಹ್ನದ ಊಟ ಮಾತ್ರ
    - (ಬಿ) ಸಮವಸ್ತ್ರ ಮತ್ತು ಪುಸ್ತಕಗಳು ಮಾತ್ರ
    - (ಸಿ) ಉಚಿತ ಶಿಕ್ಷಣ ಮಾತ್ರ
    - (ಡಿ) ಮೇಲಿನ ಎಲ್ಲವುಗಳು
15. ನಿಮಗೆ ಒಬ್ಬಳು ಮಗಳು ಮತ್ತು ಒಬ್ಬ ಮಗ ಇದ್ದರೆ ನೀವೇನು ಮಾಡುತ್ತೀರಿ.
    - (ಎ) ಮಗನನ್ನು ಮಾತ್ರ ಶಾಲೆಗೆ ಕಳುಹಿಸುತ್ತೀರಿ
    - (ಬಿ) ಮಗಳನ್ನು ಮಾತ್ರ ಶಾಲೆಗೆ ಕಳುಹಿಸುತ್ತೀರಿ
    - (ಸಿ) ಇಬ್ಬರನ್ನು ಶಾಲೆಗೆ ಕಳುಹಿಸುತ್ತೀರಿ
    - (ಡಿ) ಇಬ್ಬರನ್ನು ಶಾಲೆಗೆ ಕಳುಹಿಸುವುದಿಲ್ಲ.






## 2.9 ಸ್ಥಳೀಯ ಮಟ್ಟದಲ್ಲಿ ಕ್ರಿಯಾ ಯೋಜನೆ ತಯಾರಿ

ಸಮಯ: 30 ನಿಮಿಷಗಳು

### 2.9.1 ಕ್ರಿಯಾಯೋಜನೆ

- ಗ್ರಾಮಮಟ್ಟದಲ್ಲಿರುವ ಬಾಲಕಾರ್ಮಿಕತೆಯ ಮಾಹಿತಿಗಳನ್ನು ಸಂಗ್ರಹಿಸಿರಿ
- ಗ್ರಾಮಮಟ್ಟದಲ್ಲಿ ಬಾಲಕಾರ್ಮಿಕತೆಯ ನಿರ್ಮೂಲನೆ ಬಗ್ಗೆ ಕೆಲಸ ಮಾಡಲು ಸಾಮಾಜಿಕ ಕಳಕಳಿಯಿರುವ ವ್ಯಕ್ತಿಗಳ ತಂಡ ರಚಿಸಿರಿ.
- ಸಮುದಾಯದಲ್ಲಿ ಈಗಾಗಲೇ ಬಡತನ, ಶಿಕ್ಷಣದ ಬಗ್ಗೆ ಕೆಲಸ ಮಾಡುತ್ತಿರುವ ಗುಂಪುಗಳ ಜೊತೆಯಲ್ಲಿ ಸಂಪರ್ಕ ವ್ಯವಸ್ಥೆ ಮಾಡಿಕೊಳ್ಳಿರಿ.
- ಗ್ರಾಮದ ಇತರರೊಂದಿಗೆ ಬಾಲಕಾರ್ಮಿಕತೆಯ ದುಷ್ಪರಿಣಾಮಗಳ ಬಗ್ಗೆ ಚರ್ಚಿಸಿರಿ.
- ಅವರ ಪೋಷಕರನ್ನು ಮನವೊಲಿಸಿ ಅವರನ್ನು ಕೆಲಸದಿಂದ ಬಿಡಿಸಿ ಶಾಲೆಗೆ ಕಳುಹಿಸಿರಿ.
- ಬಾಲಕಾರ್ಮಿಕರ ಪೋಷಕರು – ಗ್ರಾಮ ಪಂಚಾಯತ್ – ಸಾಮಾಜಿಕ ಭದ್ರತಾ ಕಾರ್ಯಕ್ರಮಗಳ ಜೊತೆಯಲ್ಲಿ ಸಂಪರ್ಕ ವ್ಯವಸ್ಥೆ ಮಾಡಿರಿ.
- ಗ್ರಾಮದ ಬೇರೆ ಬೇರೆ ಗುಂಪುಗಳ ಸಭೆಯಲ್ಲಿ ಬಾಲಕಾರ್ಮಿಕತೆಯ ಬಗ್ಗೆ ಅವರ ಅರಿವನ್ನು ಹೆಚ್ಚಿಸಲು ಮಾಹಿತಿ ಕೊಡಿರಿ.
- ಕರ್ನಾಟಕ ಬಾಲಕಾರ್ಮಿಕ ಯೋಜನೆಯ ಅಧಿಕಾರಿಗಳ ಸಹಾಯ ಪಡೆದುಕೊಳ್ಳಿರಿ.
- ಪ್ರತಿಯೊಬ್ಬ ಪೋಷಕರು ತಮ್ಮ ಮಕ್ಕಳ ಬಗ್ಗೆ ಒಂದು ಕ್ರಿಯಾ ಯೋಜನೆಯನ್ನು ತಯಾರಿಸಿಕೊಳ್ಳಬೇಕು. ಸಾಮಾಜಿಕ ಕಾರ್ಯಕರ್ತರು ಇದನ್ನು ಮುಂದಿನ ದಿನಗಳಲ್ಲಿ ವಿಚಾರಿಸಿಕೊಂಡು ಕ್ರಿಯಾಯೋಜನೆಯಂತೆಯೆ ಕೆಲಸ ಕಾರ್ಯಗಳು ನಡೆಯುತ್ತಿವೆಯೇ ಎಂಬುದನ್ನು ವಿಚಾರಿಸಿಕೊಳ್ಳಬೇಕು. ಇದಲ್ಲದೆ ಪೋಷಕರು ಅವರ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ದೀರ್ಘಾವಧಿಯ ಕ್ರಿಯಾಯೋಜನೆಯನ್ನು ತಯಾರಿಸಿಕೊಳ್ಳಲು ಪ್ರೇರೇಪಿಸಬೇಕು.





## 2.10 ಮೌಲ್ಯಮಾಪನ

ಸಮಯ: 30 ನಿಮಿಷಗಳು


- ಆರಂಭದಲ್ಲಿ ತರಬೇತಿಯ ಉದ್ದೇಶಗಳನ್ನು ಸ್ಪಷ್ಟೀಕರಿಸಿರಿ.
- ಪ್ರತಿ ಅವಧಿ ಮುಗಿದ ನಂತರ ಶಿಬಿರಾರ್ಥಿಗಳ ಪ್ರತಿಕ್ರಿಯೆ ಬಗ್ಗೆ ತಿಳಿದುಕೊಳ್ಳಿರಿ.
- ತರಬೇತಿಯ ಕೊನೆಯಲ್ಲಿ ಔಪಚಾರಿಕ ಅಥವಾ ಅನೌಪಚಾರಿಕ ಪದ್ದತಿಯನ್ನು ಉಪಯೋಗಿಸಿ ಮೌಲ್ಯಮಾಪನ ಮಾಡಿರಿ.
  - (ಎ) 2–3 ಶಿಬಿರಾರ್ಥಿಗಳ ಹತ್ತಿರ ತರಬೇತಿಯ ಬಗ್ಗೆ ಅನುಭವ ಹಂಚಿಕೊಳ್ಳಲು ತಿಳಿಸಬಹುದು ಅಥವಾ ಕೆಲವು ಪ್ರಶ್ನೆಗಳನ್ನು ಇಡೀ ಗುಂಪಿಗೆ ಹಾಕಿ ಅವರ ಅನುಭವವನ್ನು ಪಡೆದಿಕೊಳ್ಳಬಹುದು.
  - (ಬಿ) ಮೊದಲೇ ತಯಾರಿಸಿದ ಪ್ರಶ್ನಾವಳಿಯ ಹಾಳೆಗಳನ್ನು ಕೊಟ್ಟು ಅವರ ಪ್ರತಿಕ್ರಿಯೆಗಳನ್ನು ಪಡೆಯಬಹುದು.





# ಭಾಗ – 3





## 3.1 ಬಾಲಕಾರ್ಮಿಕತೆಯ ಕಾರಣಗಳು

**3.1.1 ಬೇಡಿಕೆಯ ಕಾರಣಗಳು:** ಬೇಡಿಕೆಯ ಕಾರಣಗಳು ಮಾಲಕರಿಗೆ ಸಂಬಂಧಪಟ್ಟಿದ್ದು, ಅವರು ದೊಡ್ಡವರನ್ನು ಬಿಟ್ಟು ಮಕ್ಕಳನ್ನು ಕೆಲಸಕ್ಕೆ ತೊಡಗಿಸಿಕೊಳ್ಳುವುದಕ್ಕೆ ಇರುವ ಬೇಡಿಕೆಯ ಕಾರಣಗಳು.

3.1.1.1 ಮಾಲಕರಲ್ಲಿರುವ ಆಸೆಬುರುಕತನ: ಮಕ್ಕಳನ್ನು ಹೆಚ್ಚು ಹೊತ್ತು ಯಾವುದೇ ಬಿಡುವು ಕೊಡದೆ ದುಡಿಸಿಕೊಳ್ಳಬಹುದೆಂಬ ಆಸೆ ಹಾಗೂ ಮಕ್ಕಳು ಯಾವುದೇ ಸಂಘಟನೆ ಆಗುವುದಿಲ್ಲ ಮತ್ತು ಅವರು ಕೆಲಸಗಳನ್ನು ಚುರುಕಾಗಿ ಮಾಡುತ್ತಾರೆ ಎಂಬ ನಂಬಿಕೆ. ಬಾಲಕಾರ್ಮಿಕರು ಟೀ ಕುಡಿಯಲು ಅಥವಾ ಬೀಡಿ ಸೇದಲು ಸಮಯವನ್ನು ವ್ಯಯ ಮಾಡುವುದಿಲ್ಲ. ಅವರು ನಿರಂತರವಾಗಿ ಕೆಲಸ ಮಾಡುತ್ತಾರೆ. ಅದರಿಂದ ನಾವು ಹೆಚ್ಚು ಸಂಪಾದಿಸಬಹುದು ಎಂಬ ದುರಾಸೆ.

ಪೂರೈಕೆ ಅಂಶಗಳಷ್ಟೇ ಮುಖ್ಯವಾದ ಅಥವಾ ಸುಸಂಬದ್ಧಾವಾದ ಬಾಲಕಾರ್ಮಿಕತೆಗೆ ಇರುವ ಬೇಡಿಕೆ ಅಂಶಗಳನ್ನು ನಾವು ಹೆಚ್ಚಾಗಿ ಮರೆತುಬಿಡುತ್ತೇವೆ ಅಥವಾ ಗಮನಿಸದೇ ಇರುತ್ತೇವೆ. ಮಕ್ಕಳು ಏಕೆ ಬೇಡಿಕೆಯಲ್ಲಿದ್ದಾರೆ ಎಂಬುದು ಅರ್ಥಮಾಡಿಕೊಳ್ಳಬೇಕಾದ ನಿರ್ಣಾಯಕ ಕಾರಣವಾಗಿದೆ. "ಚುರುಕಿನ ಬೆರಳುಗಳು" ಮತ್ತು "ಕಡಿಮೆ ಉತ್ಪಾದನಾ ವೆಚ್ಚ" ಈ ವಾದಗಳು ಸಾಮಾನ್ಯವಾಗಿ ಬಾಲಕಾರ್ಮಿಕರನ್ನು ಕೆಲಸಕ್ಕೆ ನಿಯೋಜಿಸಿಕೊಳ್ಳಲು ಇರುವ ಮುಂದುವರಿದಿರುವ ವಿವರಣೆಗಳು. ಆದರೆ ಅಂತರರಾಷ್ಟ್ರೀಯಕಾರ್ಮಿಕ ಸಂಸ್ಥೆ ನಡೆಸಿದ ಕ್ಷೇತ್ರ ಸಂಶೋಧನೆಯು, "ಚುರುಕಿನ ಬೆರಳುಗಳ" ವಾದವನ್ನು ಸಂಪೂರ್ಣವಾಗಿ ತಪ್ಪುದಾರಿಗೆಳೆಯುವ ವಾದವೆಂದು ತಿಳಿಸಿದೆ.

ಮಾಲೀಕರು ಈ ಕೆಳಗಿನ ಕಾರಣಗಳಿಗಾಗಿ ಬಾಲಕಾರ್ಮಿಕತೆಗೆ ಆದ್ಯತೆ ನೀಡುತ್ತಾರೆ.

ಮಕ್ಕಳು ಹೆಚ್ಚು ವಿನೀತರಾಗಿರುತ್ತಾರೆ ಮತ್ತು ಕಡಿಮೆ ತೊಂದರೆ ನೀಡುವವರಾಗಿರುತ್ತಾರೆ.

ಅವರು ತಮ್ಮ ಹಕ್ಕುಗಳ ಬಗ್ಗೆ ತೀರಾ ಕಡಿಮೆ ಅರಿವು ಇರುವವರಾಗಿರುತ್ತಾರೆ.

ಅವರು ಮಾಡಿದ್ದನ್ನೇ ಮಾಡುವ, ಏಕರೀತಿಯ ಕೆಲಸವನ್ನು ಸುಲಭವಾಗಿ ಒಪ್ಪಿಕೊಂಡು ಮಾಡುತ್ತಾರೆ.

ಅವರು ಹೆಚ್ಚು ನಂಬಿಕೆ ಅರ್ಹರಾಗಿರುತ್ತಾರೆ ಮತ್ತು ಮುಗ್ದರಾಗಿರುತ್ತಾರಾದ ಕಾರಣ ಕಳ್ಳತನ ಮಾಡುವ ಸಂಭವ ಕಡಿಮೆ ಇರುತ್ತದೆ.

ಅವರು ಕಾರ್ಮಿಕ ಸಂಘಗಳನ್ನು ರಚಿಸುವ ಕಾರ್ಯಕ್ಕೆ ಕೈ ಹಾಕುವುದಿಲ್ಲ.


ಅವರ ದುಡಿಮೆಯ ವೆಚ್ಚ ಕಡಿಮೆ ಅನ್ನುವುದರ ಜೊತೆಗೆ ಕೆಲಸಕ್ಕೆ ಗೈರುಹಾಜರಾಗುವ ಸಂಭವವೂ ಕಡಿಮೆ

**3.1.1.2 ಕಡಿಮೆ ಸಂಬಳ:** ಮಕ್ಕಳು ಕಡಿಮೆ ಸಂಬಳಕ್ಕೆ ಕೆಲಸ ಮಾಡುತ್ತಾರೆ. ಕಡಿಮೆ ಉತ್ಪಾದನೆ ಇರುವ ಕೆಲಸಗಳಲ್ಲಿ ಮಕ್ಕಳನ್ನು ಉಪಯೋಗಿಸುತ್ತಾರೆ.

**3.1.1.3 ನಂಬಿಕೆಗಳು:** ಕೆಲವು ಕೆಲಸಗಳನ್ನು ಮಾಡಲು ಮಕ್ಕಳ ಸಣ್ಣ ಸಣ್ಣ ಬೆರಳುಗಳಿಗೆ ಮಾತ್ರ ಸಾಧ್ಯ ಎಂಬ ನಂಬಿಕೆ. ಉದಾ: ಜಮಖಾನ ತಯಾರಿ ಮತ್ತು ರೇಷ್ಮೆ ಉದ್ದಿಮೆಯಲ್ಲಿ ಹೆಚ್ಚಾಗಿ ಮಕ್ಕಳನ್ನೇ ತೊಡಗಿಸಿಕೊಳ್ಳುತ್ತಾರೆ. ಸಣ್ಣ ಹೆಣ್ಣು ಮಕ್ಕಳು ಮಾತ್ರ (ಅವರು ದೊಡ್ಡವರಾಗುವುದಕ್ಕಿಂತ ಮೊದಲು) ಹತ್ತಿಯನ್ನು ಕೀಳಲು ಸಾಧ್ಯ ಎಂಬ ನಂಬಿಕೆ.

**3.1.1.4 ಕಡಿಮೆ ವೆಚ್ಚ:** ಕಡಿಮೆ ವೆಚ್ಚದ ಹಾಗೂ ಕಡಿಮೆ ಉತ್ಪಾದನೆಯ ತಾಂತ್ರಿಕ ಪ್ರಕ್ರಿಯೆಗಳಲ್ಲಿ ಮಕ್ಕಳನ್ನು ಹೆಚ್ಚಾಗಿ ಉಪಯೋಗಿಸಿಕೊಳ್ಳುತ್ತಾರೆ. ಉದಾ: ರೇಷ್ಮೆ ನೂಲು ನೇಯುವುದು.





**3.1.1.5 ಬಾಲಕಾರ್ಮಿಕ ಕಾನೂನುಗಳು ಸರಿಯಾಗಿ ಅನುಷ್ಠಾನವಾಗದೆ ಇರುವುದು:** ಬಾಲಕಾರ್ಮಿಕ ಕಾನೂನನ್ನು ಸರಿಯಾಗಿ ಅನುಷ್ಠಾನ ಮಾಡದೆ ಇರುವುದರಿಂದ ಬಾಲಕಾರ್ಮಿಕರನ್ನು ತೊಡಗಿಸಿಕೊಳ್ಳುವಿಕೆ ದಿನೇ ದಿನೇ ಹೆಚ್ಚಾಗುತ್ತಿದೆ. ಒಂದು ಕೇಸನ್ನು ಸರಿಯಾಗಿ ಅನುಷ್ಠಾನ ಮಾಡದಿದ್ದರೆ ಇದು ಅಸಂಖ್ಯಾತ ಮಾಲಕರಿಗೆ ಮಕ್ಕಳನ್ನು ಕೆಲಸದಲ್ಲಿ ತೊಡಗಿಸಿಕೊಳ್ಳಲು ಪ್ರೋತ್ಸಾಹಿಸುತ್ತದೆ.

**3.1.2 ಪೂರೈಕೆಯ ಕಾರಣಗಳು:** ಕುಟುಂಬಗಳು ತಮ್ಮ ಮಕ್ಕಳನ್ನು ಬಾಲಕಾರ್ಮಿಕತೆಗೆ ತಳ್ಳುವಂತೆ ಮಾಡುವ ಶಕ್ತಿಗಳನ್ನು ಪೂರೈಕೆಯ ಕಾರಣಗಳು ಎಂದು ವರ್ಗೀಕರಿಸಲಾಗುತ್ತದೆ.

ತಂದೆ–ತಾಯಿಗಳು ತಮ್ಮ ಮಕ್ಕಳನ್ನು ಕೆಲಸಕ್ಕೆ ನಿಯೋಜಿಸಿಕೊಳ್ಳುವಂತೆ ಒತ್ತಾಯಪಡಿಸುತ್ತಾರೆ. ಕಾರಣ ಮಾಲಕರು ಮಕ್ಕಳಿಗೆ ಆಹಾರ, ವಸತಿ ಇತ್ಯಾದಿಗಳನ್ನು ನೀಡಿ ಕಾಪಾಡುತ್ತಿದ್ದಾರೆ ಎನ್ನುವಂಥ ಸಾಮಾನ್ಯವಾಗಿ ಮಂಡಿಸಬಹುದಾದ ವಿವರಣೆಗಳು, ಮಾಲಕರಿಗೆ ಇದು ಅನುಕೂಲಕರವಾದ ವಾದವಾಗಿದೆ. ಆದರೆ ನಿಜವಾದ ಕಾರಣಗಳು ಸಂಪೂರ್ಣವಾಗಿ ಬೇರೆಯೇ ಆಗಿವೆ.

**3.1.2.1 ಬಡತನವೇ ಕಾರಣವೆಂಬ ವಾದ:** ಬಾಲಕಾರ್ಮಿಕತೆಯು ಬಹು ಜಟಿಲವಾದ ವಿಷಯವಾಗಿದ್ದು, ಸಮಾಜದ ಆರ್ಥಿಕ ಹಾಗೂ ಸಾಂಸ್ಕೃತಿಕ ವೈಲಕ್ಷಣಗಳಲ್ಲಿ ಇದು ಆಳವಾಗಿ ಬೇರೂರಿದೆ. ಬಾಲಕಾರ್ಮಿಕತೆಗೆ ಬಡತನವೇ ಮುಖ್ಯ ಕಾರಣವೆಂದು ನಂಬಿದ್ದಾಗ್ಯೂ, ಬಡತನವೇ ಅವಶ್ಯವಾಗಿ ಬಾಲಕಾರ್ಮಿಕತೆಯನ್ನುಂಟು ಮಾಡುತ್ತದೆಯೆಂದು ಹೇಳಲಾಗುವುದಿಲ್ಲ. ಒಂದು ದೇಶದ ಅತೀ ದಾರಿದ್ರ್ಯವಿರುವ ಪ್ರದೇಶದಲ್ಲಿ ಬಾಲಕಾರ್ಮಿಕತೆ ಅತ್ಯಧಿಕವಾಗಿದ್ದರೆ, ಅದೇ ದೇಶದ ಅಷ್ಟೇ ದಾರಿದ್ರ್ಯವಿರುವ ಇನ್ನೊಂದು ಭಾಗದಲ್ಲಿ ಅದು ಅತ್ಯಧಿಕ ಪ್ರಮಾಣದಲ್ಲಿಲ್ಲದೆ ಇರಬಹುದು. ಈ ರೀತಿಯ ವಿಷಯಕ್ಕೆ ಕೇರಳ ರಾಜ್ಯವು ಒಂದು ಅತ್ಯುತ್ತಮ ಉದಾಹರಣೆಯಾಗಿದೆ.

ಸಾಕ್ಷರತೆ ಮತ್ತು ಶಿಕ್ಷಣವು ಬಾಲಕಾರ್ಮಿಕತೆಯ ವ್ಯಾಪ್ತಿಯೊಂದಿಗೆ ನೇರ ಸಂಪರ್ಕವನ್ನು ಹೊಂದಿದೆಯೆಂಬುದೂ ಕೂಡ ಕೇರಳ ರಾಜ್ಯದ ನಿದರ್ಶನದಿಂದ ಸೂಚಿತವಾಗುತ್ತದೆ. ಕೇವಲ 34,800 ಬಾಲಕಾರ್ಮಿಕರು ಇಡೀ ಕೇರಳ ರಾಜ್ಯದಲ್ಲಿದ್ದಾರೆ. ಇದು ಅದರ ಒಟ್ಟು ಮಕ್ಕಳ ಸಂಖ್ಯೆಯಲ್ಲಿ ಶೇಕಡಾ ಒಂದಕ್ಕಿಂತ ಕಡಿಮೆ ಇದೆ. ಅದೇ ಆಂಧ್ರಪ್ರದೇಶ ರಾಜ್ಯದಲ್ಲಿ ಶೇಕಡಾ 7 ರಷ್ಟು ಮಕ್ಕಳು ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದಾರೆ.

ಬಾಲಕಾರ್ಮಿಕತೆ, ಶಾಲೆಗೆ ಹೋಗದಿರುವ ಮಕ್ಕಳ ಪ್ರಮಾಣ ಮತ್ತು ಕಡುಬಡತನದ ರೇಖೆಗಿಂತ ಕೆಳಗೆ ಜೀವಿಸುವ ವ್ಯಕ್ತಿಗಳ ಶೇಕಡಾವಾರು – ಇವುಗಳಲ್ಲಿರುವ ನಿರ್ಣಾಯಕ ಸ್ಥಿತಿಯ ಪರಸ್ಪರ ಸಂಬಂಧದತ್ತ ಗಮನಹರಿಸುವುದು ಯೋಗ್ಯವಾಗಿದೆ. ಬಾಲಕಾರ್ಮಿಕರ ಪಟ್ಟಿಯಲ್ಲಿ ಆಂಧ್ರಪ್ರದೇಶ ಮೊದಲನೆಯ ಸ್ಥಾನದಲ್ಲಿದ್ದರೆ, ಬಿಹಾರ ಮತ್ತು ಒರಿಸ್ಸಾ ರಾಜ್ಯಗಳು ಬಡತನದ ಪಟ್ಟಿಯಲ್ಲಿ ಮೇಲಿನ ಸ್ಥಾನಗಳಲ್ಲಿವೆ. ಆದುದರಿಂದ ಬಾಲಕಾರ್ಮಿಕತೆಗೆ ಕಾರಣ ಬಡತನಮಾತ್ರವಲ್ಲದೆ ಇತರ ಕಾರಣಗಳೂ ಇವೆ ಎಂಬುದು ನಿಶ್ಚಯ.

ಬಾಲಕಾರ್ಮಿಕತೆಯ ಹೆಚ್ಚಿನ ವ್ಯಾಪ್ತಿಗೆ ಕಾರಣೀಭೂತವಾಗಿರುವ ಇತರ ಪ್ರಮುಖ ಕಾರಣಗಳನ್ನು ಈ ಕೆಳಗೆ ನೀಡಲಾಗಿದೆ.

**3.1.2.2 ಪ್ರತ್ಯಕ್ಷಾನುಭವ, ನಂಬಿಕೆ ಮತ್ತು ಮನೋಭಾವನೆಗಳು:**

ತಂದೆ – ತಾಯಿಗಳ ಪ್ರತ್ಯಕ್ಷಾನುಭವ ಮತ್ತು ಸಾಮಾಜಿಕ ಮನೋಭಾವನೆಗಳು ಬಾಲಕಾರ್ಮಿಕ ಸಮಸ್ಯೆಯ ಮೇಲೆ ಗಾಢವಾದ ಪರಿಣಾಮ ಬೀರಿದೆ. ಅದರ ಫಲಿತಾಂಶಗಳ ಬಗ್ಗೆ ಸಾಕಷ್ಟು ಅರಿವಿಲ್ಲದ ಕಾರಣದಿಂದ ಬಾಲಕಾರ್ಮಿಕತೆಯು ಸ್ಥಳೀಯ ಸಂಪ್ರದಾಯ ಮತ್ತು ಪದ್ಧತಿಗಳಲ್ಲಿ ಎಷ್ಟು ಆಳವಾಗಿ ಬೇರುಬಿಟ್ಟಿದೆಯೆಂದರೆ, ತಂದೆ ತಾಯಿಗಳು ಮತ್ತು ಮಕ್ಕಳಿಬ್ಬರೂ ಇದು ಕಾನೂನುಬಾಹಿರವೆಂದಾಗಲೀ ಅಥವಾ ಮಕ್ಕಳ ಹಿತಾಸಕ್ತಿಗೆ ಮಾರಕವಾಗಿದೆಯೆಂದಾಗಲೀ ಅರಿತುಕೊಳ್ಳಲಾಗದಷ್ಟು **ಮಟ್ಟಿಗೆ.**



### 3.1.2.3 ತಂದೆ–ತಾಯಿಗಳ ಅನಕ್ಷರತೆ

ತಂದೆ–ತಾಯಿಗಳ ಸಾಕ್ಷರತೆ ಬಾಲಕಾರ್ಮಿಕತೆಗೆ ನೆರವಾಗುವ ಅತೀ ಮುಖ್ಯವಾದ ಅಂಶವಾಗಿದೆ. ತಂದೆ–ತಾಯಿಗಳ ಸಾಕ್ಷರತೆ, ಬಹುಮುಖ್ಯವಾಗಿ ತಾಯಿಯ ಸಾಕ್ಷರತಾ ಮಟ್ಟವು ಆ ಕುಟುಂಬದ ಬಾಲಕಾರ್ಮಿಕತೆಯ ವ್ಯಾಪ್ತಿಯೊಂದಿಗೆ ನೇರ ಸಂಪರ್ಕವನ್ನು ಹೊಂದಿದೆ. ಆ ಕುಟುಂಬ ಎಷ್ಟು ಬಡತನವನ್ನು ಅನುಭವಿಸುತ್ತಿರಲಿ, ತಂದೆ–ತಾಯಿಗಳು ಕಲಿತವರಾಗಿದ್ದರೆ, ಅವರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಿಯೇ ತೀರುತ್ತಾರೆ ಮತ್ತು ತಮ್ಮ ಮಗು ಪ್ರಬುದ್ಧ ಜೀವನ ನಡೆಸುವಂತಾಗಲು ಬೇಕಾದ ಕನಿಷ್ಠ ಶಿಕ್ಷಣವನ್ನು ನೀಡಿಯೇ ತೀರುತ್ತಾರೆ ಇದಕ್ಕೆ ವ್ಯತಿರಿಕ್ತವಾಗಿ ಅನಕ್ಷರಸ್ಥ ತಂದೆ–ತಾಯಿಗಳ ವಿಷಯದಲ್ಲಾಗುವುದೂ ಸತ್ಯವೇ ಆಗಿರುತ್ತದೆ. ಆರ್ಥಿಕ ಸ್ಥಾನಮಾನ ಮತ್ತು ಆದಾಯಗಳಿಕೆಯ ಮಟ್ಟ ಏನಾದರಾಗಲೀ, ಅನೇಕ ಅನಕ್ಷರಸ್ಥ ತಂದೆ–ತಾಯಿಗಳು. ಸಮುದಾಯದಲ್ಲಿ ಚಾಲ್ತಿಯಲ್ಲಿರುವ ಸಂಪ್ರದಾಯ ಮತ್ತು ರೂಢಿಗನುಗುಣವಾಗಿ ತಮ್ಮ ಮಕ್ಕಳನ್ನು ಕೆಲಸಕ್ಕೆ ಕಳುಹಿಸಲು ಬಯಸುತ್ತಾರೆ.


### 3.1.2.4 ಕುಟುಂಬದ ಕಸುಬು ಮತ್ತು ತುಂಡು ದರ ಮಜೂರಿಗಳು:

ಕೆಲವು ಪ್ರದೇಶಗಳಲ್ಲಿ ಮತ್ತು ಕೆಲವು ಕುಟುಂಬಗಳಲ್ಲಿ ಮಕ್ಕಳು ತಂದೆ–ತಾಯಿಗಳು ತುಳಿದ ಹಾದಿಯನ್ನೇ ಕ್ರಮಿಸುವ ಸಂಪ್ರದಾಯ ಬೆಳೆದು ಬಂದಿರುತ್ತದೆ. ತಂದೆ–ತಾಯಿಗಳು ಅಪಾಯಕರವಾದ ಕಸುಬುಗಳಲ್ಲಿದ್ದರೆ ಮಕ್ಕಳು ಸಹ ಅದೇ ಕಸುಬುಗಳಲ್ಲಿ ನಿರತರಾಗುವ ಸಂಭವವೇ ಹೆಚ್ಚು. ಕುಟುಂಬದ ಕಸುಬು ಮಕ್ಕಳನ್ನು ಸಹ ಕುಟುಂಬದ ಕಲೆ ಮತ್ತು ಕರಕುಶಲ ಕಲೆಗೆ ಎಳೆದು ತರುತ್ತಾರೆ. ಮಕ್ಕಳಿಗೆ ಬಾಲ್ಯದಿಂದಲೇ ಅವರ ಕುಟುಂಬದ ಕರಕುಶಲತೆಯ ಬಗ್ಗೆ ತರಬೇತಿ ನೀಡಿದಲ್ಲಿ ಅವರು ಹರೆಯಕ್ಕೆ ಬರುವ ವೇಳೆಗೆ ತಮ್ಮ ಸ್ವಂತ ಕಾಲ ಮೇಲೆ ನಿಲ್ಲಬಲ್ಲವರಗುತ್ತಾರೆಂಬ ನಂಬಿಕೆ ಕೆಲವು ಕುಟುಂಬಗಳಲ್ಲಿವೆ, ತುಂಡು ದರದ ಆಧಾರದ ಮೇಲೆ ಸಂದಾಯಮಾಡುವಂತಹ ಕೈಗಾರಿಕೆ ಮತ್ತು ಕಸುಬುಗಳಲ್ಲಿ, ಕುಟುಂಬದ ಇತರ ಸದಸ್ಯರಿಗೆ ಸಹಾಯಮಾಡುವಂತೆ ಪದೇ ಪದೇ ಮಕ್ಕಳಿಗೆ ಹೇಳುತ್ತಾರೆ.

### 3.1.2.5 ಸಾಂಸ್ಕೃತಿಕ ಪದ್ದತಿಗಳು:

ಭಾರತೀಯ ಸಮಾಜದ ಹಿಂದೂ ಜಾತಿಗೆ ಸೇರಿದವರಲ್ಲಿ ಕೆಲವು ಆಳವಾಗಿ ಬೇರೂರಿದಂಥ ಸಾಮಾಜಿಕ ಪದ್ದತಿಗಳು ಬೆಳೆದುಕೊಂಡು ಬಂದಿವೆ. ಭಾರತದಲ್ಲಿ ಸಾಮಾಜಿಕ ರಚನೆ ಹೇಗೆ ರೂಪುಗೊಂಡಿದೆಯೆಂದರೆ ಕೆಲವು ಉದ್ಯೋಗಗಳು ವಂಶಪಾರಂಪರೆಯಾಗಿ ಮತ್ತು ಅದೇ ನಿರ್ದಿಷ್ಟ ಕಾತಿಗೆ ಸೇರಿದವರು ಮಾತ್ರ ಸೀಮಿತವಾಗಿರುತ್ತದೆ. ಇದಕ್ಕೆ ಉದಾಹರಣೆಯಾಗಿ ಆಂಧ್ರಪ್ರದೇಶ ರಾಜ್ಯವನ್ನೇ ತೆಗೆದುಕೊಳ್ಳೋಣ. ಒಂದು ಬ್ರಾಹ್ಮಣ ಕುಟುಂಬ, ತಾವು ಎಷ್ಟೇ ಬಡವರಾಗಿರಲಿ, ತಮ್ಮ ಮಕ್ಕಳನ್ನು ಕೆಲಸಕ್ಕೆ ಕಳುಹಿಸಲು ಇಷ್ಟಪಡುವುದಿಲ್ಲ. ಆದರೆ ಹಿಂದುಳಿದ ವರ್ಗಕ್ಕೆ ಸೇರಿದ ಒಮದು ಕುಟುಂಬವು ಕುಟುಂಬದ ಜೀವನಾಧಾರಕ್ಕಾಗಿ ಮಕ್ಕಳ ಗಳಿಕೆ ಸಂಪೂರ್ಣವಾಗಿ ಬೇಕೇಬೇಕು ಅಥವಾ ಯವುದೇ ಅವಶ್ಯಕತೆ ಇಲ್ಲದಿದ್ದಾಗ್ಯೂ, ವಾಡಿಕೆಯಂತೆ ತಮ್ಮ ಮಕ್ಕಳನ್ನು ಕೆಲಸಕ್ಕೆ ಕಳುಹಿಸುತ್ತಾರೆ. ಮಕ್ಕಳನ್ನು ಉದ್ಯೋಗಕ್ಕೆ ಕಳುಹಿಸುವುದೂ ಕೂಡ ಜಾತಿಯೊಂದಿಗೆ ನಿಕಟವಾಗಿಯೇ ಜತೆಗೂಡುತ್ತದೆ ಮತ್ತು ಬಹುಪಾಲು ಬಾಲಕಾರ್ಮಿಕರು ಹಿಂದುಳಿದ ವರ್ಗಗಳಿಂದ, ಅನುಸೂಚಿತ ಜಾತಿ ಮತ್ತು ಪಂಗಡಗಳಿಂದ ಬಂದಿರುವುದು ಅನುಭವದಿಂದ ತಿಳಿದುಬರುತ್ತದೆ. ಇಮತಹ ಕುಟುಂಬಗಳಲ್ಲಿ ಬಾಲಕಾರ್ಮಿಕತೆ ಇರುವುದಕ್ಕೆ ಕಾರಣ ಬಡತನವೆಂದು ಯಾರಾದರು ತಿಳಿದುಕೊಂಡರೆ, ಇದು ಸನ್ನಿವೇಶಗಳಡಿ ಇದೆಯೋ ಅದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗದಿರುವುದೆನ್ನುವುದು ಅರಿವಿಗೆ ಬರುತ್ತದೆ.





### 3.1.2.6 ಲಿಂಗ ಪಕ್ಷಪಾತ:

ಭಾರತೀಯ ಸಮಾಜದಲ್ಲಿ ಲಿಂಗ ತಾರತಮ್ಯ ಅತೀ ಹೆಚ್ಚು ಚಾಲ್ತಿಯಲ್ಲಿದೆ. ಕೆಲವು ಕುಟುಂಬಗಳಲ್ಲಿ ಹೆಣ್ಣು ಮಗುವಿಗೆ ಅತೀ ಕಡಿಮೆ ಮೌಲ್ಯನೀಡುತ್ತಾರೆ ಮತ್ತು ಹೆಣ್ಣು ಮಗುವಿಗೆ ಶಿಕ್ಷಣ ನೀಡಿದರೆ ಯಾವ ಪ್ರಯೋಜನವೂ ಆಗುವುದಿಲ್ಲವೆಂದು ತಂದೆ–ತಾಯಿ ಭಾವಿಸುತ್ತಾರೆ. ಆದಕಾರಣ ಅವರು ಗಂಡುಮಕ್ಕಳನ್ನು ಶಾಲೆಗೆ ಕಳುಹಿಸಲು ಬಯಸುತ್ತಾರೆ ಮತ್ತು ಹೆಣ್ಣು ಮಕ್ಕಳು ಎಲ್ಲ ರೀತಿಯ ಗೃಹಕೃತ್ಯದಲ್ಲಿ ತೊಡಗಿಸಿಕೊಳ್ಳುವಂತೆ ನೋಡಿಕೊಳ್ಳುತ್ತಾರೆ. ನಿಧಾನವಾಗಿ ಹೆಣ್ಣು ಮಕ್ಕಳು ಅಲ್ಲಿ ಲಭ್ಯವಿರುವ ಉದ್ಯೋಗಾವಕಾಶಗಳನ್ನು ಮುಖ್ಯವಾಗಿ ಅವಲಂಭಿಸಿ ಆ ಪ್ರದೇಶದ ಮಹಿಳೆಯರು ಸಾಮಾನ್ಯವಾಗಿ ಅನುಸರಿಸುವಂಥ ಉದ್ಯೋಗಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ.


### 3.1.2.7 ಕುಟುಂಬದ ಗಾತ್ರ:

ಬಾಲಕಾರ್ಮಿಕತೆಗೆ ಇನ್ನೊಂದು ಕಾರಣ ದೊಡ್ಡ ಕುಟುಂಬಗಳು, ಬಡತನ, ಅನಕ್ಷರತೆ, ಕಡಿಮೆ ವರಮಾನ, ಮಕ್ಕಳನ್ನು ಸಾಕಲು ಕಡಿಮೆ ಸಾಮರ್ಥ್ಯ ಇವುಗಳ ವಿಷವರ್ತುಲದಲ್ಲಿ ಸಿಕ್ಕಿಕೊಂಡಿರುವ ಅನಕ್ಷರಸ್ಥ ಹಾಗೂ ತಿಳುವಳಿಕೆ ಸಾಲದ ತಂದೆ–ತಾಯಿಗಳು, ಪ್ರತಿಯೊಂದು ಮಗುವನ್ನು ಒಬ್ಬ ವರಮಾನಗಳಿಸುವ ಸದಸ್ಯನೆಂದು ಕಾಣುತ್ತಾರೆ ಮತ್ತು ಮಗುವನ್ನು ಕೆಲಸಕ್ಕೆ ಕಳುಹಿಸಲು ಅಪೇಕ್ಷಿಸುತ್ತಾರೆ. ಆದುದರಿಂದ ಭಾರೀ ಪ್ರಮಾಣದ (ಮ್ಯಾಕ್ರೋ) ಜನಸಂಖ್ಯಾ ಸ್ಪೋಟವು ಬಾಲಕಾರ್ಮಿಕತೆಗೆ ಕಾರಣವಾಗಿದೆ.

### 3.1.2.8 ತಂದೆ–ತಾಯಿಗಳ ಅಭ್ಯಾಸಗಳು

ಬಾಲಕಾರ್ಮಿಕತೆ ಕಾರಣಗಳಲ್ಲಿ ತಂದೆ ತಾಯಿಗಳ ಅಭ್ಯಾಸಗಳೂ ಸೇರಿವೆ. ತಂದೆ–ತಾಯಿಗಳಿಗೆ ಇರುವ ಕೆಟ್ಟ ಚಟಗಳು, ಅದರಲ್ಲೂ ಮುಖ್ಯವಾಗಿ ತಂದೆಯ ಚಟವು ಮಕ್ಕಳನ್ನು ಕೆಲಸಕ್ಕೆ ದೂಡುತ್ತದೆ ಎಂಬುದು ಹಲವಾರು ಅಧ್ಯಯನಗಳಿಂದ ಬೆಳಕಿಗೆ ಬಂದ ಸಂಗತಿಯಾಗಿದೆ. ಮಕ್ಕಳನ್ನು ಕಾರ್ಮಿಕ ಮಾರುಕಟ್ಟೆಗೆ ದೂಡುವುದರಲ್ಲಿ ಕುಡಿತದ ಚಟ ಒಂದು ಮುಖ್ಯ ಕಾರಣವಾಗಿದೆ. ಕುಟುಂಬದ ವಯಸ್ಕ ವರಮಾನ ಗಳಿಸುವ ಸದಸ್ಯನಿಗೆ ಏಟಾದಲ್ಲಿ ಅಥವಾ ಕಾಯಿಲೆಯಾದಲ್ಲಿ, ದೂರಮಾಡುವಿಕೆ ಅಥವಾ ವಿಚ್ಛೇದನಾ ಫಲಿತಾಂಶವಾಗಿ ಉಂಟಾದ ಒಡಕು, ಬಾಲಕಾರ್ಮಿಕತೆಗೆ ಬಹುಪಾಲು ಕಾರಣವಾಗಿರುತ್ತದೆ.





## 3.2 ಬಾಲಕಾರ್ಮಿಕತೆಯ ಪರಿಣಾಮಗಳು

**3.2.1 ಮಾನವ ಹಕ್ಕುಗಳ ಉಲ್ಲಂಘನೆ:** ಬಾಲಕಾರ್ಮಿಕತೆ ಮಕ್ಕಳ ಹಕ್ಕುಗಳ ಮತ್ತು ಮಾನವ ಹಕ್ಕುಗಳ ಉಲ್ಲಂಘನೆಯ ಪ್ರಕ್ರಿಯೆಯಾಗಿದೆ.

**3.2.2 ಅಂತಾರಾಷ್ಟ್ರೀಯ ಕಾರ್ಮಿಕ ಮಾನಗಳ ಉಲ್ಲಂಘನೆ:** ಬಾಲಕಾರ್ಮಿಕತೆ ಅಂತಾರಾಷ್ಟ್ರೀಯ ಕಾರ್ಮಿಕ ಮಾನಗಳ ಉಲ್ಲಂಘನೆಯಾಗಿದ್ದು, ಇದು ವ್ಯಾಪಾರ ಮತ್ತು ಸಾಮಾಜಿಕ ಬಹಿಷ್ಕಾರಗಳಿಗೆ ಎಡೆಮಾಡಿ ಕೊಡಬಹುದು.

**3.2.3 ಅನಕ್ಷರತೆ** : ಮಕ್ಕಳು ಬಾಲಕಾರ್ಮಿಕರಾಗುವುದರಿಂದ, ಅವರು ಶಿಕ್ಷಣದಿಂದ ವಂಚಿತರಾಗುವುದರಿಂದ ಅವರು ಅನಕ್ಷರಸ್ಥರಾಗುವರು. ಅವರು ಅನಕ್ಷರಸ್ಥರಾಗುವುದರಿಂದ ಜೀವನವಿಡಿ ಇನ್ನೊಬ್ಬರ ಮೇಲೆ ಅವಲಂಬಿತರಾಗಬೇಕಾಗುವುದು. ಅನಕ್ಷರತೆ ಅವರ ಅಭಿವೃದ್ಧಿಗೆ ಅಡ್ಡಿಬರುವುದು.

**3.2.4 ಬಡತನ** : ಶಿಕ್ಷಣ ಇಲ್ಲದೆ ಇರುವುದರಿಂದ ಅವರ ಅಭಿವೃದ್ಧಿ ಕುಂಠಿತವಾಗುವುದರಿಂದ, ಅವರು ಬಡತನದಲ್ಲಿ ಜೀವನ ನಡೆಸಬೇಕಾಗುವುದು. ಶಿಕ್ಷಣದಿಂದ ಉತ್ತಮ ಸಂಪಾದನೆ ಮಾಡಲು ಸಾಧ್ಯವಾಗುವುದು.

**3.2.5 ಅನಾರೋಗ್ಯ / ಕಾಯಿಲೆಗಳು** : ಬಾಲಕಾರ್ಮಿಕರು ಹಲವಾರು ಕಾಯಿಲೆಗಳಿಗೆ ತುತ್ತಾಗುವ ಸಂಭವ ಇರುವುದು. ಹೆಚ್ಚಿನವರು ಅನಾರೋಗ್ಯಕರವಾದ ವಾತಾವರಣದಲ್ಲಿ ಕೆಲಸ ಮಾಡುವುದರಿಂದ ಕಾಯಿಲೆಗಳಿಗೆ ತುತ್ತಾಗುವುದು.

**3.2.6 ಕುಂಠಿತ ಬೆಳವಣಿಗೆ** : ಬಾಲಕಾರ್ಮಿಕತೆಯಿಂದ ಮಕ್ಕಳ ಬೆಳವಣಿಗೆ ಕುಂಠಿತವಾಗುವುದು. ಅವರ ದೇಹ ಬೇಗನೆ ಮುಪ್ಪಾಗುವುದು.

**3.2.7 ಅವಘಡಗಳು – ಊನಾಗುವಿಕೆ** : ಬಾಲಕಾರ್ಮಿಕರು ಅಸುರಕ್ಷಿತ ವಾತಾವರಣದಲ್ಲಿ ಕೆಲಸ ಮಾಡಬೇಕಾದುದರಿಂದ, ಅವರು ಅವಘಡಗಳಿಗೆ ಸಿಕ್ಕಿ ತಮ್ಮ ಅಂಗಾಂಗಳನ್ನು ಊನಗೊಳಿಸಿಕೊಳ್ಳುವ ಸಂಭವ ಹೆಚ್ಚಾಗಿರುತ್ತದೆ.

**3.2.8 ಅವಘಡಗಳು – ಸಾವು :** ಬಾಲಕಾರ್ಮಿಕರು ದೊಡ್ಡವರ ಹಾಗೆ ಜಾಗರೂಕರಾಗಿರುವುದಿಲ್ಲ. ಇದರಿಂದ ಅವರು ಅಪಾಯಕಾರಿ ವಾತಾವರಣದಲ್ಲಿ ಕೆಲಸ ಮಾಡುವಾಗ ಜೀವ ಕಳೆದುಕೊಳ್ಳುವ ಸಂಭವ ಇರುವುದು.


**3.2.9 ದುರಾಭ್ಯಾಸಗಳಿಗೆ ಒಳಗಾಗುವುದು** : ಬಾಲಕಾರ್ಮಿಕರು ಮನೆಯಿಂದ ಹೊರಗೆ ಬೇರೆಯವರ ಜೊತೆಯಲ್ಲಿ ಕೆಲಸ ಮಡುವಾಗ ದುರಾಭ್ಯಾಸಗಳಿಗೆ ದಾಸರಾಗುವ ಸಂಭವ ಇರುತ್ತದೆ.

**3.2.10 ಅಪರಾಧಿಗಳಾಗುವುದು** : ಬಾಲಕಾರ್ಮಿಕರು, * ಅಪರಾಧಿಗಳ ಸಂಪರ್ಕಕ್ಕೆ ಬಂದು ಅಪರಾಧಿಗಳಾಗುವ ಸಂಭವ ಹೆಚ್ಚು ಇರುವುದು. ಅವರು ಸಮಾಜ ದ್ರೋಹಿಗಳಾಗುವ ಸಂಭವ ಇರುವುದು.

**3.2.11 ಉದ್ಯೋಗದ ಕೊರತೆ:** ಬಾಲಕಾರ್ಮಿಕತೆ ದೇಶದಲ್ಲಿ ದೊಡ್ಡವರ ಉದ್ಯೋಗದ ಕೊರತೆಯನ್ನು ಹುಟ್ಟು ಹಾಕುತ್ತದೆ.

**3.2.12 ಕೌಶಲ್ಯರಹಿತರನ್ನಾಗಿಸುವುದು:** ಬಾಲಕಾರ್ಮಿಕತೆ ಮಕ್ಕಳನ್ನು ಕೌಶಲ್ಯರಹಿತ ವ್ಯಕ್ತಿಗಳನ್ನಾಗಿ ರೂಪಿಸುವುದು





## 3.3 ಬಾಲಕಾರ್ಮಿಕತೆಯ ಪ್ರಮಾಣ

### 3.3.1 ಆರ್ಥಿಕ ಚಟುವಟಿಕೆಯಲ್ಲಿ ತೊಡಗಿರುವ ಮಕ್ಕಳು

#### 3.3.1.1 ಜಾಗತಿಕ:

ಸುಮಾರು 211 ಮಿಲಿಯನ್ 6–14 ವರ್ಷದ ಮಕ್ಕಳು ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿರಬಹುದು ಎಂದು ಅಂದಾಜಿಸಲಾಗಿದೆ. ಪ್ರಪಂಚದ ಈ ವಯೋಮಿತಿಯಲ್ಲಿ ಇದು ಎಲ್ಲಾ ಮಕ್ಕಳ ಸಂಖ್ಯೆಯ 20% ಆಗಬಹುದು ಎಂದು ಅಂದಾಜಿಸಲಾಗಿದೆ. ಇವರಲ್ಲಿ ಸುಮಾರು 73 ಮಿಲಿಯನ್ ಮಕ್ಕಳನ್ನು 10ವರ್ಷಕ್ಕಿಂತ ಕೆಳಗಿನವರು. 5–17 ವರ್ಷದ ಪ್ರಾಯದ ಮಕ್ಕಳನ್ನು ತೆಗೆದುಕೊಂಡರೆ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿರುವವರು ಸುಮಾರು 352 ಮಿಲಿಯನ್ ಎಂದು ಅಂದಾಜಿಸಲಾಗಿದೆ. 5–14 ವರ್ಷದ ಬಾಲಕಾರ್ಮಿಕರಲ್ಲಿ ಲಿಂಗ ವ್ಯತ್ಯಾಸ ಹೆಚ್ಚು ಇರುವುದಿಲ್ಲ. ಆದರೆ ಹೆಚ್ಚಿನ ಪ್ರಾಯದ ಮಕ್ಕಳಲ್ಲಿ ಹುಡುಗರು ಹೆಚ್ಚು ಕೆಲಸ ಮಾಡುತ್ತಿರುವುದು ಕಂಡು ಬಂದಿದೆ.


#### 3.3.1.2 ಭಾರತ:

ಭಾರತದ ಮಕ್ಕಳ ಸಂಖ್ಯೆ 398 ಮಿಲಿಯನ್ ಎಂದು ಅಂದಾಜಿಸಲಾಗಿದ್ದು, ಅವರಲ್ಲಿ 203 ಮಿಲಿಯನ್ 5–14 ವರ್ಷ ವಯೋಮಿತಿಯವರು ಆಗಿರುತ್ತಾರೆ. ಇವರಲ್ಲಿ 116 ಮಿಲಿಯನ್ ಶಾಲೆಯಲ್ಲಿ ಇದ್ದಾರೆ. 12.6 ಮಿಲಿಯನ್ ಮಕ್ಕಳು ಪೂರ್ಣಾವಧಿಯ ಕೆಲಸಗಳಲ್ಲಿ ಇದ್ದಾರೆ. ಉಳಿದ 74 ಮಿಲಿಯನ್ ಮಕ್ಕಳ ಸ್ಥಿತಿಗತಿ ಗೊತ್ತಿರುವುದಿಲ್ಲ. ಇವರು ಕುಟುಂಬದ ಹೊಲಗದ್ದೆಗಳಲ್ಲಿ ಕೆಲಸಮಾಡುತ್ತಿರಬಹುದು ಅಥವಾ ತಮ್ಮ ಪೋಷಕರ ಜೊತೆಯಲ್ಲಿ ಅಥವಾ ಮನೆಗೆಲಸದವರಾಗಿ ಅಥವಾ ಜೀತದಾಳಾಗಿ ಅಥವಾ ಯಾವುದೇ ಕೆಲಸಮಾಡಿಕೊಂಡಿರಬಹುದು.

### 3.3.2 ಭಾರತ ಮತ್ತು ಕರ್ನಾಟಕ ರಾಜ್ಯದಲ್ಲಿ ಬಾಲಕಾರ್ಮಿಕತೆ

| | 1971 | 1981 | 1991 | 2001 |
|---|---|---|---|---|
| ಭಾರತ | 10753985 | 13640870 | 11285349 | 12666377 |
| ಕರ್ನಾಟಕ (35 ರಾಜ್ಯಗಳಲ್ಲಿ 7ನೇ ದೊಡ್ಡ ರಾಜ್ಯವಾಗಿದೆ) | 808719 | 1311530 | 976247 | 822615 |
| ಭಾರತಕ್ಕೆ ಹೋಲಿಸಿದಾಗ ಕರ್ನಾಟಕದ % | 7.5% | 8.29% | 8.65% | 6.49% |





**3.3.3 ರಾಜ್ಯವಾರು ಬಾಲಕಾರ್ಮಿಕರ ಹಂಚಿಕೆ (ಕೆಲವು ದೊಡ್ಡ ರಾಜ್ಯಗಳಲ್ಲಿ ಮತ್ತು 5–14 ವರ್ಷ ಪ್ರಾಯದವರೆಗೆ)**

| ರಾಜ್ಯಗಳು | 1981 | 1991 | 2001 |
|---|---|---|---|
| ಆಂಧ್ರ ಪ್ರದೇಶ | 1.95 | 1.66 | 1.36 |
| ಬಿಹಾರ್ | 1.10 | 0.94 | 1.12 |
| ಗುಜರಾತ್ | 0.62 | 0.52 | 0.49 |
| ಹರಿಯಾಣ | 0.19 | 0.11 | 0.25 |
| ಕರ್ನಾಟಕ | 1.13 | 0.98 | 0.85 |
| ಕೇರಳ | 0.09 | 0.03 | 0.03 |
| ಮಧ್ಯಪ್ರದೇಶ | 1.70 | 1.35 | 1.07 |
| ಮಹಾರಾಷ್ಟ್ರ | 1.56 | 1.07 | 0.76 |
| ಒರಿಸ್ಸಾ | 0.70 | 0.45 | 0.38 |
| ಪಂಜಾಬ್ | 0.22 | 0.14 | 0.18 |
| ರಾಜಸ್ಥಾನ್ | 0.82 | 0.77 | 1.26 |
| ತಮಿಳುನಾಡು | 0.98 | 0.58 | 0.42 |
| ಉತ್ತರ ಪ್ರದೇಶ | 1.43 | 1.41 | 1.93 |
| ಪಶ್ಚಿಮ ಬಂಗಾಳ | 0.61 | 0.71 | 0.86 |
| ಭಾರತ | 13.64 | 11.29 | 12.59 |

### 3.3.4 ಕರ್ನಾಟಕದಲ್ಲಿ ಬಾಲಕಾರ್ಮಿಕತೆ

**ಹೆಣ್ಣು ಮಗು ಹೆಚ್ಚು ಶೋಷಣೆಗೆ ಒಳಪಡುತ್ತದೆ.... "ಕೆಲಸ ಮತ್ತು ದಿನನಿತ್ಯದ ಮನೆಗೆಲಸದ ಮಧ್ಯೆ ಹೆಣ್ಣುಮಗು ಇಡೀ ದಿನ ಕೆಲಸ ಮಾಡುವುದು"**

ಭಾರತದಲ್ಲಿ ಮಕ್ಕಳು ವಿವಿಧ ರೀತಿಯ ಕೆಲಸಗಳನ್ನು ಮಾಡುತ್ತಾರೆ. ಲಿಂಗದ ಆಧಾರದಲ್ಲಿ ಕೆಲಸಗಳನ್ನು ವರ್ಗೀಕರಿಸಲಾಗಿರುತ್ತದೆ. ಕೃಷಿ ಕ್ಷೇತ್ರದಲ್ಲಿ, ಮನೆಯಲ್ಲಿ, ಬೇರೆ ಬೇರೆ ಅಸಂಘಟಿತ ಕ್ಷೇತ್ರಗಳಲ್ಲಿ ಹೆಣ್ಣು ಮಕ್ಕಳು ಮಾಡುವ ಕೆಲಸ ಮತ್ತು ಗಂಡು ಮಕ್ಕಳು ಮಾಡುವ ಕೆಲಸ ಎಂಬುದಾಗಿ ಪ್ರತ್ಯೇಕಿಸಲಾಗಿದೆ. ಮನೆಯ ಹೆಚ್ಚಿನ ಕೆಲಸಗಳು ಹೆಚ್ಚಾಗಿ ಹೆಣ್ಣು ಮಕ್ಕಳ ಮೇಲೆ ಬೀಳುತ್ತವೆ. ಗ್ರಾಮೀಣ ಪ್ರದೇಶದಲ್ಲಿ ಹೆಣ್ಣು ಮಕ್ಕಳು ಮನೆಯಲ್ಲಿನ ಸಣ್ಣ ಮಕ್ಕಳನ್ನು ನೋಡಿಕೊಳ್ಳುವುದರ ಜೊತೆಗೆ ಅಡುಗೆಯನ್ನು ಮಾಡಬೇಕಾಗುವುದು, ಶುಚಿ ಮಾಡಬೇಕಾಗುವುದು, ಸೌದೆಯನ್ನು ತರಬೇಕಾಗುವುದು, ಇದಲ್ಲದೆ ದೊಡ್ಡವರಿಗೆ ಸಹಾಯವಾಗುವಂತಹ ಹಲವಾರು ಕೆಲಸಗಳನ್ನು ಮಾಡಬೇಕಾಗುವುದು.

ಅಸಂಘಟಿತ ಕ್ಷೇತ್ರಗಳಲ್ಲಿ ಹೆಣ್ಣು ಮಕ್ಕಳನ್ನು ಕಡಿಮೆ ಸಂಬಳದ, ಸಂಬಳವಿಲ್ಲದ ಅಥವಾ ಕೌಶಲ್ಯರಹಿತ ಕೆಲಸಗಳಲ್ಲಿ ತೊಡಗಿಸಿಕೊಳ್ಳಲಾಗುತ್ತದೆ. ಇದರಿಂದ ಅವರಿಗೆ ಯಾವ ರೀತಿಯ ಕೌಶಲ್ಯ ಸಂಪಾದನೆ ಆಗುವುದಿಲ್ಲ. ಆದರೆ ಗಂಡು ಮಕ್ಕಳು ಮಾಡುವ ಕೆಲಸಗಳು ಹೆಚ್ಚಾಗಿ ಒಂದು ರೀತಿಯ ಅಪ್ರೆಂಟಿಶಿಪ್ ತರಬೇತಿಯಾಗಿದ್ದು, ಅವರಿಗೆ ಕೌಶಲ್ಯ ಸಂಪಾದನೆಗೆ ಅವಕಾಶ ಇರುತ್ತದೆ.

ಕರ್ನಾಟಕದಲ್ಲಿ ಈ ಕೆಳಗಿನ ಕ್ಷೇತ್ರಗಳಲ್ಲಿ ಬಾಲಕಾರ್ಮಿಕತೆಯನ್ನು ಹೆಚ್ಚಾಗಿ ಕಾಣಬಹುದಾಗಿದೆ.

- ಕೃಷಿ, ಜಾನುವಾರು ಸಾಕಾಣಿಕೆ, ತೋಟಗಾರಿಕೆ ಮತ್ತು ಮೀನುಗಾರಿಕೆ
- ಬೀಡಿ ತಯಾರಿ
- ಜೀತ ಪದ್ಧತಿ
- ಅಗರ ಬತ್ತಿ ತಯಾರಿಕೆ





- ನಗರಗಳಲ್ಲಿ ಚಿಂದಿ ಆಯುವಿಕೆ
- ಗಣಿಗಳಲ್ಲಿ ಮಕ್ಕಳು ಕೆಲಸ ಮಾಡುವುದು
- ಹೋಟೆಲ್‌ಗಳಲ್ಲಿ ದಾಬಾ ತಿಂಡಿ ತಿನಿಸುಗಳ ಅಂಗಡಿಗಳಲ್ಲಿ
- ರಸ್ತೆಗಳಲ್ಲಿ ಬೆಲೂನ್ ಚೆಂಡುಗಳು ಇತ್ಯಾದಿಗಳನ್ನು ಮಾರಾಟ ಮಾಡುವಲ್ಲಿ/ ರಸ್ತೆ ಮಾರಾಟಗಾರರು
- ಬೇಡುವುದು ಮತ್ತು ರಸ್ತೆ ಬದಿಯ ಸರ್ಕಸ್‌ನಲ್ಲಿ
- ಮಾಂಸ ಮಾರುವ ಅಂಗಡಿಗಳಲ್ಲಿ/ ಖಸಾಯಿ ಖಾನೆಗಳಲ್ಲಿ
- ಮನೆಗೆಲಸದವರಾಗಿ
- ವೇಶ್ಯವಾಟಿಕೆಗಳಲ್ಲಿ
- ಗ್ಯಾರೇಜುಗಳಲ್ಲಿ ಮತ್ತು ವಾಹನ ರಿಪೇರಿ ಸಂಸ್ಥೆಗಳಲ್ಲಿ
- ಕೃಷಿ, ತೋಟದುತ್ಪನ್ನ ಮತ್ತು ಆಹಾರದ ಸಂಸ್ಕರಣಾ ಕ್ಷೇತ್ರಗಳಲ್ಲಿ
- ಕಟ್ಟಡಗಳ ನಿರ್ಮಾಣಗಳಲ್ಲಿ
- ಇಟ್ಟಿಗೆ ಗೂಡುಗಳಲ್ಲಿ
- ರೇಷ್ಮೆ ಮತ್ತು ಸಣ್ಣ ಸಣ್ಣ ಅಸಂಘಟಿತ ಘಟಕಗಳಲ್ಲಿ

### 3.3.5 ಪ್ರಾಂತ್ಯ ಮಟ್ಟದ ಬಾಲಕಾರ್ಮಿಕತೆಯ ಪ್ರಮಾಣ

**ಕೆಲವು ದೊಡ್ಡ ರಾಜ್ಯಗಳಲ್ಲಿನ ಕೆಲಸಮಾಡುತ್ತಿರುವ ಮಕ್ಕಳ ಅನುಪಾತದ ಮೇರೆಗೆ ಬಾಲಕಾರ್ಮಿಕತೆಯ ಶ್ರೇಣಿಕರಣ**

| ರಾಜ್ಯಗಳು | 1983 | 1993/94 | 1999/00 |
|---|---|---|---|
| ಆಂಧ್ರ ಪ್ರದೇಶ | 01 | 01 | 01 |
| ಬಿಹಾರ್ | 12 | 11 | 12 |
| ಗುಜರಾತ್ | 10 | 10 | 04 |
| ಹರಿಯಾಣ | 11 | 12 | 13 |
| ಕರ್ನಾಟಕ | 03 | 03 | 03 |
| ಕೇರಳ | 14 | 14 | 14 |
| ಮಧ್ಯಪ್ರದೇಶ | 07 | 06 | 05 |
| ಮಹಾರಾಷ್ಟ್ರ | 08 | 07 | 09 |
| ಒರಿಸ್ಸಾ | 05 | 05 | 07 |
| ಪಂಜಾಬ್ | 04 | 13 | 11 |
| ರಾಜಸ್ಥಾನ್ | 02 | 02 | 02 |
| ತಮಿಳುನಾಡು | 06 | 04 | 08 |
| ಉತ್ತರ ಪ್ರದೇಶ | 09 | 09 | 10 |
| ಪಶ್ಚಿಮ ಬಂಗಾಳ | 13 | 08 | 06 |






ನಾವು ಗ್ರಾಹಕರಾಗಿ ಯಾವಾಗಲಾದರೂ ನಾವು ಖರೀದಿಸುತ್ತಿರುವ ಆಭರಣಗಳು, ಬಟ್ಟೆಗಳು, ಕುಡಿಯುತ್ತಿರುವ ಟೀ ಇತ್ಯಾದಿಗಳು ಎಲ್ಲಿಂದ ಬಂದಿವೆ? ಯಾರು ತಯಾರಿಸುತ್ತಿದ್ದಾರೆ ಎಂಬ ಬಗ್ಗೆ ಯೋಚಿಸುತ್ತಿದ್ದೇವೆಯೆ?

ನಾವು ಉಪಯೋಗಿಸುವ ಬಟ್ಟೆಗಳು, ಆಭರಣಗಳು, ಅಲಂಕಾರಿಕ ವಸ್ತುಗಳು, ಟೀ ಮುಂತಾದವುಗಳು ಹೆಚ್ಚಾಗಿ ಬಾಲಕಾರ್ಮಿಕರನ್ನೊಳಗೊಂಡು ತಯಾರಿಸಲ್ಪಟ್ಟ ವಸ್ತುಗಳಾಗಿವೆ. ಇಲ್ಲಿ 5 ವರ್ಷದಷ್ಟು ಕಡಿಮೆ ಪ್ರಾಯದ ಮಕ್ಕಳು ಇಡೀ ದಿವಸ ಅಪಾಯಕಾರಿ ಪರಿಸ್ಥಿತಿಯಲ್ಲಿ ತಮ್ಮ ಜೀವವನ್ನು ಅಪಾಯಕ್ಕೆ ಒಡ್ಡಿ ಕಡಿಮೆ ಸಂಬಳದ ಮೇಲೆ ರಕ್ತ ಸುರಿಸಿ ದುಡಿಯುತ್ತಿದ್ದಾರೆ. ಇವರಲ್ಲಿ ಹೆಚ್ಚಿನವರು ತಮ್ಮ ಕೆಲಸಕ್ಕೆ ದಾಸರಾಗಿದ್ದು, ಗುಲಾಮರಾಗಿ, ಜೀತದಾಳಾಗಿ ಕೆಲಸ ಮಾಡುತ್ತಿದ್ದಾರೆ. ಇವರಿಗೆ ಬಿಡುಗಡೆ ಅಥವಾ ಸ್ವಾತಂತ್ರ್ಯ ಕನಸಿನ ಗಂಟಾಗಿರುತ್ತದೆ. ಇವರ ಪೋಷಕರು ತೆಗೆದುಕೊಂಡಿದ್ದಾರೆ ಎನ್ನುವ ಸಾಲವನ್ನು ತೀರಿಸಿದಾಗ ಮಾತ್ರ ಇವರಿಗೆ ಮುಕ್ತಿ. ಈ ಹಿಂದೆ ಕೆಲವೊಮ್ಮೆ ಮಕ್ಕಳು ದೊಡ್ಡವರಾದ ನಂತರ ಅವರ ತಮ್ಮಂದಿರಿಗೆ ಅಥವಾ ತಂಗಿಯಂದಿರಿಗೆ ವಿಸ್ತರಿಸಲ್ಪಡುತ್ತದೆ. ಕಾರಣ ದೊಡ್ಡ ಮಕ್ಕಳು ಈ ಕೆಲಸಗಳನ್ನು ಮಾಡಲು ಅಶಕ್ತರಾಗುತ್ತಾರೆ ಯಾ ಕಾಯಿಲೆಯನ್ನು ಹೊಂದಿರುತ್ತಾರೆ ಯಾ ಸತ್ತಿರುತ್ತಾರೆ ಅಥವಾ ಊನಗೊಂಡಿರುತ್ತಾರೆ.

### 3.3.6 ಪ್ರಮುಖವಾದ ಬಾಲಕಾರ್ಮಿಕತೆಯ ಪ್ರಕಾರಗಳು

| ಕಾನೂನಿನ ಚೌಕಟ್ಟಿನೊಳಗೆ ಸುಮಾರು 6–8% ಬಾಲಕಾರ್ಮಿಕರು ಒಳಪಡುತ್ತಾರೆ. ಈ ಕೆಳಗಿನ ಕಾನೂನುಗಳು ಮಕ್ಕಳನ್ನು ಕಾನೂನಿನ ಚೌಕಟ್ಟಿನೊಳಗೆ ತರುತ್ತವೆ. | ಕಾನೂನಿನ ಪರಿಧಿಯ ಹೊರಗೆ | |
|---|---|---|
| | ಗ್ರಾಮೀಣ ಪ್ರದೇಶದಲ್ಲಿ ಕೃಷಿ ಮತ್ತು ಸಂಬಂಧಿತ ಇತರ ಚಟುವಟಿಕೆಗಳು. (70% ರಷ್ಟು ಬಾಲಕಾರ್ಮಿಕತೆ) | ನಗರ ಪ್ರದೇಶ ಅಸಂಘಟಿತ ಕ್ಷೇತ್ರಗಳು |
| ▪ ಬಾಲಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾನೂನು 1986.<br>▪ ಕಾರ್ಖಾನೆಗಳ ಕಾನೂನು 1948<br>▪ ಪ್ಲಾಂಟೇಷನ್ ಕಾರ್ಮಿಕ ಕಾನೂನು. 1951<br>▪ ಗಣಿ ಕಾನೂನು 1952<br>▪ ಬೀಡಿ ಮತ್ತು ಸಿಗಾರ್ ಕಾರ್ಮಿಕರ ಕಾನೂನು 1966<br>▪ ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಕೀರ್ಣಗಳ ಕಾನೂನು 1961<br>▪ ಬಾಲಾಪರಾಧಿಗಳ ನ್ಯಾಯ ಕಾನೂನು 2000<br> | **ಹುಡುಗಿಯರು**<br>▪ ಸೌದೆ ತರುವುದು ಮತ್ತು ಜಾನುವಾರುಗಳಿಗೆ ಆಹಾರಗಳನ್ನು ಸಂಗ್ರಹಿಸುವುದು<br>▪ ನೀರನ್ನು ತರುವುದು<br>▪ ಕಳೆ ತೆಗೆಯುವುದು<br>▪ ಆಹಾರ ಸಂಸ್ಕರಣೆ<br>▪ ಕೋಳಿ ಸಾಕಣೆ<br>▪ ಸಣ್ಣ ಮಕ್ಕಳನ್ನು ನೋಡಿಕೊಳ್ಳುವುದು<br>**ಹುಡುಗರು**<br>▪ ಉಳುವುದು ಮತ್ತು ತೋಡುವುದು<br>▪ ಜಾನುವಾರುಗಳನ್ನು ಮೇಯಿಸುವುದು<br>▪ ವಸ್ತುಗಳ ಸಾಗಾಟ<br>▪ ಪೈರು ಕಟಾವು ಮತ್ತು ಕಾಳು ಬಿಡಿಸುವುದು<br>▪ ಮಾರಾಟ ಮತ್ತು ಖರೀದಿ<br>▪ ಉಪಕರಣಗಳಿಗೆ ಸಂಬಂಧಪಟ್ಟ ಕೆಲಸಗಳು | ▪ ಕಟ್ಟಡಗಳ ನಿರ್ಮಾಣ<br>▪ ಸಾಮಾನು ಸಾಗಾಟ<br>▪ ಮನೆಗೆಲಸ<br>▪ ಚರ್ಮದ ಕೆಲಸ<br>▪ ರಸ್ತೆ ಬದಿ ಮಾರಾಟಗಾರರು<br>▪ ಹೋಟೆಲ್ ಇತ್ಯಾದಿಗಳ ಸಹಾಯಕರು<br>▪ ಗ್ಯಾರೇಜ್‌ಗಳಲ್ಲಿ<br>▪ ಶೂ ಪಾಲಿಶ್<br>▪ ಕಸ ಗುಡಿಸುವುದು<br>▪ ಚಿಂದಿ ಆಯುವಿಕೆ<br>▪ ವೇಶ್ಯಾವಾಟಿಕೆಗಳಲ್ಲಿ<br>▪ ಬೀಡಿ ತಯಾರಿಕೆ<br>▪ ಹಪ್ಪಳ ತಯಾರಿಕೆ<br>▪ ಅಗರಬತ್ತಿ ತಯಾರಿಕೆ<br>▪ ಕಸೂತಿ ಕೆಲಸ<br>▪ ಹೊಸೈರಿ |

## 3.4 ಅಂತಾರಾಷ್ಟ್ರಿಯ ಕಾರ್ಮಿಕ ಯೋಜನೆ ಮತ್ತು ಬಾಲಕಾರ್ಮಿಕತೆ

ಅಂತಾರಾಷ್ಟ್ರೀಯ ಕಾರ್ಮಿಕ ಸಂಘ ಇದು 1919 ರಲ್ಲಿ ಸ್ಥಾಪನೆ ಆಯಿತು. ಅಂದಿನಿಂದ ಬಾಲಕಾರ್ಮಿಕತೆಯ ನಿರ್ಮೂಲನೆ ಬಗ್ಗೆ ಕೆಲಸ ಮಾಡುತ್ತಿದೆ. ಅಂತಾರಾಷ್ಟ್ರೀಯ ಕಾರ್ಮಿಕ ಸಂಘವು ತನ್ನ ಮೊದಲನೇ ಸಮಾವೇಶದಲ್ಲಿಯೇ 14 ವರ್ಷಕ್ಕಿಂತ ಕೆಳಗಿನ ಪ್ರಾಯದ ಮಕ್ಕಳು ದುಡಿಯುವುದನ್ನು ನಿಷೇಧಿಸಿದೆ.

### 3.4.1 ಕನಿಷ್ಠ ಪ್ರಾಯದ ಸಮಾವೇಶ 1973


ಬಾಲಕಾರ್ಮಿಕತೆಯ ಬಗ್ಗೆ ವ್ಯವಸ್ಥೆ ಮಾಡಿದ ಅತ್ಯಂತ ಮಹತ್ವದ ಸಮಾವೇಶ ಇದಾಗಿದೆ. ಇದರಲ್ಲಿ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳಲು ಕನಿಷ್ಠ ವಯಸ್ಸನ್ನು ನಿರ್ಧಾರ ಮಾಡಲು ಒತ್ತು ಕೊಡಲು ತೀರ್ಮಾನಿಸಲಾಗಿತ್ತು. ಎಲ್ಲಾ ಸದಸ್ಯ ರಾಷ್ಟ್ರಗಳು ಬಾಲಕಾರ್ಮಿಕತೆಯನ್ನು ನಿರ್ಮೂಲನಗೊಳಿಸಲು ರಾಷ್ಟ್ರೀಯ ನೀತಿಯನ್ನು ಹಮ್ಮಿಕೊಳ್ಳುವಂತೆ ಕೋರಲು ನಿರ್ಣಯವನ್ನು ಕೈಗೊಳ್ಳಲಾಗಿದೆ. ಕಾರ್ಮಿಕರ ಕನಿಷ್ಠ ವಯಸ್ಸು ಕಡ್ಡಾಯ ಶಿಕ್ಷಣದ ಗರಿಷ್ಠ ವಯೋಮಿತಿಯಷ್ಟು ಇರುವುದು ಅವಶ್ಯಕ, ಆದರೆ ಯಾವ ಸಂದರ್ಭದಲ್ಲಿಯೂ ಅದು 15 ವರ್ಷಕ್ಕಿಂತ ಕಡಿಮೆ ಇರಬಾರದು. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಶಿಕ್ಷಣದ ವ್ಯವಸ್ಥೆ ಮತ್ತು ಅವಕಾಶಗಳು ಕಡಿಮೆ ಇರುವುದರಿಂದ ಅಲ್ಲಿ ಗರಿಷ್ಠ ವಯೋಮಿತಿ 14 ಇರಬಹುದು, ಉಳಿದ ರಾಷ್ಟ್ರಗಳಲ್ಲಿ ಅದು ಆರಂಭದಲ್ಲಿ 15 ಆಗಿರಬೇಕು ಮತ್ತು ನಿಧಾನವಾಗಿ ವಯೋಮಿತಿಯನ್ನು 18 ರವರೆಗೆ ಏರಿಸಬೇಕು. ಕಾರ್ಮಿಕರಾಗಲು ಕನಿಷ್ಠ ವಯೋಮಿತಿ ಸ್ಥಿರವಾಗಿ ನಿಲ್ಲಬಾರದು ಅದು ಹೆಚ್ಚುತ್ತಾ ಹೋಗುವುದು ಅವಶ್ಯ.

### 3.4.2 ನಿಕೃಷ್ಟ ರೀತಿಯ ಬಾಲಕಾರ್ಮಿಕತೆಯ ಸಮಾವೇಶ 1999

ಈ ಸಮಾವೇಶದಲ್ಲಿ ಎಲ್ಲಾ ರೀತಿಯ ನಿಕೃಷ್ಟ ಪರಿಸ್ಥಿಯ ಬಾಲಕಾರ್ಮಿಕತೆಯನ್ನು ಕೂಡಲೇ ನಿಲ್ಲಿಸುವಂತೆ ನಿರ್ಣಯ ತೆಗೆದುಕೊಳ್ಳಲಾಯಿತು. ಇದನ್ನು 18 ವರ್ಷಕ್ಕಿಂತ ಕಡಿಮೆ ಇರುವ ಎಲ್ಲಾ ಮಕ್ಕಳಿಗೂ ಅನ್ವಯಿಸಲಾಯಿತು. ಸಮಾವೇಶದಲ್ಲಿ ನಿಕೃಷ್ಟ ರೀತಿಯ ಬಾಲಕಾರ್ಮಿಕತೆ ಎಂದರೆ ಏನು ಎಂಬುದಕ್ಕೆ ವಿವರಣೆಯನ್ನು ಕೊಡಲಾಯಿತು. ಗುಲಾಮಗಿರಿಯ ಎಲ್ಲಾ ಪ್ರಕಾರಗಳು ಹಾಗೂ ಇದೇ ರೀತಿಯ ಮಕ್ಕಳ ಮಾರಾಟ ಮತ್ತು ಮಕ್ಕಳ ಸಾಗಾಣಿಕೆ, ಮಕ್ಕಳನ್ನು ಯುದ್ಧಗಳಲ್ಲಿ ತೊಡಗಿಸಿಕೊಳ್ಳುವುದು, ಕಡ್ಡಾಯವಾಗಿ ಕೆಲಸಮಾಡಿಸುವುದು, ಮಕ್ಕಳನ್ನು ವೇಶ್ಯಾವೃತ್ತಿಯಲ್ಲಿ ತೊಡಗಿಸುವುದು, ಮಕ್ಕಳನ್ನು ಅಶ್ಲೀಲ ಚಿತ್ರ ತಯಾರಿಸಲು ಬಳಸಿಕೊಳ್ಳುವುದು ಇತ್ಯಾದಿ.

ಈ ಸಮಾವೇಶದಲ್ಲಿ “ಅಪಾಯಕಾರಿ ಕೆಲಸ” ಎಂದರೆ ಏನೆಂಬುದನ್ನು ಸಹ ವಿವರಿಸಲಾಗಿದೆ. ಇದರ ಪ್ರಕಾರ ದೈಹಿಕ, ಮಾನಸಿಕ ಹಾಗೂ ಲೈಂಗಿಕವಾಗಿ ಮಕ್ಕಳನ್ನು ದುರುಪಯೋಗ ಗೊಳಿಸುವುದು, ಭೂಮಿ ಅಡಿಯಲ್ಲಿನ ಕೆಲಸ, ನೀರಿನ ಅಡಿಯಲ್ಲಿ ಕೆಲಸ ಹಾಗೂ ಅಪಾಯಕಾರಿ ಎತ್ತರದಲ್ಲಿನ ಕೆಲಸ, ಅಪಾಯಕಾರಿ ಯಂತ್ರಗಳೊಂದಿಗೆ ಕೆಲಸ ಇತ್ಯಾದಿ ಅಪಾಯಕಾರಿ ಕೆಲಸವೆಂದು ಪರಿಗಣಿಸಲಾಯಿತು.





### 3.4.3ಅಂತಾರಾಷ್ಟ್ರೀಯ ಬಾಲಕಾರ್ಮಿಕ ನಿರ್ಮೂಲನ ಕಾರ್ಯಕ್ರಮ (ಐ.ಪಿ.ಇ.ಸಿ)

ಈ ಕಾರ್ಯಕ್ರಮವು 60 ಕ್ಕಿಂತ ಹೆಚ್ಚು ರಾಷ್ಟ್ರಗಳಲ್ಲಿ ಅನುಷ್ಠಾನವಾಗುತ್ತಿದ್ದು, ಈ ಕಾರ್ಯಕ್ರಮದ ಮೂಲಕ ಆ ರಾಷ್ಟ್ರಗಳ ಬಾಲಕಾರ್ಮಿಕತೆಯ ನಿರ್ಮೂಲನ ರಾಷ್ಟ್ರೀಯ ಕಾರ್ಯಕ್ರಮಗಳಿಗೆ ಅಗತ್ಯವಾದ ನೆರವು, ತಾಂತ್ರಿಕ ಸಲಹೆ, ಸಹಕಾರ ಇತ್ಯಾದಿಗಳನ್ನು ಒದಗಿಸಲಾಗುತ್ತಿದೆ.

**ಐ.ಪಿ.ಇ.ಸಿ ಕಾರ್ಯಕ್ರಮದ ಆದ್ಯತೆಗಳು:**

- ಜೀತದಲ್ಲಿರುವ ಮಕ್ಕಳು
- ಅಪಾಯಕಾರಿ ಕೆಲಸದಲ್ಲಿ ತೊಡಗಿರುವ ಮಕ್ಕಳು
- ಅಪಾಯಕ್ಕೆ ಸಿಗಬಹುದಾದ ಹಾಗು ದುರ್ಬಲ ವರ್ಗದ ಮಕ್ಕಳು


ಬಾಲಕಾರ್ಮಿಕತೆಯನ್ನು ನಿರ್ಮೂಲನಗೊಳಿಸಲು, ಬಾಲಕಾರ್ಮಿಕರನ್ನು ಕೆಲಸದ ಸ್ಥಳಗಳಿಂದ ಬಿಡಿಸಲು, ಅವರನ್ನು ಪುನರ್‌ವಸತಿ ಗೊಳಿಸಲು ಅಪಾಯಕಾರಿ ಕ್ಷೇತ್ರದಿಂದ ಬಾಲಕಾರ್ಮಿಕರನ್ನು ಬಿಡಿಸಲು, ಕೆಲಸ ಮಾಡುವ ಸ್ಥಳದ ಪರಿಸ್ಥಿತಿಯನ್ನು ಅಭಿವೃದ್ಧಿಗೊಳಿಸಲು ಈ ಯೋಜನೆ ಸಹಾಯ ಮಾಡುವುದು.

**ಐ.ಪಿ.ಇ.ಸಿ ಮುಖ್ಯ ಚಟುವಟಿಕೆಗಳು:**

- ಪೋಷಕರನ್ನು ಪ್ರೇರೇಪಿಸಿ ಅವರು ಬಾಲಕಾರ್ಮಿಕತೆಯ ವಿರುದ್ದವಾಗಿ ಕೆಲಸ ಮಾಡುವಂತೆ ಮಾಡುವುದು.
- ಸಮಸ್ಯೆಯ ಬಗ್ಗೆ ಅರಿವು ಕೊಡಲು ಸಾಂಸ್ಥಿಕ ವ್ಯವಸ್ಥೆಯನ್ನು ಮಾಡುವುದು ಮತ್ತು ಪರಿಸ್ಥಿತಿಯನ್ನು ವಿಶ್ಲೇಷಿಸುವುದು.
- ಬಾಲಕಾರ್ಮಿಕರನ್ನು ಬಿಡಿಸುವ, ಪುನರ್ವಸತಿಗೊಳಿಸುವ ಮತ್ತು ಅಭಿವೃದ್ಧಿ ಪಡಿಸುವ ಕಾನೂನುಗಳನ್ನು ರಚಿಸುವುದು, ಅಭಿವೃದ್ಧಿ ಪಡಿಸುವುದು, ಪ್ರಚಾರ ಮಾಡುವುದು ಮತ್ತು ಅದನ್ನು ಜ್ಯಾರಿಗೊಳಿಸುವುದು.

ಐ.ಪಿ.ಇ.ಸಿ ನಮ್ಮ ದೇಶದಲ್ಲಿ ಬಾಲಕಾರ್ಮಿಕತೆಯನ್ನು ನಿರ್ಮೂಲನಗೊಳಿಸಲು ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದೆ. ಅದರಲ್ಲಿ ಕರ್ನಾಟಕ ಬಾಲಕಾರ್ಮಿಕ ಯೋಜನೆ ಸಹ ಒಂದಾಗಿರುತ್ತದೆ.





## 3.5 ಕರ್ನಾಟಕ ಬಾಲಕಾರ್ಮಿಕ ಯೋಜನೆ

ಈ ಯೋಜನೆ ಅಂತಾರಾಷ್ಟ್ರೀಯ ಕಾರ್ಮಿಕ ಸಂಘ ಮತ್ತು ಇಟಲಿ ಸರಕಾರದ ದ್ವಿಪಕ್ಷಿಯ ತಾಂತ್ರಿಕ ಸಹಕಾರದ ಪ್ರಕ್ರಿಯೆಯ ಫಲಿತಾಂಶವಾಗಿದೆ. ಇದು ಮೂರು ವರ್ಷಗಳ ಯೋಜನೆ ಆಗಿದ್ದು 2005 ರಲ್ಲಿ ಅಸ್ಥಿತ್ವಕ್ಕೆ ಬಂದಿರುತ್ತದೆ. ಇದರ ಮುಖ್ಯ ಗುರಿ ಕರ್ನಾಟಕ ರಾಜ್ಯದ ಬೀದರ್, ಮತ್ತು ಚಾಮರಾಜ ನಗರ ಜಿಲ್ಲೆಗಳಲ್ಲಿ ಬಾಲಕಾರ್ಮಿಕತೆಯ ನಿರ್ಮೂಲನೆ ಮತ್ತು ಬಾಲಕಾರ್ಮಿಕರ ಪುನರ್ ವಸತಿಗೊಳಿಸುವುದಾಗಿದೆ.

ಇದು ಒಂದು ಬಾಲಕಾರ್ಮಿಕತೆಯ ವ್ಯವಸ್ಥೆಯನ್ನು ನಿರ್ಮೂಲನೆ ಮಾಡುವ ಸಂಪೂರ್ಣವಾದ ಯೋಜನೆಯಾಗಿದ್ದು, ನಾಲ್ಕು ಹಂತಗಳಲ್ಲಿ ಅನುಷ್ಠಾನವಾಗುವುದು. ಸಮುದಾಯ, ಕ್ಷೇತ್ರಮಟ್ಟ, ಜಿಲ್ಲಾಮಟ್ಟ ಮತ್ತು ರಾಜ್ಯಮಟ್ಟದಲ್ಲಿ ಅನುಷ್ಠಾನವಾಗುವುದು. ಇದರಿಂದ ಎಲ್ಲಾ ಮಟ್ಟದಲ್ಲಿ ಯೋಜನೆಯ ಪರಿಣಾಮ ಉಂಟಾಗುವುದು.

**ಯೋಜನೆಯ ತಂತ್ರಗಳು:**


- ಸಮುದಾಯ, ಕ್ಷೇತ್ರ ಮತ್ತು ಸಣ್ಣ ಮಟ್ಟದ ಸೇವಾ ಕ್ಷೇತ್ರದಲ್ಲಿ ಚಟುವಟಿಕೆಗಳನ್ನು ಗುರುತಿಸುವುದು.
- ಈ ಚಟುವಟಿಕೆಗಳ ಅಭಿವೃದ್ಧಿ, ಅನ್ವೇಷಣೆ ಇತ್ಯಾದಿಗಳನ್ನು ಹಮ್ಮಿಕೊಳ್ಳುವುದು.
- ಈ ಕ್ಷೇತ್ರಗಳಲ್ಲಿ ಉತ್ತಮವಾದ ಚಟುವಟಿಕೆಗಳನ್ನು ಗುರುತಿಸಿ ಇತರ ಕಡೆಗಳಲ್ಲಿ ಪ್ರಸಾರ ಮಾಡುವುದು ಮತ್ತು ಇವುಗಳ ಮೂಲಕ ಸಮುದಾಯಗಳನ್ನು ಸಶಕ್ತಗೊಳಿಸುವುದು.

ರಾಜ್ಯ ಮಟ್ಟದಲ್ಲಿ ಈ ಯೋಜನೆಯಿಂದ ದೊರಕುವ ಮಾಹಿತಿ ಮತ್ತು ಅನುಭವವನ್ನು ರಾಜ್ಯದ ಯೋಜನೆಯೊಂದಿಗೆ ಹಂಚಿಕೊಳ್ಳಲು ಅವಕಾಶ ಇದೆ. ಇದರಿಂದ ರಾಜ್ಯದ ನೀತಿಗಳು ಮತ್ತು ಯೋಜನೆಗಳು ಹೆಚ್ಚು ಉಪಯುಕ್ತವಾಗಲು ಸಾಧ್ಯವಿದೆ. ಈ ಯೋಜನಯಿಂದ ಆಗುವ ಸಂಶೋಧನೆ, ಸಾಕ್ಷ್ಯಾಧಾರ ಮಾಹಿತಿಗಳನ್ನು ಪ್ರಸರಿಸುವ ಪ್ರಕ್ರಿಯೆ ಮುಂತಾದವುಗಳು. ಕರ್ನಾಟಕ ರಾಜ್ಯ ಬಾಲಕಾರ್ಮಿಕ ಕ್ರಿಯಾಯೋಜನೆಯನ್ನು ಪರಿಷ್ಕರಿಸಲು ಆಸ್ಪದ ಇದೆ.

ಕ್ಷೇತ್ರ ಮಟ್ಟದಲ್ಲಿ ಯೋಜನೆಯು ಬಾಲಕಾರ್ಮಿಕತೆಯ ಬೇಡಿಕೆ ಮತ್ತು ಪೂರೈಕೆಗಳನ್ನು ಗಮನದಲ್ಲಿಟ್ಟುಕೊಂಡಿದೆ. ಬೇಡಿಕೆಯ ವಿಭಾಗದಲ್ಲಿ, ಬಾಲಕಾರ್ಮಿಕತೆಯ ಕಾರಣಗಳನ್ನು ಅನ್ವೇಷಣೆ ಮಾಡಲು ಪ್ರಯತ್ನಿಸುತ್ತಿದೆ ಹಾಗೂ ಮಾಲೀಕರ ಮತ್ತು ಕಾರ್ಮಿಕ ಸಂಘಟನೆಗಳ ಜೊತೆಯಲ್ಲಿ ಕೆಲಸ ಮಾಡುತ್ತಾ ಬಾಲಕಾರ್ಮಿಕ ರಹಿತ ತಾಂತ್ರಿಕತೆಯನ್ನು ಪರಿಚಯಿಸಲು ಮತ್ತು ಕೆಲಸ ಮಾಡುವ ವಾತಾವರಣವನ್ನು ಅಭಿವೃದ್ಧಿ ಪಡಿಸಲು ಪ್ರಯತ್ನಿಸುವುದು.

ಪೂರೈಕೆ ವಿಭಾಗದಲ್ಲಿ ಬಾಲಕಾರ್ಮಿಕತೆಯನ್ನು ತಡೆಯಲು ಪೋಷಕರಿಗೆ ಮತ್ತು ಹೆಚ್ಚು ಪ್ರಾಯದ ಬಾಲಕಾರ್ಮಿಕರಿಗೆ ಜೀವನಾಧಾರಗಳನ್ನು ಒದಗಿಸಲು, ಶಿಕ್ಷಣ ಮತ್ತು ಸಾಮಾಜಿಕ ಭದ್ರತೆಗಳನ್ನು ಒದಗಿಸಲಾಗುವುದು. ಅದೇ ರೀತಿಯಲ್ಲಿ ವಿವಿಧ ಭಾಗೀದಾರರ ಮನಸ್ಸನ್ನು ಬದಲಾಯಿಸಲು ಸಹ ಪ್ರಯತ್ನಿಸಲಾಗುವುದು.





**ಕರ್ನಾಟಕ ಬಾಲಕಾರ್ಮಿಕ ಯೋಜನೆಯ ಧ್ಯೇಯಗಳು**

1. ಶಿಕ್ಷಣ ಮತ್ತು ಅರಿವಿನ ಮೂಲಕ ಬಾಲಕಾರ್ಮಿಕತೆ ಆಗದಂತೆ ನೋಡಿಕೊಳ್ಳುವುದು. ಮತ್ತು ಬಾಲಕಾರ್ಮಿಕರನ್ನು ಬಿಡುಗಡೆ ಗೊಳಿಸುವುದು
2. ಸ್ವ ಉದ್ಯೋಗ ಮತ್ತು ಕೌಶಲ್ಯ ಅಭಿವೃದ್ಧಿ ಮೂಲಕ ಗಳಿಕೆಯ ಶಕ್ತಿಯನ್ನು ಹೆಚ್ಚಿಸುವುದು.
3. ಸ್ವ ಸಹಾಯ ಸಂಘಗಳ ಮೂಲಕ ಸಾಮಾಜಿಕ ಬದಲಾವಣೆ ಹಾಗೂ ಸ್ವ ಸಹಾಯ ಸಂಘಗಳ ಒಕ್ಕೂಟ ರಚನೆ.
4. ಸಶಕ್ತಿಗಾಗಿ ಮತ್ತು ಸರಕಾರದ ಕಾರ್ಯಕ್ರಮಗಳ ಲಾಭ ಪಡೆಯಲು ಸಾಂಘಿಕ ಅನುಸಾಂದನೆ ನಡೆಸುವುದು.
5. ಹದಿಹರೆಯದವರಿಗೆ ವೃತ್ತಿ ಶಿಕ್ಷಣದ ತರಬೇತಿ.
6. ಸ್ಥಳೀಯ ಉದ್ಯಮಗಳಲ್ಲಿ ಕೆಲಸ ಮಾಡುವ ವಾತಾವರಣವನ್ನು ಉತ್ತಮಪಡಿಸುವುದು.
7. ಸಮುದಾಯ ಪರಿವೀಕ್ಷಣೆ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸುವುದು. ಸಮುದಾಯ ಪರಿವೀಕ್ಷಣೆ ವ್ಯವಸ್ಥೆಯಲ್ಲಿ ಪಾಲ್ಗೊಳ್ಳುವ ಸಂಘ ಸಂಸ್ಥೆಗಳ ಶಕ್ತಿಯನ್ನು ಅಭಿವೃದ್ಧಿ ಪಡಿಸುವುದು. ಸ್ವ ಸಹಾಯ ಸಂಘಗಳು, ಮಹಿಳಾ ಮಂಡಲಗಳು, ಯುವಕ ಮಂಡಲಗಳು, ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು, ಅಂಗನವಾಡಿ ಸಭೆ, ಹಾಲಿನ ಸೊಸೈಟಿ, ಅರಣ್ಯ ಸಮಿತಿ, ನೀರಾವರಿ ಸಮಿತಿ, ಗ್ರಾಮ ಪಂಚಾಯತ್ ಮುಂತಾದ ಸಂಸ್ಥೆಗಳ ಶಕ್ತಿಯನ್ನು ಹೆಚ್ಚಿಸಿ ಅವರನ್ನು ಬಾಲಕಾರ್ಮಿಕತೆಯ ನಿರ್ಮೂಲನೆಯ ಪರಿವೀಕ್ಷಣೆಯಲ್ಲಿ ತೊಡಗಿಸಿಕೊಳ್ಳುವುದು.
8. ತಳಮಟ್ಟದ ಸಂಸ್ಥೆಗಳನ್ನು, ಕ್ಷೇತ್ರ, ಜಿಲ್ಲಾ ಮತ್ತು ರಾಜ್ಯಮಟ್ಟದ ಸಂಸ್ಥೆಗಳ ಬಲವರ್ಧನೆಗೊಳಿಸುವುದು.
9. ಸಂಶೋಧನೆ, ವಿನೂತನ ಕ್ರಮಗಳ ಅನ್ವೇಷಣೆಗಳಿಗೆ ಪ್ರೋತ್ಸಾಹ ನೀಡುವುದು. ಸೇತುಬಂಧ ಶಾಲೆ, ಕಲಿಕೆಯ ಸಾಮಗ್ರಿಗಳ ಅಭಿವೃದ್ಧಿ, ತಾಂತ್ರಿಕತೆಗೆ ಸಂಬಂಧಪಟ್ಟ ವಿಷಯಗಳು, ವೃತ್ತಿ ಶಿಕ್ಷಣ, ಬಾಲಕಾರ್ಮಿಕತೆಯ ಅನೌಪಚಾರಿಕ ವಿಷಯಗಳು, ಮಕ್ಕಳ ಸಾಗಾಟ ವ್ಯವಸ್ಥೆ ಇತ್ಯಾದಿಗಳ ಬಗ್ಗೆ ಸಲಹೆಗಳನ್ನು ವ್ಯವಸ್ಥೆ ಮಾಡುವುದು.



### 3.5.1 ಯೋಜನೆಯ ಪ್ರತಿಫಲಗಳು

- ಸಮುದಾಯದವರಿಗೆ ಬಲವರ್ಧನೆ ಮಾಡಿದರೆ ಮತ್ತು ಸರಿಯಾದ ಮಾಹಿತಿ ಒದಗಿಸಿದರೆ, ಯೋಜನೆಯಿಂದ ಒದಗಿಸಲ್ಪಡುವ ಕಾರ್ಯಕ್ರಮಗಳು ಸ್ವಯಂ ನಡೆದುಕೊಂಡು ಹೋಗಲು ದಾರಿ ಆಗುವುದು. ಬಾಲಕಾರ್ಮಿಕತೆ ಬಗ್ಗೆ ಸಮುದಾಯಕ್ಕೆ ಮಾಹಿತಿ ಮತ್ತು ಅರಿವು ಕೊಡಲು ಹೊಸ ಹೊಸ ಮಾದರಿಗಳನ್ನು ಉಪಯೋಗಿಸಲಾಗುವುದು. ಬಾಲಕಾರ್ಮಿಕತೆ ನಿರ್ಮೂಲನದ ಬಗ್ಗೆ ಇರುವ ಉತ್ತಮವಾದ ಪೋಸ್ಟರ್‌ಗಳನ್ನು ಉಪಯೋಗಿಸಲಾಗುತ್ತಿದೆ. ಇದಲ್ಲದೆ ಈ ಕೆಳಗಿನ ಐ.ಇ.ಸಿ ವಸ್ತುಗಳ ಪ್ರಕಾರಗಳನ್ನು ಉಪಯೋಗಿಸಲಾಗುವುದು.
  - ಗೋಡೆ ಬರಹ
  - ಡಾಕ್ಯುಮೆಂಟರಿ ವಿಡಿಯೋ ಸಿನೆಮಾಗಳು
  - ಗೊಂಬೆಗಳ ಆಟ
  - ಬೀದಿನಾಟಕ

ಬೀದಿ ನಾಟಕ ಮತ್ತು ಗೊಂಬೆ ಆಟಗಳು ಶಾಲಾ ಮಕ್ಕಳ ಮತ್ತು ಬಾಲಕಾರ್ಮಿಕರ ಮನಸ್ಸನ್ನು ಪರಿವರ್ತಿಸಲು ಸಹಕಾರಿ ಆಗುವುದು. ಬಾಲಕಾರ್ಮಿಕತೆಯ ನಿರ್ಮೂಲನೆ ಬಗ್ಗೆ ಇರುವ ಬೀದಿ ನಾಟಕಗಳ ಹೊತ್ತಿಗೆಗಳನ್ನು ಹೊರತರಲಾಗಿದೆ. ಇವನ್ನು ಆಸಕ್ತರು ಉಪಯೋಗಿಸಬಹುದಾಗಿದೆ.

- ಸಮುದಾಯದ ಪರಿವೀಕ್ಷಣೆ ವ್ಯವಸ್ಥೆಯನ್ನು ರೂಪಿಸಲಾಗುವುದು. ಈ ಕೆಳಗಿನ ಸಂಸ್ಥೆಗಳ ಸದಸ್ಯರು ಮುಖ್ಯ ಪಾತ್ರ ವಹಿಸಬಹುದು.
  - ಎಸ್.ಡಿ.ಎಂ.ಸಿ ಸದಸ್ಯರು
  - ಮಹಿಳಾ ಮಂಡಲ ಸದಸ್ಯರು
  - ಯುವಕ ಮಂಡಲ ಸದಸ್ಯರು
  - ಅಂಗನವಾಡಿ ಸಮಿತಿ
  - ಸ್ವ ಸಹಾಯ ಸಂಘಗಳ ಸದಸ್ಯರು
  - ಗ್ರಾಮ ಪಂಚಾಯತ್ ಸದಸ್ಯರು

ಇವರು ಬಿಡುಗಡೆ ಹೊಂದಿದ ಮತ್ತು ಪುನರ್ವಸತಿ ಆಗಿರುವ ಬಾಲಕಾರ್ಮಿಕರ ಶಿಕ್ಷಣದ ಅಭಿವೃದ್ಧಿ ಇತ್ಯಾದಿಗಳನ್ನು ಪರಿವೀಕ್ಷಣೆ ಮಾಡುವರು.

- ಯೋಜನೆಯು ಕುಟುಂಬವನ್ನು ಒಂದು ಘಟಕವಾಗಿ ತೆಗೆದುಕೊಂಡು, ಕುಟುಂಬದ ಅಭಿವೃದ್ಧಿಯ ಕಡೆಗೆ ಗಮನ ಕೊಡುತ್ತಿದೆ. ಇದರಿಂದ ಬಾಲಕಾರ್ಮಿಕರನ್ನು ಕೆಲಸದಿಂದ ಬಿಡುಗಡೆ ಮಾಡಿದಾಗ, ಕುಟುಂಬದ ಇತರ ಸದಸ್ಯರು ಸಾಮಾಜಿಕ ಭದ್ರತಾ ಕಾರ್ಯಕ್ರಮಗಳ ಲಾಭವನ್ನು ಪಡೆಯಬಹುದಾಗಿದೆ. ಯೋಜನೆಯ ಲಾಭವು ಇಡೀ ಕುಟುಂಬಕ್ಕೆ ಸಿಗುವುದರಿಂದ, ಕುಟುಂಬದ ಇತರ ಸದಸ್ಯರು ಸಹ ಲಾಭ ಪಡೆಯಲು ಅವಕಾಶ ಇದೆ.
- ಕುಟುಂಬಕ್ಕೆ ಜೀವನಾಧಾರ ಒದಗಿಸುವ ಕಸುಬುಗಳನ್ನು/ ಉಪಕಸುಬುಗಳನ್ನು ನಡೆಸಿ ಹೆಚ್ಚು ಸಂಪಾದಿಸುವ ಅಥವಾ ಸಂಪಾದನೆ ಹೆಚ್ಚು ಮಾಡುವಂತಾಗುವುದು ( ದುರ್ಬಲ ವರ್ಗದ ಪೋಷಕರಿಗೆ ಮತ್ತು ಹದಿಹರೆಯದ ಯುವಕರಿಗೆ)
- ಯೋಜನೆಯು ಉದ್ಯೋಗ ಮತ್ತು ಉದ್ಯೋಗಸತ್ವವನ್ನು ಮೂರು ಹಂತಗಳಲ್ಲಿ ಪ್ರಯತ್ನಿಸುತ್ತಿದೆ. ಪ್ರಾಥಮಿಕ ಹಂತ (ಕೃಷಿ ಮತ್ತು ಅದಕ್ಕೆ ಸಂಬಂಧಪಟ್ಟ ಕೆಲಸಗಳು) ದ್ವಿತೀಯ ಹಂತ (ಉತ್ಪಾದನೆ ಮತ್ತು ಮಾರಾಟ) ಮತ್ತು ತೃತೀಯ ಹಂತ (ಸೇವಾಕ್ಷೇತ್ರ), ಯೋಜನೆಯು ಈ ಮೂರು ವಿಭಾಗಗಳಲ್ಲಿ ಅನುಷ್ಠಾನ ಗೊಳಿಸಬಹುದಾದ ಅನುಕೂಲಕರವಾದ,




ಪಾಲಿಸಬಹುದಾದ ಮತ್ತು ಉಪಯೋಗಿಸಬಹುದಾದ ವೃತ್ತಿ ಶಿಕ್ಷಣದ ಬಗ್ಗೆ ಸಂಶೋಧನೆ ನಡೆಸುವುದು.

- ಬಾಲಕಾರ್ಮಿಕತೆಯ ಕಾರಣಗಳು ಮತ್ತು ಪರಿಣಾಮಗಳ ಬಗ್ಗೆ ಸರಿಯಾದ ಚಿತ್ರಣ ಇರುವುದಿಲ್ಲ. ಕಾರ್ಮಿಕ ಕಾನೂನಿನ ಪ್ರಕಾರ 14 ವರ್ಷಗಳ ನಂತರ ಮಕ್ಕಳು ಕೆಲಸಮಾಡಬಹುದಾಗಿದೆ. ಆದರೆ ವೃತ್ತಿಶಿಕ್ಷಣವು 10+2 ಹಂತದಲ್ಲಿ ಮಾತ್ರ ಸಿಗುತ್ತದೆ. ಅಂದರೆ 18+ ವರ್ಷಗಳ ನಂತರ ಕಾರ್ಮಿಕರಾದರೆ, ಅವರು ಯಾವುದಾದರೂ ವೃತ್ತಿ ಶಿಕ್ಷಣದ ಲಾಭ ಪಡೆದುಕೊಳ್ಳಬಹುದು ಇಲ್ಲದೆ ಇದ್ದರೆ ಅವರು ಕೌಶಲ್ಯರಹಿತ ಕಾರ್ಮಿಕರಾಗಬೇಕಾಗುವುದು. ಅವರಿಗೆ ಉತ್ತಮ ಸಂಪಾದನೆ ಇರುವುದಿಲ್ಲ. ಇದರಿಂದ ಅವರು ಬಡತನದಿಂದ ಜೀವನ ಸವೆಸಬೇಕಾಗುವುದು. ಇದನ್ನು ತಪ್ಪಿಸಲು 14–18 ವರ್ಷದೊಳಗೆ ವೃತ್ತಿ ಶಿಕ್ಷಣ ದೊರಕಿಸುವ ವ್ಯವಸ್ಥೆ ಆಗಬೇಕು.
- ಸೇತುಬಂಧ ಶಾಲೆಯಲ್ಲಿ ಕಲಿಸಲು ಅನುಕೂಲಕರವಾದ ಮತ್ತು ಅವಶ್ಯಕವಾದ ಕಲಿಕಾ ವಸ್ತುಗಳನ್ನು ತಯಾರಿಸುವುದು.
- ಮಕ್ಕಳ ಚಲನವಲನಗಳನ್ನು ಗಮನದಲ್ಲಿ ಇಡುವ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಿ ಉಪಯೋಗಿಸುವ ವ್ಯವಸ್ಥೆ ಆಗಬೇಕು.
- ಸಾಮಾಜಿಕ ಭದ್ರತೆ ಮತ್ತು ಬಾಲಕಾರ್ಮಿಕ ಪಾಲಿಸಿಗಳ ಬಗ್ಗೆ ಸಂಶೋಧನೆಯನ್ನು ಔಪಚಾರಿಕ ರಂಗದಲ್ಲಿನ ಬಾಲಕಾರ್ಮಿಕತೆಯ ನಿವಾರಣೆಗೆ ತಾಂತ್ರಿಕತೆಯನ್ನು ಅಭಿವೃದ್ಧಿಗೊಳಿಸುವುದು ಮತ್ತು ಮಾಲಿಕರ ಮನವೊಲಿಸುವುದು.
- ತನಗೆ ವಹಿಸಿದ ಕೆಲಸವನ್ನು ನಿರ್ವಹಿಸಲು, ಯೋಜನೆಯು ಕಾರ್ಮಿಕರ ಸಂಘಟನೆ, ಮಾಲೀಕರ ಸಂಘಟನೆ, ಸರ್ಕಾರೇತರ ಸಂಸ್ಥೆಗಳು, ಸಂಘ ಸಂಸ್ಥೆಗಳು ಎಲ್ಲಾ ಹಂತ ಸರ್ಕಾರಿ ನೌಕರರು ಸೇರಿ ಕೆಲಸ ಮಾಡುವುದು.

ಈ ಯೋಜನೆಯಿಂದ

- ➢ 9–14 ವರ್ಷದ 5000 ಬಾಲಕಾರ್ಮಿಕ ಮಕ್ಕಳನ್ನು ಗುರುತಿಸಿ ಅವರನ್ನು ಬಿಡುಗಡೆಗೊಳಿಸಿ, ಸೇತುಬಂಧ ಶಾಲೆಗೆ ಸೇರಿಸುವುದು. ಇದಕ್ಕಾಗಿ ಸೇತುಬಂಧ ಶಾಲೆಗಳನ್ನು ತೆರೆಯಲಾಗುವುದು.
- ➢ 14–18 ವರ್ಷದ 4000 ಹದಿಹರೆಯದವರಿಗೆ ವೃತ್ತಿಶಿಕ್ಷಣ ಒದಗಿಸುವುದು. ಇದರಿಂದ ಅವರಿಗೆ ಕೆಲಸ ಸಿಗುವ ಅವಕಾಶ ಹೆಚ್ಚಾಗುವುದು.
- ➢ 1000 ಜನರಿಗೆ (ಬಾಲಕಾರ್ಮಿಕರ ಮನೆಯವರು) ವೃತ್ತಿ ಶಿಕ್ಷಣ ಒದಗಿಸುವುದು.
- ➢ 180 ಸ್ವ ಸಹಾಯ ಸಂಘಗಳನ್ನು ಒಕ್ಕೂಟಗೊಳಿಸುವುದು. ಇದರಿಂದ ಸಾಂಘಿಕವಾಗಿ ಅವರು ತಮ್ಮನ್ನು ಅಭಿವೃದ್ಧಿಪಡಿಸಿಕೊಳ್ಳಲು ಸಹಕಾರಿ ಆಗುವುದು.
- ➢ 100 ಜನ ಮಾಲಿಕರಿಗೆ ತಮ್ಮ ವ್ಯಾಪಾರ ವಹಿವಾಟುಗಳನ್ನು ಅಭಿವೃದ್ಧಿಗೊಳಿಸಲು ಸಹಕಾರ ಕೊಡುವುದು.





## 3.6 ಬಾಲಕಾರ್ಮಿಕತೆಯ ಬಗ್ಗೆ ಭಾರತದ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನಗಳು

ಭಾರತದ ಸರ್ವೋಚ್ಚ ನ್ಯಾಯಾಲಯವು ದಿನಾಂಕ 10–12–1996 ರಂದು ಸಿವಿಲ್ ದಾವೆ ಸಂಖ್ಯೆ 465/1986 ರ ಬಗ್ಗೆ ತನ್ನ ತೀರ್ಪನ್ನು ಕೊಡುತ್ತಾ, ಅಪಾಯಕಾರಿ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಮಕ್ಕಳನ್ನು ಕೆಲಸದ ಸ್ಥಳದಿಂದ ಬಿಡಿಸಿ ಅವರನ್ನು ಪುನರ್ವಸತಿಗೊಳಿಸುವ ಬಗ್ಗೆ ಹಾಗೂ ಅಪಾಯಕಾರಿ ಅಲ್ಲದ ಕ್ಷೇತ್ರಗಳಲ್ಲಿ ಬಾಲಕಾರ್ಮಿಕತೆಯನ್ನು ಯಾವ ರೀತಿಯಲ್ಲಿ ಗುರುತಿಸಬೇಕು ಮತ್ತು ಅವರು ಕೆಲಸ ಮಾಡುವ ವಾತಾವರಣವನ್ನು ಅಭಿವೃದ್ಧಿ ಪಡಿಸಬೇಕು ಎಂಬುದರ ಬಗ್ಗೆ ಕೆಲವೊಂದು ನಿರ್ದೇಶನಗಳನ್ನು ಕೊಟ್ಟಿರುತ್ತದೆ. ಅವುಗಳು ಈ ಕೆಳಗಿನಂತಿವೆ.

(ಅ) ರಾಷ್ಟ್ರದ ಎಲ್ಲಾ ಜಿಲ್ಲೆಗಳಲ್ಲಿ ಸಮನಾಂತರವಾಗಿ ಒಂದೇ ಬಾರಿ ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು.

(ಆ) ಕೆಲಸ ಮಾಡುತ್ತಿರುವ ಮಕ್ಕಳ ಗಣತಿಯನ್ನು ದಿನಾಂಕ 10–06–1997 ರ ಒಳಗೆ ಮುಗಿಸಬೇಕು.

(ಇ) ಅಪಾಯಕಾರಿ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಮಕ್ಕಳನ್ನು ಬಿಡುಗಡೆಗೊಳಿಸಿ ಅವರಿಗೆ ಸರಿಯಾದ ಸಂಸ್ಥೆಗಳಲ್ಲಿ ಶಿಕ್ಷಣದ ವ್ಯವಸ್ಥೆ ಮಾಡಬೇಕು.

(ಈ) ಮಕ್ಕಳನ್ನು ಕೆಲಸದಲ್ಲಿ ಇಟ್ಟುಕೊಂಡಿರುವ ಮಾಲೀಕರಿಂದ ರೂ. 20000/– ವಸೂಲಿ ಮಾಡಿ ಅದನ್ನು ಈ ಬಗ್ಗೆ ರಚಿಸುವ ಕಲ್ಯಾಣ ನಿಧಿಯಲ್ಲಿ ಇಡಬೇಕು.

(ಉ) ಹೀಗೆ ಬಿಡುಗಡೆಗೊಳಿಸಿದ ಬಾಲಕಾರ್ಮಿಕ ಮಗುವಿನ ಕುಟುಂಬದಲ್ಲಿ ಒಬ್ಬರಿಗೆ ಸರಕಾರ ಕೆಲಸ ಒದಗಿಸಬೇಕು. ಹೀಗೆ ಒಂದು ವೇಳೆ ಕೆಲಸ ಒದಗಿಸಲು ಅಸಾಧ್ಯವಾದರೆ, ರಾಜ್ಯ ಸರಕಾರ ತನ್ನ ವತಿಯಿಂದ ರೂ. 5000/– ದೇಣಿಗೆಯಾಗಿ ಕಲ್ಯಾಣ ನಿಧಿಗೆ, ಆ ಮಗುವಿನ ಬಗ್ಗೆ ಕೊಡಬೇಕು.

(ಊ) ಬಿಡುಗಡೆಗೊಳಿಸಿದ ಮಕ್ಕಳ ಕುಟುಂಬಗಳಿಗೆ ಆರ್ಥಿಕ ಸಹಾಯವನ್ನು ಈ ಕಲ್ಯಾಣ ನಿಧಿಯಿಂದ ದೊರಕುವ ಬಡ್ಡಿಯಿಂದ ಮಗುವನ್ನು ಶಾಲೆಗೆ ಕಳುಹಿಸುವವರೆಗೆ ಕೊಡಬೇಕು. (ರೂ.20000/25000)

(ಋ) ಅಪಾಯಕಾರಿ ಅಲ್ಲದ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಮಕ್ಕಳ ಕೆಲಸದ ಅವಧಿ ದಿವಸಕ್ಕೆ 6 ಗಂಟೆಗಳಿಗಿಂತ ಹೆಚ್ಚಾಗಬಾರದು ಮತ್ತು ಪ್ರತಿ ದಿವಸ 2 ಗಂಟೆಗಳ ಕಾಲ ಶಿಕ್ಷಣ ಒದಗಿಸಬೇಕು. ಈ ಮಕ್ಕಳ ಶಿಕ್ಷಣದ ವೆಚ್ಚವನ್ನು ಸಂಬಂಧಪಟ್ಟ ಮಾಲೀಕರು ಭರಿಸಬೇಕು.

(ಎ) ಈ ಬಗ್ಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಸರಿಯಾದ ಯೋಜನೆ ತಯಾರಿಸಿಕೊಳ್ಳಬೇಕು ಮತ್ತು ತಯಾರಿ ಮಾಡಿಕೊಳ್ಳಬೇಕು. ಈ ರೀತಿಯಲ್ಲಿ ಯೋಜನೆ ತಯಾರಿಸುವಾಗ ಮತ್ತು ತಯಾರಿ ಮಾಡುವಾಗ ಬೇಕಾಗುವ ಆಡಳಿತ/ ಅನುಷ್ಠಾನ / ನಿಯಂತ್ರಣ ವ್ಯವಸ್ಥೆಗೆ ತಗಲುವ ಹೆಚ್ಚುವರಿ ವೆಚ್ಚ ಭರಿಸಬೇಕು (ಹೆಚ್ಚುವರಿ ಸಿಬ್ಬಂದಿ ವೆಚ್ಚ, ತರಬೇತಿ, ಗಣಕೀಕರಣ, ಸಾಗಾಟ ವೆಚ್ಚ)



## 3.7 ಅಪಾಯಕಾರಿ ಬಾಲಕಾರ್ಮಿಕತೆ


ಸುಮಾರು 171 ಮಿಲಿಯನ್ 5–17 ವಯೋಮಿತಿಯ ಮಕ್ಕಳು ಅಪಾಯಕಾರಿ ಬಾಲಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದಾರೆ. ಅವರು ಈ ಪ್ರಕ್ರಿಯೆಯಲ್ಲಿ ಸಾವನಪ್ಪಿರಬಹುದು ಅಥವಾ ಖಾಯಂ ಆಗಿ ಹೆಳವರಾಗಿರಬಹುದು ಅಥವಾ ಖಾಯಿಲೆಗೆ ತುತ್ತಾಗಿರಬಹುದು. ಭದ್ರತೆ ಇಲ್ಲದ ಮತ್ತು ಅನಾರೋಗ್ಯ ಪರಿಸ್ಥಿತಿಯಲ್ಲಿ ಮಕ್ಕಳು ಕೆಲಸ ಮಾಡುತ್ತಿರಬಹುದು.

ಅಪಾಯಕಾರಿ ಬಾಲಕಾರ್ಮಿಕತೆ ಎಂದರೆ ಮಕ್ಕಳು ತಮ್ಮ ಜೀವವನ್ನು ಕಳೆದುಕೊಳ್ಳುವ ಕೆಲಸ ವ್ಯವಸ್ಥೆಯಲ್ಲಿ ಅಥವಾ ತಮ್ಮ ಅಂಗಾಂಗಗಳನ್ನು (ಖಾಯಂ ಆಗಿ) ಊನಗೊಳಿಸಿಕೊಳ್ಳುವ ಕೆಲಸದ ಪರಿಸ್ಥಿತಿಯಲ್ಲಿ ಕೆಲಸ ಮಾಡುವುದಕ್ಕೆ ಅಪಾಯಕಾರಿ ಬಾಲಕಾರ್ಮಿಕತೆ ಎಂದು ಕರೆಯಲಾಗುವುದು.

ಅಪಾಯಕಾರಿ ಬಾಲಕಾರ್ಮಿಕತೆ ಅತ್ಯಂತ ನಿಕೃಷ್ಟ ಬಾಲಕಾರ್ಮಿಕತೆ ಆಗಿದ್ದು, ಇದರಲ್ಲಿ ಯಾವುದೇ ಮಕ್ಕಳು ತೊಡಗಬಾರದು. ಯಾವುದೇ ಅಪಾಯಕಾರಿ ಬಾಲಕಾರ್ಮಿಕತೆಯಲ್ಲಿ ಮಕ್ಕಳು ಕೆಲಸ ಮಾಡಲೇಬಾರದು.

ಸುಮಾರು 22000 ಮಕ್ಕಳು ಪ್ರತಿ ವರ್ಷ ಕೆಲಸ ಮಾಡುವಾಗ ಅವರು ತಮ್ಮ ಜೀವವನ್ನು ಕಳೆದುಕೊಳ್ಳುತ್ತಾರೆ. ಕಾಯಿಲೆಗೆ ಬೀಳುವ ಹಾಗೂ ಅಪಘಾತಕ್ಕೆ ಸಿಕ್ಕುವ ಮಕ್ಕಳ ಲೆಕ್ಕ ಸರಿಯಾಗಿ ಸಿಗುತ್ತಿಲ್ಲ. ಆದರೆ ಪ್ರತಿ ವರ್ಷ ಸುಮಾರು 270 ಮಿಲಿಯ ಕೆಲಸದ ಅಪಘಾತಗಳು ಮತ್ತು 160 ಮಿಲಿಯ ಕೆಲಸದಿಂದ ಕಾಯಿಲೆಗೆ ಬೀಳುವುದು ನಡೆಯುತ್ತಿದೆ ಎಂದು ಅಂದಾಜಿಸಲಾಗಿದೆ. ಇದರಲ್ಲಿ ಬಾಲಕಾರ್ಮಿಕರ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಇದೆ. ಅಪಾಯಕಾರಿ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಮಕ್ಕಳು ಅಪಘಾತಕ್ಕೆ ತುತ್ತಾಗುವುದು ಹೆಚ್ಚು.





## 3.8 ನಿಕೃಷ್ಠ ಪರಿಸ್ಥಿತಿಯ ಬಾಲಕಾರ್ಮಿಕತೆ

ಅಪಾಯಕಾರಿ ಬಾಲಕಾರ್ಮಿಕತೆ ಅಲ್ಲದೆ, ಸುಮಾರು 8.4 ಮಿಲಿಯನ್ ಮಕ್ಕಳು (ಪ್ರಪಂಚದಲ್ಲಿ) ನಿಕೃಷ್ಠ ಪರಿಸ್ಥಿತಿಯ ಬಾಲಕಾರ್ಮಿಕತೆಯಲ್ಲಿ ತೊಡಗಿರುತ್ತಾರೆ. ಅವರು “ಸಾಗಾಟದಲ್ಲಿ”, “ಜೀತ ಪದ್ದತಿಯಲ್ಲಿ”, “ಯುದ್ದದಲ್ಲಿ”, ವೇಶ್ಯಾ ವೃತ್ತಿಯಲ್ಲಿ ಮತ್ತು ಇತರ ಕಾನೂನು ಬಾಹಿರ ಚಟುವಟಿಕೆಯಲ್ಲಿ ತೊಡಗಿರಬಹುದು.

ಇದು ಅತ್ಯಂತ ನಿಕೃಷ್ಠಹೀನ ಹಾಗೂ ಕಳವಳಕಾರಿ ಪರಿಸ್ಥಿತಿ ಆಗಿದ್ದು, ಇದರಿಂದ ಸಮಾಜ ಘಾತುಕ ಶಕ್ತಿಗಳು ಉದ್ಭವ ಆಗುವ ಸಂಭವ ಹೆಚ್ಚಾಗಿದೆ.

**ಹೀನ ರೀತಿಯ ಬಾಲಕಾರ್ಮಿಕತೆಯ ಪ್ರಕಾರಗಳು**

– ಮಕ್ಕಳನ್ನು ವೇಶ್ಯಾವೃತ್ತಿಯಲ್ಲಿ ತೊಡಗಿಸುವುದು.

– ಜೀತದಾಳಾಗಿ ಕೆಲಸ ಮಾಡಿಸುವುದು.


– ಯುದ್ದದಲ್ಲಿ ಭಾಗವಹಿಸುವುದು.

– ಅಮಲು ಪದಾರ್ಥಗಳನ್ನು ಸಾಗಾಟ ಮಾಡಿಸುವುದು.

– ಲೈಂಗಿಕ ಚಿತ್ರಗಳನ್ನು ತಯಾರಿಸಲು ಉಪಯೋಗಿಸುವುದು.

– ಇತರ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿಸುವುದು.





## 3.9 ಆಯ್ದ ಕೆಲವು ಮಿಥ್ಸ್ ಮತ್ತು ನಿಜ ಸಂಗತಿಗಳು

ಈ ಕೆಳಗಿನವುಗಳು ಬಾಲಕಾರ್ಮಿಕತೆಯ ಬಗ್ಗೆ ಪ್ರಚಲಿತದಲ್ಲಿರುವ ಕೆಲವು ಆಯ್ದ ಮಿಥ್ಸ್ ಮತ್ತು ನಿಜ ಸಂಗತಿಗಳು.

**3.9.1 ಬಡತನವು ಬಾಲಕಾರ್ಮಿಕತೆಗೆ ಮುಖ್ಯ ಕಾರಣ.**

ಬಡತನಕ್ಕೆ ಹಲವು ಆಯಾಮಗಳು ಮತ್ತು ಮುಖಗಳಿವೆ. ಕಡಿಮೆ ಸಂಪಾದನೆ, ಕಡಿಮೆ ಮಟ್ಟದ ಕೌಶಲ್ಯ ಮತ್ತು ಶಿಕ್ಷಣ, ಆಸ್ತಿ ಇಲ್ಲದೆ ಇರುವುದು, ತರಬೇತಿ ಮತ್ತು ಶಿಕ್ಷಣಕ್ಕೆ ಆಸ್ಪದ ಇಲ್ಲದೆ ಇರುವುದು, ಅನಾರೋಗ್ಯ, ಸರಿಯಾದ ಆಹಾರ ಮತ್ತು ಸೂರು ಇಲ್ಲದೆ ಇರುವುದು ಇತ್ಯಾದಿಗಳು. ಆದರೆ ಇವು ಮುಖ್ಯ ಕಾರಣಗಳಲ್ಲ. ಪೋಷಕರಿಗೆ ಮಕ್ಕಳನ್ನು ಶಾಲೆಗೆ ಕಳುಹಿಸಬೇಕು ಎಂಬ ಮನಸ್ಸು ಇದ್ದರೆ ಬಡತನ ಅಡ್ಡಿ ಆಗುವುದಿಲ್ಲ. ಅವರಿಗೆ ಕಷ್ಟವಾಗುವುದು ಆದರೆ ಅಸಾಧ್ಯವಾದುದಲ್ಲ. ಹಲವಾರು ಸಂಶೋಧನೆಗಳು ಮತ್ತು ಮೌಲ್ಯಮಾಪನಗಳು ಇದನ್ನು ಸಾಬೀತು ಪಡಿಸಿವೆ.


**3.9.2 ಮಕ್ಕಳು ಕೆಲಸ ಮಾಡದಿದ್ದರೆ ಅವರು ಮತ್ತು ಅವರ ಕುಟುಂಬಗಳು ಉಪವಾಸ ಇರಬೇಕಾಗುವುದು**

ಕುಟುಂಬದ ಎಲ್ಲಾ ಸದಸ್ಯರು ಮತ್ತು ಮಕ್ಕಳು ಕೆಲಸ ಮಾಡಿ ಸಹ ಉಪವಾಸ ಇರಬೇಕಾದ ಸಂಭವ ಇರುತ್ತದೆ. ಆಹಾರದ ಲಭ್ಯತೆ ಹಲವಾರು ವಿಚಾರಗಳ ಮೇಲೆ ಅವಲಂಬಿತವಾಗಿದೆ. ಉಪವಾಸವು/ ಆಹಾರದ ಅಲಭ್ಯತೆಯು ಹಲವಾರು ವಿಷಯಗಳ ಸಮ್ಮಿಶ್ರವಾಗಿದೆ. ಅದು ಆಹಾರದ ಬೆಲೆ ಜನರ ಆದಾಯ, ಕೊಳ್ಳುವ ಶಕ್ತಿ, ಆಹಾರದ ಲಭ್ಯತೆ, ಆಹಾರಕ್ಕೆ ಸಂಪರ್ಕ, ಇತ್ಯಾದಿ ಅವಲಂಬಿಸಿದೆ.

**3.9.3 ಬಡಜನರಿಗೆ ಹೆಚ್ಚು ಮಕ್ಕಳು ಇರುವುದು ಬಾಲಕಾರ್ಮಿಕತೆಗೆ ಕಾರಣ.**

ಇದು ಸರಿಯಾದ ಮಾಹಿತಿ ಅಲ್ಲ. ದೇಶದ ಸಂಪತ್ತು ಅದರ ಜನಸಂಖ್ಯೆ. ಜನರಿಗೆ ಸರಿಯಾದ ಶಿಕ್ಷಣ ಕೊಟ್ಟು ಮತ್ತು ಅಭಿವೃದ್ಧಿ ಪಥ ತೋರಿಸಿದರೆ, ಅವರ ಅಭಿವೃದ್ಧಿ ಆಗುತ್ತದೆ. ಅದರಿಂದ ದೇಶದ ಸಂಪತ್ತು ಹೆಚ್ಚಾಗುತ್ತದೆ. ನಾವು ಹೆಚ್ಚಾಗಿ ಸಂಖ್ಯೆಯನ್ನು ಗಮನಿಸುತ್ತೇವೆ. ಆದರೆ ಈ ಸಂಖ್ಯೆಯಲ್ಲಿ ಇರುವ ಶಕ್ತಿಯನ್ನು ಗಮನಿಸುವುದಿಲ್ಲ.





**3.9.4 ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದಕ್ಕಿಂತ ಕೆಲಸಕ್ಕೆ ಕಳುಹಿಸಲು ಇಷ್ಟಪಡುತ್ತಾರೆ.**

ಇದು ತಪ್ಪು ಅಭಿಪ್ರಾಯ. ಸರ್ಕಾರೇತರ ಸಂಸ್ಥೆಗಳು ದೊಡ್ಡ ಸಂಖ್ಯೆಯಲ್ಲಿ ಮಕ್ಕಳನ್ನು ಕೆಲಸದಿಂದ ಬಿಡಿಸಿ ಶಾಲೆಗೆ ಸೇರಿಸಿರುವುದು ಇದಕ್ಕೆ ಸಾಕ್ಷಿ. ಸಾಮಾಜಿಕ ವ್ಯವಸ್ಥೆಯು ಪೋಷಕರು ಅವರ ಮಕ್ಕಳನ್ನು ಬಾಲಕಾರ್ಮಿಕತೆಗೆ ದೂಡುವಂತೆ ಪ್ರೋತ್ಸಾಹಿಸುತ್ತದೆ.

**3.9.5 ಮಕ್ಕಳಿಗೆ ಕೆಲಸ ಮಾಡಲು ಆಸೆ ಇದೆ.**


ಮಕ್ಕಳು ಕೆಲವೊಮ್ಮೆ ತಮಗೆ ಕೆಲಸಮಾಡಲು ಆಸಕ್ತಿ ಇದೆ ಎಂದು ತಿಳಿಸಬಹುದು. ಆದರೆ ಅವರಿಗೆ, ಅದರ ಬದಲಿನ ಅವಕಾಶ ಗೊತ್ತಿಲ್ಲದೆ ಇರುವುದರಿಂದ ಅವರು ಕೆಲಸ ಮಾಡುತ್ತೇವೆಂಬುದಾಗಿ ಹೇಳುತ್ತಾರೆ. ಶಿಕ್ಷಣಕ್ಕೆ ಅವರಿಗೆ ಆಸ್ಪದ ಇಲ್ಲದೆ ಇರುವುದರಿಂದ, ಶಾಲೆಯ ಪಾಠ ಪ್ರವಚನಗಳು ಅವರಿಗೆ ಆಸಕ್ತಿ ಮೂಡಿಸದೆ ಇರುವುದರಿಂದ ಹಾಗೂ ಶಾಲಾ ಶಿಕ್ಷಕರು ಇವರನ್ನು ಕಠೋರವಾಗಿ ನಡೆಸುವುದರಿಂದ, ಮಕ್ಕಳು ಕೆಲಸ ಮಾಡಲು ಹೋಗುತ್ತಾರೆ.

ಬಾಲಕಾರ್ಮಿಕತೆ ಸಮುದಾಯದ ಅನಾಸಕ್ತಿಯನ್ನು ಎತ್ತಿ ತೋರಿಸುತ್ತದೆ. ಮಕ್ಕಳಿಗೆ ಅವರ ಹಿರಿಯರ ಮೇಲೆ ನಂಬಿಕೆ ಇರುವುದಿಲ್ಲ. ಅವರಿಗೆ ಹಿರಿಯರು, ಪರಿಸ್ಥಿತಿಯನ್ನು ಬದಲಾಯಿಸುತ್ತಾರೆ ಎಂಬ ನಂಬಿಕೆ ಸಹ ಇರುವುದಿಲ್ಲಾ.

**3.9.6 ಮಕ್ಕಳನ್ನು ಅಪಾಯಕಾರಿ ಅಲ್ಲದ ಕೆಲಸದಲ್ಲಿ ತೊಡಗಿಸುವುದರಿಂದ ಯಾವುದೇ ತಪ್ಪಿಲ್ಲ.**

ಅಪಾಯಕಾರಿ ಎಂಬುದು ಚರ್ಚೆ ಮಾಡುವಂತಹ ವಿಚಾರ. ಮಕ್ಕಳಿಗೆ ಎಲ್ಲಾ ಕೆಲಸಗಳು ಅಪಾಯಕಾರಿ ಆಗಬಹುದು. ಯಾವುದೇ ಕೆಲಸವನ್ನು ಅನಾರೋಗ್ಯಕರ ಸನ್ನಿವೇಶದಲ್ಲಿ ಅಥವಾ ಹೆಚ್ಚು ಹೊತ್ತಿನವರೆಗೆ ಮಾಡಿದರೆ ಅದು ಅಪಾಯಕಾರಿ ಆಗಬಹುದು. ಮಕ್ಕಳಿಗೆ ಅವರ ಅಭಿವೃದ್ಧಿ, ಶಿಕ್ಷಣ, ಮನೋರಂಜನೆ, ವೈದ್ಯಕೀಯ ಸೌಲಭ್ಯ ಆಟ ಇತ್ಯಾದಿಗಳಿಂದ ವಂಚಿತರನ್ನಾಗಿ ಮಾಡುವುದು ಅಪಾಯಕಾರಿ ಆಗಬಹುದು.





**3.9.7 ಮಕ್ಕಳು ಕೆಲಸ ಮಾಡಿದರೆ ಅವರ ಕೌಶಲ್ಯ ಅಭಿವೃದ್ಧಿ ಆಗುತ್ತದೆ.**

ಮಕ್ಕಳಿಗೆ ಕೊಡುವ ಕೆಲಸಗಳು ಸರಳ ಮತ್ತು ಪುನರಾವರ್ತನೆ ಆಗಿರುತ್ತದೆ. ಉದಾ: ಲೆಟರ್ ಅಂಟಿಸುವುದು, ತುಂಬಿಸುವುದು, ರೋಲ್ ಮಾಡುವುದು, ತರುವುದು, ಹೊತ್ತುಕೊಂಡು ಹೋಗುವುದು ಇತ್ಯಾದಿ. ಇದರಲ್ಲಿ ಯಾವುದೇ ಕೌಶಲ್ಯ ಇರುವುದಿಲ್ಲ. ಮಕ್ಕಳು ಈ ಕೆಲಸವನ್ನು ಬಹಳ ಹೊತ್ತಿನವರೆಗೆ, ಅನಾರೋಗ್ಯಕರ ಸನ್ನಿವೇಶದಲ್ಲಿ ಮಾಡುತ್ತಾರೆ. ಕಷ್ಟಕರವಾದ ಭೌತಿಕ ಕೆಲಸ ಮತ್ತು ಜೊತೆಯಲ್ಲಿ ಧೂಳು, ಬೆಂಕಿ, ರಾಸಾಯನಿಕ ವಸ್ತುಗಳ ಸಂಪರ್ಕದಿಂದ ಮಕ್ಕಳ ಆರೋಗ್ಯ ಕೆಡುವುದೇ ಹೆಚ್ಚು.

**3.9.8 ಸಾಂಪ್ರದಾಯಿಕ ಕಲೆ ಮತ್ತು ಕಸುಬನ್ನು ಕಾಪಾಡಲು ಮಕ್ಕಳು ಕೆಲಸ ಮಾಡಬೇಕು.**

ಮಕ್ಕಳಿಗೆ ಅಂದರೆ ಬಾಲಕಾರ್ಮಿಕರಿಗೆ ಯಾರೂ ನಿಜವಾದ ಕಲೆ ಅಥವಾ ಕುಶಲ ಕೆಲಸವನ್ನು ಕಲಿಸಿ ಕೊಡುವುದಿಲ್ಲ. ಒಂದು ವೇಳೆ ಕುಟುಂಬದ ಕಲೆಗಳನ್ನು ಮಕ್ಕಳು ಕಲಿಯುವುದಿದ್ದರೆ ಅದು ಶಿಕ್ಷಣದ ಜೊತೆ ಆಗಬೇಕು.


**3.9.9 ಮಕ್ಕಳು ವೇಗವಾಗಿ ಕೆಲಸ ಮಾಡುತ್ತಾರೆ. ಅವರ ಪುಟ್ಟ ಕೈಗಳು ನಾಜೂಕು ಆದ ಕೆಲಸ ಮಾಡಲು ಅವಶ್ಯಕ.**

ಮಕ್ಕಳು ದೊಡ್ಡವರಿಗಿಂತ ಉತ್ತಮವಾಗಿ ಕೆಲಸ ಮಾಡುತ್ತಾರೆ ಎಂಬುದು ತಪ್ಪು ಕಲ್ಪನೆ. ಮಕ್ಕಳಿಗೆ ಕಲ್ಪನೆ ಇರುವುದಿಲ್ಲ. ಅವರು ಹೇಳಿ ಕೊಟ್ಟಿದ್ದನ್ನು ಮಾತ್ರ ಮಾಡುತ್ತಾರೆ. ದೊಡ್ಡವರಿಗೆ ಕಲ್ಪನೆ ಇರುತ್ತದೆ.

**3.9.10 ಮಕ್ಕಳು ಕೆಲಸ ಮಾಡದೆ ಇದ್ದರೆ, ಕೈಗಾರಿಕೆ ಬಿದ್ದು ಹೋಗುತ್ತದೆ.**

ಮಕ್ಕಳನ್ನು ಕೆಲಸಕ್ಕೆ ತೆಗೆದುಕೊಳ್ಳದಿದ್ದರೆ, ಆಗುವ ವೆಚ್ಚದ ಹೆಚ್ಚಳ ಬಹಳ ಕಡಿಮೆ. ಇದನ್ನು ಕೈಗಾರಿಕೆಗೆ ಭರಿಸಲು ಆಸ್ಪದ ಇದೆ. ಅವರಿಗೆ ಲಾಭ ಸ್ವಲ್ಪ ಕಡಿಮೆ ಆಗಬಹುದು.





**3.9.11 ಬಾಲಕಾರ್ಮಿಕರು ತಯಾರಿಸಿದ ವಸ್ತುಗಳ ಮೇಲೆ ಜಾಗತಿಕವಾಗಿ ಬ್ಯಾನ್ ಹಾಕಿದರೆ, ಬಾಲಕಾರ್ಮಿಕರನ್ನು ನೇಮಿಸಿಕೊಳ್ಳುವುದು ನಿಲ್ಲುತ್ತದೆ ಮತ್ತು ಮಕ್ಕಳ ಹಕ್ಕುಗಳನ್ನು ಕಾಪಾಡಲು ಸಾಧ್ಯಾಗುತ್ತದೆ.**

ಬಾಲಕಾರ್ಮಿಕತೆ ನಮ್ಮ ದೇಶದ ರಾಷ್ಟ್ರೀಯ ಸಮಸ್ಯೆ. ಸುಮಾರು 8% ಬಾಲಕಾರ್ಮಿಕ ಮಕ್ಕಳು ರಫ್ತು ಉದ್ಯಮದಲ್ಲಿ ಕೆಲಸ ಮಾಡುತ್ತಿದ್ದಾರೆ. ಮಾನವ ಹಕ್ಕುಗಳನ್ನು ವ್ಯಾಪಾರದ ಜೊತೆಯಲ್ಲಿ ಸಂಬಂಧ ಕಲ್ಪಿಸುವುದರಿಂದ ಅಭಿವೃದ್ಧಿ ಹೊಂದಿದ ದೇಶಗಳಿಗೆ ಹೆಚ್ಚು ಲಾಭವಾಗುತ್ತದೆ. ಈ ಸಾಮಾಜಿಕ ಕಳಕಳಿ ಮತ್ತು ನಿಷೇಧ ಬಾಲಕಾರ್ಮಿಕ ಮಕ್ಕಳ ಪುನರ್ವಸತಿ ಬಗ್ಗೆ ಏನೂ ಹೇಳುವುದಿಲ್ಲ ಮತ್ತು ಅವರ ಕಮಿಟ್‌ಮೆಂಟ್ ಇರುವುದಿಲ್ಲ.

**3.9.12 ಬಾಲಕಾರ್ಮಿಕತೆಯನ್ನು ನಿರ್ಮೂಲನೆ ಮಾಡಲು ಬಾಲಕಾರ್ಮಿಕ ನಿಷೇಧ ಕಾನೂನುಗಳು ಸಾಕು.**


ಬಾಲಕಾರ್ಮಿಕತೆಯ ನಿಷೇಧದ ಬಗ್ಗೆ ಕಾನೂನುಗಳು ಸಮಸ್ಯೆಗಳನ್ನು ಸಂಕೀರ್ಣಗೊಳಿಸಿ ಬಾಲಕಾರ್ಮಿಕತೆಯನ್ನು ಕಾನೂನು ಬದ್ಧಗೊಳಿಸುವ ಸಂಭವ ಇದೆ.


ಹಲವಾರು ಕಾನೂನುಗಳನ್ನು ಜಾರಿಗೊಳಿಸಿ, ಅದನ್ನು ಅನುಷ್ಠಾನ ಮಾಡಲು ಕ್ರಮ ತೆಗೆದುಕೊಳ್ಳದ ಪರಿಸ್ಥಿತಿ ಇದ್ದರೆ ಅದರಿಂದ ಏನೂ ಲಾಭವಾಗುವುದಿಲ್ಲ. ಸರ್ಕಾರ ಕಡ್ಡಾಯ ಪ್ರಾಥಮಿಕ ಶಿಕ್ಷಣ ಅನುಷ್ಠಾನದಲ್ಲಿ ಸಂಪೂರ್ಣವಾಗಿ ವಿಫಲಗೊಂಡಿದೆ (6–14 ವಯೋಮಿತಿ). ಹಲವಾರು ರಾಜ್ಯಗಳು ಶಿಕ್ಷಣ ಸೌಕರ್ಯಗಳನ್ನು ಒದಗಿಸುವಲ್ಲಿ ಉತ್ತಮ ಕೆಲಸ ಮಾಡಿವೆ. ಆದರೆ ಇದರಿಂದ ಶಾಲೆ ಬಿಡುವ ಮಕ್ಕಳ ಸಂಖ್ಯೆಯನ್ನು ತೊಡೆದು ಹಾಕಲು ಸಾಧ್ಯವಾಗಲಿಲ್ಲ.

**3.9.13 ಬಾಲಕಾರ್ಮಿಕತೆಯನ್ನು ತೊಡೆದು ಹಾಕಲು ಸಾಧ್ಯವಿಲ್ಲ.**

ಈ ಬಗ್ಗೆ ಇರುವ ಕೆಲಸ ದೊಡ್ಡದು. ಆದರೆ ಸಾಧಿಸಲಾಗದ ಕಾರ್ಯವಲ್ಲ. ಇದು ಬೃಹತ್ ಕೆಲಸ ಅಥವಾ ಹೊರೆಯ ಕೆಲಸವಲ್ಲ. ಸಮಸ್ಯೆಯ ನಿವಾರಣೆಗೆ ಸಂಪನ್ಮೂಲದ ಕೊರತೆ ಅಲ್ಲ. ಆದರೆ ಕೊರತೆ ಇರುವುದು ನಿಜವಾದ ಆಸಕ್ತಿ ಮತ್ತು ರಾಜಕೀಯ ಇಚ್ಛಾ ಶಕ್ತಿ.

ಬಾಲಕಾರ್ಮಿಕತೆಯ ನಿರ್ಮೂಲನೆ ಯಾಂತ್ರಿಕ ಕ್ರಿಯೆಯಲ್ಲ. ಯಾಂತ್ರಿಕ ಕ್ರಿಯೆಯಾದರೆ ಸಾಧಿಸುವುದು ಸುಲಭ. ಆದರೆ ಇದು ಮಾನವರು ಮತ್ತು ಮಾನವರ ಯೋಜನೆಗೆ ಸಂಬಂಧಿಸಿದ್ದು. ಮಕ್ಕಳನ್ನು ನಾವು ಮನಷ್ಯರಾಗಿ ಕಾಣಬೇಕು. ಮಕ್ಕಳ ಹಕ್ಕುಗಳನ್ನು ಗುರುತಿಸುವ ಕಾಲ ಕೂಡಿಬಂದಿದೆ.





## 3.10 ಬಾಲಕಾರ್ಮಿಕ ನಿಷೇಧ ಮತ್ತು ನಿಯಂತ್ರಣ ಕಾನೂನು 1986 ರ ಪ್ರಕಾರ ಬಾಲಕಾರ್ಮಿಕತೆಯನ್ನು ನಿಷೇಧ ಮಾಡಿದ ಕೆಲಸಗಳ ಮತ್ತು ಪ್ರಕ್ರಿಯೆಗಳ ಪಟ್ಟಿ

1. ಪ್ರಯಾಣಿಕರನ್ನು ಅಥವಾ ಸಾಮಗ್ರಿಗಳನ್ನು ಸಾಗಿಸುವ ಪ್ರಕ್ರಿಯೆ.
2. ಬೂದಿಯನ್ನು ಹೆಕ್ಕುವುದು, ಬೂದಿಗುಂಡಿಯನ್ನು ಸ್ವಚ್ಛ ಮಾಡುವುದು, ರೈಲು ವ್ಯವಸ್ಥೆಯ ಹತ್ತಿರ ನಿರ್ಮಾಣ ಕಾರ್ಯದಲ್ಲಿ ತೊಡಗುವುದು.
3. ರೈಲ್ವೆ ನಿಲ್ದಾಣದಲ್ಲಿ ಕೆಟರಿಂಗ್ ಕೆಲಸದಲ್ಲಿ ತೊಡಗುವುದು, ಒಂದು ಪ್ಲಾಟ್ ಫಾರಂನಿಂದ ಇನ್ನೊಂದು ಪ್ಲಾಟ್ ಫಾರಂಗೆ ಹೋಗಿ ತಿಂಡಿ ಮಾರುವುದು, ಓಡುತ್ತಿರುವ ರೈಲಿನಲ್ಲಿ ತಿಂಡಿ ಮಾರುವುದು, ರೈಲಿಗೆ ಹತ್ತಿ ಇಳಿದು ತಿಂಡಿ / ಸಾಮಾನು ಮಾರುವುದು.
4. ರೈಲ್ವೆಗೆ ಹತ್ತಿರವಾಗಿ ರೈಲ್ವೆ ಸ್ಟೇಷನ್ ನಿರ್ಮಾಣ ಅಥವಾ ಯಾವುದೇ ನಿರ್ಮಾಣ ಕಾರ್ಯದಲ್ಲಿ ಭಾಗವಹಿಸುವುದು.
5. ಬಂದರು ಪ್ರಾಧಿಕಾರದ ಯಾವುದೇ ಬಂದರು ಪ್ರದೇಶದಲ್ಲಿ.
6. ತಾತ್ಕಾಲಿಕವಾಗಿ ಮಾರಾಟದ ಪರವಾನಗಿ ಇರುವ ಅಂಗಡಿಗಳಲ್ಲಿ / ಪಠಾಕಿ ಸಿಡಿ ಮದ್ದುಗಳನ್ನು ಮತ್ತು ಸ್ಫೋಟಕಗಳನ್ನು ಮಾರುವುದು.
7. ಪ್ರಾಣಿಗಳ
8. ಆಟೋ ಮೊಬೈಲ್ ಗ್ಯಾರೇಜುಗಳಲ್ಲಿ
9. ಫೌಂಡ್ರಿಗಳಲ್ಲಿ
10. ಅಮಲು ಪದಾರ್ಥಗಳ ತಯಾರಿ, ಬೆಂಕಿ ಹಿಡಿಯಬಹುದಾದ ವಸ್ತುಗಳ ಮತ್ತು ಸ್ಫೋಟಗೊಳಿಸುವ ವಸ್ತುಗಳ ಉತ್ಪಾದನೆಯಲ್ಲಿ
11. ಕೈಮಗ್ಗ ಮತ್ತು ಯಾಂತ್ರಿಕ ಮಗ್ಗಗಳಲ್ಲಿ
12. ನೀರಿನ ಕೆಳಗೆ ಅಥವಾ ಭೂಮಿ ಕೆಳಗೆ ಇರುವ ಗಣಿಗಳಲ್ಲಿ ಮತ್ತು ಭಟ್ಟಿಗಳಲ್ಲಿ
13. ಪ್ಲಾಸ್ಟಿಕ್ ಮತ್ತು ಫೈಬರ್ ಗ್ಲಾಸ್ ಘಟಕಗಳಲ್ಲಿ
14. ಮನೆಕೆಲಸದವರಾಗಿ
15. ಹೋಟೆಲು, ಡಾಭಾಗಳು, ಟೀ ಅಂಗಡಿ, ರೆಸಾರ್ಟಗಳು, ಇತರೆ ಮನರಂಜನಾ ಪರಿಸರಗಳಲ್ಲಿ




### 3.10.1 ನಿಷೇಧಿಸಲ್ಪಟ್ಟ ಪ್ರಕ್ರಿಯೆಗಳು

1. ಬೀಡಿ ತಯಾರಿ
2. ರತ್ನಗಂಬಳಿ, ಕಾರ್ಪೆಟ್ ನೇಯ್ಗೆ ಮತ್ತು ಅದಕ್ಕೆ ಸಂಬಂಧಪಟ್ಟ ಪ್ರಕ್ರಿಯೆಗಳು.
3. ಸಿಮೆಂಟ್ ತಯಾರಿ, ಸಿಮೆಂಟನ್ನು ಚೀಲಕ್ಕೆ ತುಂಬುವುದು.
4. ಬಟ್ಟೆಯ ಅಚ್ಚು ಹಾಕುವಿಕೆ, ಬಣ್ಣ ಹಾಕುವುದು, ನೇಯ್ಗೆ ಮತ್ತು ಇವುಗಳ ಸಂಬಂಧಿ ಕೆಲಸಗಳು.
5. ಬೆಂಕಿಪೊಟ್ಟಣ, ಸಿಡಿ ಮದ್ದುಗಳ, ಸ್ಫೋಟಕಗಳ ತಯಾರಿ.
6. ಮೈಕಾ ಕತ್ತರಿಸುವುದು ಮತ್ತು ತುಂಡು ಮಾಡುವುದು, ಒಡೆಯುವುದು.
7. ಶಾಂಪೂ ತಯಾರಿ.
8. ಸೋಪ್ ತಯಾರಿ.
9. ಟ್ಯಾನಿಂಗ್ (ಚರ್ಮ ಹದ ಗೊಳಿಸುವುದು).
10. ಕಟ್ಟಡ ನಿರ್ಮಾಣ.
11. ಕಡ್ಡಿ ತಯಾರಿಕೆಯಲ್ಲಿ.
12. ಎಗೇಟ್‌ನಿಂದ ತಯಾರಿಸುವ ವಸ್ತುಗಳ ತಯಾರಿಕೆಯಲ್ಲಿ
13. ಲೆಡ್, ಪಾದರಸ, ಮ್ಯಾಂಗನೀಸ್, ಕ್ರೋಮಿಯಮ್, ಕ್ಯಾಡ್‌ಮಿಯಮ್, ಬೆಂಜೀನ್, ಕ್ರಿಮಿನಾಶಕಗಳು, ಕರ್‍ನಾಡು ಮುಂತಾದವುಗಳ ತಯಾರಿಕೆಯಲ್ಲಿ.
14. ಫ್ಯಾಕ್ಟರಿ ಕಾನೂನು ಸೆಕ್ಷನ್ 2 (ಸಿಬಿ) ಯಲ್ಲಿ ಸೂಚಿಸಿದ ಅಪಾಯಕಾರಕ ಪ್ರಕ್ರಿಯೆಗಳ ಮತ್ತು ಸೆಕ್ಷನ್ 87 ರಲ್ಲಿ ಸೂಚಿಸಿದ ಅಪಾಯದ ಕೆಲಸಗಳು.
15. ಉಣ್ಣೆಯನ್ನು ಶುಚಿಗೊಳಿಸುವ ಪ್ರಕ್ರಿಯೆ.
16. ಫ್ಯಾಕ್ಟರಿ ಕಾನೂನು ಸೆಕ್ಷನ್ 2 (ಕೆ) (4) ರಲ್ಲಿ ಸೂಚಿಸಿ ಪ್ರಿಂಟಿಂಗ್
17. ಗೇರು ಬೀಜದ ತಿರುಳನ್ನು ತೆಗೆಯುವ ಪ್ರಕ್ರಿಯೆ.
18. ಬೆಸುಗೆ ಹಾಕುವುದು (ಇಲೆಕ್ಟ್ರಾನಿಕ್ ಉದ್ದಿಮೆಗಳಲ್ಲಿ).
19. ಅಗರ ಬತ್ತಿ ತಯಾರಿ.
20. ಆಟೋಮೊಬೈಲ್ ರಿಪೇರಿ ಮತ್ತು ವೆಲ್ಡ್ ಮಾಡುವುದು, ಲೇತ್ ಕೆಲಸಗಳು, ಪೇಂಟ್ ಮಾಡುವುದು, ಬೆಂಡ್ ತೆಗೆಯುವುದು.
21. ಇಟ್ಟಿಗೆ ಮತ್ತು ಹಂಚಿನ ಗೂಡುಗಳಲ್ಲಿ.
22. ಹತ್ತಿ ಜಿನ್ನಿಂಗ್ ಪ್ರಕ್ರಿಯೆ ಉದ್ದಿಮೆಗಳಲ್ಲಿ.
23. ಡಿಟರ್‌ಜೆಂಟ್ ಉದ್ದಿಮೆಗಳಲ್ಲಿ.
24. ಫ್ಯಾಬ್ರಿಕೇಶನ್ ಉದ್ದಿಮೆಗಳಲ್ಲಿ.
25. ಹರಳು (ಜೆಮ್) ಕತ್ತರಿಸುವುದು.
26. ಕ್ರೋಮೈಟ್ ಮತ್ತು ಮ್ಯಾಂಗನೀಸ್ ಅದಿರು ಗಣಿಗಳಲ್ಲಿ ಮತ್ತು ಅವುಗಳ ಸಾಗಾಟ.
27. ಜ್ಯೂಟ್ ಉದ್ದಿಮೆಗಳಲ್ಲಿ ಮತ್ತು ನಾರು ತಯಾರಿಕಾ ಘಟಕಗಳಲ್ಲಿ



28. ಸುಣ್ಣದ ಗೂಡುಗಳಲ್ಲಿ.
29. ಬೀಗ ತಯಾರಿಕೆಯಲ್ಲಿ.
30. ಲೆಡ್ ಅನ್ನು ಒಳಗೊಂಡ ತಯಾರಿಕೆಯಲ್ಲಿ / ಪ್ರಕ್ರಿಯೆಗಳಲ್ಲಿ
31. ಸಿಮೆಂಟ್ ಪೈಪ್‌ಗಳ ತಯಾರಿ, ಸಿಮೆಂಟ್‌ನ ಇತರ ವಸ್ತು ಮತ್ತು ಅದಕ್ಕೆ ಸಂಬಂಧಪಟ್ಟ ಉದ್ದಿಮೆ.
32. ಗ್ಲಾಸ್ ತಯರಿ, ಗ್ಲಾಸ್ ಉಪಕರಣಗಳು, ಬಳೆಗಳು ಇತ್ಯಾದಿ
33. ಬಣ್ಣಗಳ ತಯಾರಿ
34. ಕ್ರಿಮಿನಾಶಕಗಳ ತಯಾರಿ ಮತ್ತು ಅವುಗಳನ್ನು ಹ್ಯಾಂಡಲ್ ಮಾಡುವುದು.
35. ಮೆಟಲ್ ಶುಚಿಗೊಳಿಸುವುದು, ಪೊಟ್ ಇನ್‌ಗ್ರೇವಿಂಗ್
36. ಕಲ್ಲಿದ್ದಲು ಕೈಗಾರಿಕೆ.
37. ಚರ್ಮ, ರಾಸಾಯನಿಕ ವಸ್ತುಗಳು, ಸಿಂಥೆಟಿಕ್ ವಸ್ತುಗಳನ್ನು ಒಳಗೊಂಡ ಆಟೋಟ ಸಾಮಗ್ರಿಗಳು.
38. ಪ್ಲಾಸ್ಟಿಕ್ ಮತ್ತು ಫೈಬರ್ ಗ್ಲಾಸಿನ ಅಚ್ಚಿನಲ್ಲಿ
39. ಎಣ್ಣೆ ತಯಾರಿ ಮತ್ತು ರಿಫೈನರಿಗಳಲ್ಲಿ
40. ಕಾಗದ ತಯಾರಿ
41. ಮಡಿಕೆ ಮತ್ತು ಸೆರಾಮಿಕ್ ಉದ್ದಿಮೆ.
42. ಹಿತ್ತಾಳೆಯ ಪಾಲಿಶ್, ತುಂಡು ಮಾಡುವುದು ಮತ್ತು ವೆಲ್ಡ್ ಮಾಡುವ ಉದ್ದಿಮೆಗಳಲ್ಲಿ.
43. ಯಾಂತ್ರಿಕೃತ ಕೃಷಿಯಲ್ಲಿ (ಟ್ರ್ಯಾಕ್ಟರ್, ಹಾರ್ವೆಸ್ಟಿಂಗ್ ಯಂತ್ರ)
44. ಮರ ಕತ್ತರಿಸುವ ಮಿಲ್ಲುಗಳಲ್ಲಿ
45. ರೇಷ್ಮೆ ತಯಾರಿ / ಪ್ರಕ್ರಿಯೆ
46. ಹೊಗೆಸೊಪ್ಪಿನ ಉದ್ದಿಮೆ
47. ಕಲ್ಲು ತುಂಡು ಮಾಡುವುದು, ಪುಡಿ ಮಾಡುವುದು.
48. ಟೈರುಗಳ ತಯಾರಿ, ರಿಪೇರಿ, ರಿಟ್ರೇಡಿಂಗ್, ಇತ್ಯಾದಿ
49. ಪಾತ್ರೆಗಳ ತಯಾರಿ, ಪಾಲಿಶ್ ಮಾಡುವುದು ಇತ್ಯಾದಿ
50. ಜರಿ ತಯಾರಿ
51. ಗ್ರಾನೈಟ್ ಪ್ರಕ್ರಿಯೆ ಮತ್ತು ಅದಕ್ಕೆ ಸಂಬಂಧಪಟ್ಟ ಕೆಲಸಗಳು
52. ಇಲೆಕ್ಟ್ರೋ ಪ್ಲೇಟಿಂಗ್
53. ಗ್ರೈಂಡಿಂಗ್ ಮತ್ತು ಮೆಟಲ್‌ಗಳನ್ನು ಹೊಳಪು ಬರಿಸುವುದು.
54. ವಜ್ರದ ಕಟಿಂಗ್ ಮತ್ತು ಹೊಳಪು ಬರಿಸುವುದು.
55. ಗಣಿಗಳಿಂದ ಸ್ಲೇಟ್ ತೆಗೆಯುವುದು.
56. ಕಸ ಹೆಕ್ಕುವುದು.
57. ಶೌಚಾಲಯ ಶುಚಿ ಮಾಡುವುದು.





## 3.11 ಸ್ನೇಹ ಸೂಚಕ ಪಟ್ಟಿ





**ಮುಖವಾಡ ಉಪಯೋಗಿಸಲು ಸೂಚನೆಗಳು**

- ಮುಖವಾಡಗಳು ಸಾಮಾನ್ಯ ಮನುಷ್ಯನ ಮುಖದ ಅಳತೆಗಳಲ್ಲಿವೆ.
- ಮುಖವಾಡಗಳನ್ನು ಉಪಯೋಗಿಸುವ ಮೊದಲು ಕಣ್ಣಿನ ಹಾಗೂ ಮೂಗಿನ ಭಾಗವನ್ನು ಕತ್ತರಿಸಿ ತೆಗೆಯಿರಿ.
- ಮುಖವಾಡಗಳಿಗೆ ದಾರಗಳನ್ನು ಹಾಕಿ ಅದನ್ನು ಕಟ್ಟಿಕೊಳ್ಳಲು ಅನುಕೂಲವಾಗುವಂತೆ ರಂಧ್ರಗಳನ್ನು ಮಾಡಲಾಗಿದೆ.
- ಮುಖವಾಡಗಳು ಎಲ್ಲಾ ವ್ಯಕ್ತಿಗಳ ಮುಖಕ್ಕೂ ಹೊಂದಿಕೊಳ್ಳುವಂತಿದೆ.



## ಬಾಲಕಾರ್ಮಿಕ ಮಗುವಿನ ಮುಖವಾಡ



## 3.12 ಸಂತೋಷದಿಂದಿರುವ ಮಗುವಿನ ಮುಖವಾಡ




## 3.13 ಕೃತಜ್ಞತೆಗಳು


- ಅನುಷ್ಠಾನಾಧಿಕಾರಿಗಳ ಕೈಪಿಡಿ – ಡಾ॥ ಎಂ.ಸಿ.ಆರ್ ಮಾನವ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ. ಹೈದರಾಬಾದ್, ಆಂಧ್ರಪ್ರದೇಶ
- ಕಾರ್ಮಿಕ ಆಡಳಿತ ಮತ್ತು ಅನೌಪಚಾರಿಕ ಆರ್ಥಿಕ ವ್ಯವಸ್ಥೆಯಲ್ಲಿ ಬಾಲಕಾರ್ಮಿಕತೆಯ ಪರಿವೀಕ್ಷಣೆ. ಶ್ರೀ ಸಂಜೀವ ಕುಮಾರ್
- ಕಾರ್ಮಿಕ ಸಂಘಗಳ ನಾಯಕರ ಕೈಪಿಡಿ
- ಕೃಷಿರಂಗದ ಅಪಾಯಕಾರಿ ಬಾಲಕಾರ್ಮಿಕತೆ ನಿರ್ಮೂಲನೆಯ ತರಬೇತಿ ಕೈಪಿಡಿ – ಐ.ಎಲ್.ಓ. ಪ್ರಕಟಣೆ
- ಮಗು ಮತ್ತು ಕಾನೂನು – ಗೀತಾ ರಾಮಸ್ವಾಮಿ, ಆಂಧ್ರಪ್ರದೇಶ ಜುಡಿಷಿಯಲ್ ಅಕಾಡೆಮಿ




## 3.14 ಬಾಲಕಾರ್ಮಿಕ ರಹಿತ ಕರ್ನಾಟಕ – ಒಂದು ವಿಷನ್




ಬಾಲಕಾರ್ಮಿಕ ರಹಿತ ರಾಜ್ಯ
(ಶಾಲೆಯಿಂದ ಹೊರಗಿರುವ ಎಲ್ಲಾ ಮಕ್ಕಳು ಸಂಭಾವನೀಯ ಬಾಲಕಾರ್ಮಿಕರು)

- ಎಲ್ಲಾ ಮಕ್ಕಳು ಶಾಲಯಲ್ಲಿ ಇರಬೇಕು. ( ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ)
- ಎಲ್ಲರಿಗೂ ಕೌಶಲ್ಯಭರಿತ ಮತ್ತು ಉತ್ತಮ ಕೆಲಸಗಳು
- ಎಲ್ಲರಿಗೂ ಬಡತನ ಮತ್ತು ಅವಶ್ಯಕತೆಗಳಿಂದ ಸ್ವಾತಂತ್ರ್ಯ

ಈ ಕೆಳಗಿನವುಗಳು ಅತ್ಯಂತ ಕನಿಷ್ಠ ಇರುವಂತೆ ನೋಡಿಕೊಳ್ಳುವುದು.

✦ಬಾಲಕಾರ್ಮಿಕ ನಿರ್ಮೂಲನೆಗೆ ಸಂಬಂಧಪಟ್ಟಂತೆ ಉದ್ದೇಶಗಳು.
✦ಸಮಸ್ಯೆಯ ಸ್ವರೂಪಗಳು.
✦ಟಾರ್ಗೆಟ್ ಗುಂಪಿನ ಗುರುತಿಸುವಿಕೆ
✦ಬಾಲಕಾರ್ಮಿಕತೆಯ ಬೇಡಿಕೆ ಹಾಗೂ ಪೂರೈಕೆ ಬಗ್ಗೆ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳು.
✦ಪ್ರತಿಯೊಂದು ರೀತಿಯ ಬಾಲಕಾರ್ಮಿಕತೆಯನ್ನು ನಿರ್ಮೂಲನಗೊಳಿಸಲು ಪ್ರಕ್ರಿಯೆಗಳು.

- ಯೋಜನೆ ತಯಾರಿಸಲು, ಅನುಷ್ಠಾನ ಮಾಡಲು, ಮೇಲ್ವಿಚಾರಣೆ ನಡೆಸಲು, ದಾಖಲೀಕರಣ ಗೊಳಿಸಲು ಮತ್ತು ಮೌಲ್ಯಮಾಪನ ಮಾಡಲು ಸಾಂಸ್ಥಿಕ ವ್ಯವಸ್ಥೆ.
- ಅನುಷ್ಠಾನ ಮತ್ತು ಬಾಲ ಕೆಲಸಗಾರರ ಬಿಡುಗಡೆ
- ಸಮುದಾಯವನ್ನು ಒಟ್ಟು ಸೇರಿಸುವಿಕೆ, ಅರಿವಿನ ಹೆಚ್ಚಳ ಎಲ್ಲಾ ಹಂತದ ಭಾಗೀದಾರರೊಂದಿಗೆ ಸಮಾಲೋಚನೆ ಮತ್ತು ಅವರ ಕೆಪಾಸಿಟಿ ಹೆಚ್ಚಳ.
- ಬಾಲಕಾರ್ಮಿಕ ಕುಟುಂಬಗಳ ಜೀವನಾಧಾರ ಹೆಚ್ಚಳಕ್ಕೆ ಅಭಿವೃದ್ಧಿ ಕಾರ್ಯಕ್ರಮಗಳ ಕ್ರೋಢಿಕರಣ.
- ಬಾಲಕಾರ್ಮಿಕ ಕುಟುಂಬಗಳ ಶಿಕ್ಷಣ, ಆರೋಗ್ಯ, ಕೌಶಲ್ಯ ಮತ್ತು ಕೆಲಸಗಳ ಮಟ್ಟದ ಹೆಚ್ಚಳಿಕೆ ಪ್ರಯತ್ನ
- ಬಾಲಕಾರ್ಮಿಕರಾಗುವುದನ್ನು ತಡೆಗಟ್ಟುವುದು ಮತ್ತು ಮನಪರಿವರ್ತನೆ.

